# ಬೆಳದಿಂಗಳ ಹಕ್ಕಿ

# ಪಿ. ಕಾಳಿಂಗರಾವ್



ಜಯಶ್ರೀ ಅರವಿಂದ್

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
ನಂ. 14/3, ಕೆನರಾ ಫೈನಾನ್ಸ್ ಕಾರ್ಪೊರೇಷನ್ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು - 560 001

# ಬೆಳದಿಂಗಳ ಹಕ್ಕಿ
# ಪಿ. ಕಾಳಿಂಗರಾವ್

ಲೇಖಕಿ :
ಜಯಶ್ರೀ ಅರವಿಂದ್



ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
14/3 ಕೆನರಾ ಫೈನಾನ್ಸ್ ಕಾರ್ಪೋರೇಷನ್ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು- 560001

**BELADINGALA HAKKI P. KALINGA RAO**
Written by Jayashree Aravind, No. 607, 3rd Cross,
5th Main, Hanumanthnagar, Bangalore - 560 019.

First Edition : 1999

Chief Editor : Sugganahalli Shadakshari

Published by : **Balawant Rao Patil**
Registrar, Karnataka Sangeetha Nrithya Academy
14/3, Canara Finance Corporation Bldg.,
Nrupatunga Road, Bangalore-560 001

Cover Page Designed by : SHUBHA, Bangalore

**Price : 40/-**

Printed at :
**Sree Ranga Printers & Binders**
# 242, 7th Cross, 10th Main
Sri Ramanjaneya Road, Hanumanthnagar
Bangalore - 560 019 **Ph : 6679333**

# ಅಧ್ಯಕ್ಷರ ನುಡಿ

ಕರ್ನಾಟಕದ ಸುಗಮ ಸಂಗೀತ ಶೈಲಿಯ ಸೃಷ್ಟಿಕರ್ತನೆಂದೇ ಗೌರವಿಸಲ್ಪಡುವ ಕನ್ನಡ ಕೋಗಿಲೆ ಪಿ. ಕಾಳಿಂಗರಾವ್ ಅವರು 20ನೇ ಶತಮಾನದ ಮಹಾನ್ ಗಾಯಕರಲ್ಲಿ ಒಬ್ಬರು. ಶಾಸ್ತ್ರೀಯ ಸಂಗೀತದ ಭದ್ರ ಬುನಾದಿಯ ಮೇಲೆ ತಮ್ಮ ಗಾಯನದ ಮಹಲನ್ನು ಎತ್ತರಕ್ಕೇರಿಸಿ ಮುಗಿಲು ಮುಟ್ಟುತ್ತಾ, ಜನರ ಹೃದಯವನ್ನೂ ಮುಟ್ಟಿ ಹಾಡಿದ ಗಾಯಕರಿವರು. ಕನ್ನಡ ನಾಡಿನ ಸುಗಮ ಸಂಗೀತದ ವಸಂತ ಪೌರ್ಣಿಮೆಯೋಪಾದಿಯ ಆ 'ಸಾತ್ವಿಕ' ಯುಗದಲ್ಲಿ ಹಾಡಿ ವಿವರಿಸಿದ ಈ ಕೋಗಿಲೆಯನ್ನು, ನಾದಪೂರಿತ ಭಾವನಾತ್ಮಕ ಗೀತೆಗಳ ಸದಭಿರುಚಿಯನ್ನು ಕೇಳುಗರಲ್ಲಿ ಬೆಳೆಸಿದ ಸಾಧಕ ಬ್ರಹ್ಮನೆಂದೇ ಕರೆಯಬಹುದು.

ಕಲಾವಿದರು ನಾಮಾಂಕಿತರಾಗುವುದು ಅವರ ಶೈಲಿಯ ಜನಪ್ರಿಯವಾಗಿ, ಅವರಿಂದ ಶ್ರೋತೃಗಳು ಭ್ರಾಂತರಾದಾಗ.... ಅವರಿಂದ ಮುಂದಿನ ಪೀಳಿಗೆಗೆ ಸ್ಫೂರ್ತಿ ದೊರೆಯುವಂತಾದಾಗ. ಈ ಎರಡೂ ಲಕ್ಷಣಗಳು ಕಾಳಿಂಗರಾಯರಲ್ಲಿದ್ದವು. ಆದರೆ ಜನತೆ ಕಲಾವಿದನನ್ನು ವ್ಯಕ್ತಿಪೂಜೆಯ ವೈಭವಕ್ಕೇರಿಸಿದಾಗ ಅವರ ಜೀವನದ ನೈಜಕತೆ, ಅವರು ಪಟ್ಟಪಾಡು, ಅವರ ಸಾಧನೆಯ ಹಾದಿ-ಮುಂತಾದುವುಗಳನ್ನು ಮರೆಯುವ ಸಾಧ್ಯತೆಯಿದೆ. ಈ ಕೊರತೆಯನ್ನು ನೀಗಿಸಲು ಮಾಡಿರುವ ನಮ್ಮ ಪುಟ್ಟ ಪ್ರಯತ್ನದ ಫಲವೇ ಈ 'ಬೆಳದಿಂಗಳ ಹಕ್ಕಿ'.

ಲೇಖಕಿ ಜಯಶ್ರೀ ಅರವಿಂದ್ ಅವರು ಸ್ವತಃ ಗಾಯಕಿ ಹಾಗೂ ಅಧ್ಯಯನ ನಿರತೆಯಾಗಿದ್ದಾರೆ. ಕಾಳಿಂಗರಾಯರ ಹಾಡುಗಳ ಬಗ್ಗೆ ತುಂಬಾ ಮಾಹಿತಿ ದೊರಕುತ್ತದೆ; ಆದರೆ ಅವರ ಜೀವನದ ಬಗ್ಗೆ ನಿಕಟವಾಗಿ ತಿಳಿದವರು ವಿರಳ. ಇಂತಹವರನ್ನು ಹುಡುಕಿಕೊಂಡು ಹೋಗಿ ಜಯಶ್ರೀಯವರು ಅನೇಕ ವಿಷಯವನ್ನು ಸಂಗ್ರಹಿಸಿದ್ದಾರೆ. ಇದೊಂದು ಪ್ರಾಮಾಣಿಕ ಪ್ರಯತ್ನ; ಯಶಸ್ವಿಯಾಗಿದೆ. ಯಾವುದೇ ಆಧಾರಗ್ರಂಥದ ಆಸರೆಯಿಲ್ಲದೆ, ಸ್ವತಂತ್ರ ವಿಷಯ ಸಂಗ್ರಹದಿಂದ ಮೂಡಿಬಂದ ಈ ಕಿರುಗ್ರಂಥ ಚರಿತ್ರೆ-ಕಾದಂಬರಿಗಳ ರೂಪದಲ್ಲಿ ಓದಿಸಿಕೊಂಡು ಹೋಗುತ್ತದೆ. ''ಕಲಾವಿದನನ್ನು ಹಲವು ಮುಖಗಳ ಹೆಣಿಗೆಯ ದಾರ್ಶನಿಕ ಆದರ್ಶದಲ್ಲಿ ಕಂಡುಕೊಳ್ಳುವ'' ಲೇಖಕಿಯ ಆಶಯ ನಿಜಕ್ಕೂ ಅಭಿನಂದನೀಯ. ಈ ಪುಸ್ತಕಕ್ಕೆ ಅತ್ಯವಶ್ಯವಾಗಿರುವ ಮಾಹಿತಿಗಳನ್ನೂ, ಭಾವಚಿತ್ರಗಳನ್ನೂ ಒದಗಿಸಿಕೊಟ್ಟ ಕಾಳಿಂಗರಾಯರ ನಿಕಟವರ್ತಿಗಳಾಗಿದ್ದ ಸೋಹನ್‌ಕುಮಾರಿ, ಮೋಹನ್‌ಕುಮಾರಿ ಮತ್ತು ಪ್ರದೀಪ್ ಇವರಿಗೆ ಅಕಾಡೆಮಿ ಅಭಾರಿಯಾಗಿದೆ. ಓದುಗರು ಈ ಕೃತಿಯನ್ನು ಸ್ವಾಗತಿಸಿದರೆ ನಮ್ಮ ಶ್ರಮ ಸಾರ್ಥಕ.

ಉಭಯಗಾನ ವಿದುಷಿ

**ಶ್ಯಾಮಲಾ ಜಿ. ಭಾವೆ**

ಅಧ್ಯಕ್ಷರು

## ಸಂಪಾದಕರ ಲೇಖನಿಯಿಂದ.......

ಕನ್ನಡದ ಕೋಗಿಲೆ ಶ್ರೀ ಪಿ. ಕಾಳಿಂಗರಾವ್ ಅವರ ಬಗ್ಗೆ ಪುಸ್ತಕವೊಂದನ್ನು ಹೊರತರಬೇಕೆಂಬ ಅಕಾಡೆಮಿಯ ಬಹುದಿನಗಳ ಅಪೇಕ್ಷೆ ಈಗ ನೆರವೇರುತ್ತಿದೆ. ಯಾವ ಕಲಾವಿದ ತನ್ನ ಮಾಧ್ಯಮದ ಮೂಲಕ ಬಹಳ ಜನಪ್ರಿಯನಾದಾಗ, ಮಾಧ್ಯಮದ ಹೊರಗಿನಿಂದ ಆ ಕಲಾವಿದನ ಬಗ್ಗೆ ಸಾಕಷ್ಟು ವಿವರಗಳು ದೊರೆಯುವುದು ತುಂಬಾ ಕಷ್ಟ. ಕಾಳಿಂಗರಾಯರ ಬಗ್ಗೆಯೂ ವಿವರ ಸಂಗ್ರಹಣೆ ಬಹಳ ಶ್ರಮದ ಕೆಲಸ. ಈ ಶ್ರಮದ ಕೆಲಸವನ್ನು ಶ್ರೀಮತಿ ಜಯಶ್ರೀ ಅರವಿಂದ್ ಬಹಳ ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ.

ಸುಗಮ ಸಂಗೀತ ಕ್ಷೇತ್ರದಲ್ಲಿ ಶ್ರೀಮತಿ ಜಯಶ್ರೀ ಅರವಿಂದ್ ಬಹಳ ಕ್ರಿಯಾಶೀಲ ಕಲಾವಿದೆ. ಸಾಹಿತ್ಯ ರಚನೆ, ಸಂಗೀತ ಸಂಯೋಜನೆ ಮೂಲಕ ನಾಡಿನ ತುಂಬಾ ಹೆಸರಾಗಿದ್ದಾರೆ. ಕಾಳಿಂಗರಾಯರ ಬಗ್ಗೆ ಪುಸ್ತಕ ಬರೆಯಲು ಅಕಾಡೆಮಿ ಅವರನ್ನು ಕೋರಿದಾಗ ಬಹಳ ಹೆಮ್ಮೆಯಿಂದ ಕೆಲಸ ಕೈಗೆತ್ತಿಕೊಂಡಿದ್ದಾರೆ.

ಕಾಳಿಂಗರಾಯರ ಬಗ್ಗೆ ವಿಷಯ ಸಂಗ್ರಹಣೆಯ ಪ್ರತಿ ಹಂತವನ್ನೂ ನಾನು ಗಮನಿಸುತ್ತಲೇ ಬಂದಿದ್ದೇನೆ. ಎಲ್ಲಿ ಒಂದು ಸಣ್ಣ ಸುಳಿವು ಸಿಗುವುದೆಂಬ ವಿಷಯ ತಿಳಿದರೆ, ಅಲ್ಲಿಗೆ ತಕ್ಷಣವೇ ಧಾವಿಸಿ ಹೋಗಿ, ಒಮ್ಮೊಮ್ಮೆ ಆ ವಿಷಯ ಅಲ್ಲಿ ಲಭ್ಯವಿಲ್ಲವೆಂದಾದರೆ, ನಿರಾಶರಾಗದೆ ಮತ್ತೊಂದು ಕಡೆ ಪ್ರಯತ್ನಿಸಿ, ಒಟ್ಟಿನಲ್ಲಿ ಈ ಪುಸ್ತಕ ರಚನೆಗೆ ಜಯಶ್ರೀಯವರು ಐದಾರು ತಿಂಗಳು ನಿರಂತರ ಶ್ರಮಿಸಿದ್ದಾರೆ. ಕಾಳಿಂಗರಾಯರ ಹೆಂಡತಿ, ಬಂಧುಗಳು, ಪರಿಚಿತರನ್ನೆಲ್ಲಾ ಮಾತನಾಡಿಸಲೋಸುಗ ರಾಜ್ಯವ್ಯಾಪಿ ಪ್ರವಾಸ ಮಾಡಿದ್ದಾರೆ. ಹಾಗಾಗೇ ಈ ಪುಸ್ತಕದಲ್ಲಿ ಕಾಳಿಂಗರಾಯರ ಬಗ್ಗೆ ಹೆಚ್ಚಿನ ಮಾಹಿತಿ ದಾಖಲಾಗಿದೆ ಎಂದು ನನ್ನ ಅನಿಸಿಕೆ. ಈ ಬಗ್ಗೆ ಜಯಶ್ರೀ ಅರವಿಂದರನ್ನು ಎಷ್ಟು ಅಭಿನಂದಿಸಿದರೂ ಸಾಲದು.

ಶ್ರೀಮತಿ ಜಯಶ್ರೀ ಅರವಿಂದರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು. ನಮ್ಮ ಅಕಾಡೆಮಿಯ ಅಧ್ಯಕ್ಷರಿಗೆ, ರಿಜಿಸ್ಟ್ರಾರ್‌ರವರಿಗೆ, ಎಲ್ಲ ಸದಸ್ಯರಿಗೆ ನನ್ನ ವಂದನೆಗಳು. ವಿಶ್ವಾಸದಿಂದ ನನ್ನ ಜೊತೆ ಸಹಕರಿಸುವ ಶ್ರೀರಂಗ ಪ್ರಿಂಟರ್ಸ್ ಮತ್ತು ಬೈಂಡರ್ಸ್‌ನ ಶ್ರೀ ಬಾಲು ಮತ್ತು ಅವರ ಸಿಬ್ಬಂದಿ ವರ್ಗದವರಿಗೆ ನನ್ನ ನಮಸ್ಕಾರಗಳು.

ಇನ್ನು ಸಹೃದಯ ಓದುಗರುಂಟು.......ಈ ಕೃತಿ ಉಂಟು......ಸ್ವೀಕರಿಸುವಿರೆಂಬ ನಂಬಿಕೆ ನನ್ನದು.

1 ಮಾರ್ಚ್ 1999 — ಸುಗ್ಗನಹಳ್ಳಿ ಷಡಕ್ಷರಿ
ಬೆಂಗಳೂರು — ಪ್ರಧಾನ ಸಂಪಾದಕರು

## ಬೆಳದಿಂಗಳ ಮಳೆ

'ಬಾರಯ್ಯ ಬೆಳದಿಂಗಳೇ ನಮ್ಮೂರ ಹಾಲಿನಂತ ಬೆಳದಿಂಗಳೇ........' ಬೆಳದಿಂಗಳನ್ನು ಇಳೆಗೆ ಕರೆಯುವ ಈ ಗೀತೆಯನ್ನು ನಮ್ಮ ಕಿವಿಗೆ ತಂದವರು ಕನ್ನಡದ ಕೋಗಿಲೆ ಪಿ. ಕಾಳಿಂಗರಾವ್ ಅವರು. ಕಾಳಿಂಗರಾವ್ ಅವರ ಮಧುರ ಧ್ವನಿ ಕಿವಿಗೆ ಬಿದ್ದೊಡನೆ ಕೇಳುಗರು ಒಮ್ಮೆಲೆ ಕತ್ತೆತ್ತಿ ಮುಗಿಲತ್ತ ಚಂದಿರನನ್ನು ದಿಟ್ಟಿಸಿ ನೋಡುವಂತಾಗುತ್ತದೆ. ತಿಂಗಳ ಬೆಳಕಿನ ಎಳೆ ಎಳೆಯನ್ನೂ, ತಮ್ಮ ಧ್ವನಿಯ ಮೂಲಕ ಸೆಳೆದು ಭುವಿಗೆ ಇಳಿಸಿಕೊಡುವ ಕಾಳಿಂಗರಾಯರ ಹಾಡಿನ ಮೋಡಿ ಅಪೂರ್ವವಾದದ್ದು. ಹೀಗೆ ಗೀತೆ ಪ್ರಾರಂಭವಾದೊಡನೆ ಬಾನಿನಿಂದ ಬೆಳದಿಂಗಳ ತಂಪಾದ ಬೆಳಕು, ಪದರ ಪದರವಾಗಿ ಭುವಿಗೆ ಇಳಿಯುತ್ತದೆ. ಮೈಮನದಲ್ಲಿ ಮುಸುಕಿದ್ದ ಕತ್ತಲೆಗೆ ಬೆಳಕಿನ ಅಭಿಷೇಕವಾಗುತ್ತದೆ. ಹೊಳಪಿನ ಸ್ಪರ್ಶವಾಗುತ್ತದೆ. ತಂಪಾದ ಕಿರಣಗಳನ್ನು ಹಿಂಬಾಲಿಸಿಕೊಂಡು ಬಂದ ಬೆಳಕಿನ ತುಂತುರು, ಹನಿ ಹನಿಯಾಗಿ ಬಾನಿನಿಂದ ಭೂಮಿಯ ಉಡಿಗೆ ಹನಿಯುತ್ತದೆ. ತಂಪಿನ ವಾತಾವರಣವನ್ನು ಎದೆಗೆ ಹಾಯಿಸುತ್ತದೆ. ಇದು ಸುಗಮ ಸಂಗೀತಕ್ಕೆ ಹೆಬ್ಬಾಗಿಲಾಗಿ ನಿಂತ ಕಾಳಿಂಗರಾವ್ ಅವರ ಶೈಲಿ. ಸಾಹಿತ್ಯ ನೀಡುವ ಸಂವೇದನೆಯನ್ನು ಸಂಗೀತದ ಸ್ವರದುಯ್ಯಾಲೆಯಲ್ಲಿ ಜೀಕಿ ರಸಿಕರನ್ನು ತೋಯಿಸಿ, ಮೀಯಿಸುವ ರಾಯರ ಸಂಗೀತ ಸಂಯೋಜನೆ ಮತ್ತು ಹಾಡುಗಾರಿಕೆ ಅನನ್ಯವಾದದ್ದು. ತಮ್ಮದೇ ಸ್ವರ ಸಂಯೋಜನೆಯನ್ನು ತಾವೇ ಪ್ರಸ್ತುತಪಡಿಸುವ ಅವರ ಹಾಡುಗಾರಿಕೆ, ನೂರಕ್ಕೆ ನೂರರಷ್ಟು ಮೂಲ ಚಿತ್ರವನ್ನು ಉಳಿಸಿ, ಉಣಿಸಿದ್ದೂ ಹೌದು. ಬಾನಿನಲ್ಲಿ ಈಜಿ ತೇಲಾಡುವ ಗಾಳಿಪಟವನ್ನು ಭೂಮಿಯ ನೆಲದಲ್ಲಿ ನಿಂತು ದಾರದಲ್ಲಿ ನಿಯಂತ್ರಿಸುವ ಸೂತ್ರಧಾರನಂತೆ, ಭಾವಗೀತೆಗಳನ್ನು ತಮ್ಮ ಕಂಠ ಮಾಧುರ್ಯತೆಯಿಂದ, ಸಂಯೋಜನಾ ಪ್ರಬುದ್ಧತೆಯಿಂದ ನೆಲದಲ್ಲಿ ನಿಂತು ಮುಗಿಲೆತ್ತರಕ್ಕೆ ಏರಿಸಿ ಹಾರಿಸಿದವರಲ್ಲಿ ಕಾಳಿಂಗರಾಯರು

ಅದ್ವಿತೀಯರು. ಸುಗಮ ಸಂಗೀತಕ್ಕಾಗಿಯೇ ಬದುಕಿದವರು, ಬದುಕಿಗಾಗಿ ಸುಗಮ ಸಂಗೀತವನ್ನು ಹಾಡುತ್ತಿದ್ದವರು 'ಕನ್ನಡದ ಕೋಗಿಲೆ' ಪಾಂಡೇಶ್ವರದ ಕಾಳಿಂಗ ರಾಯರು.

ಅವರ ಜೀವನದ ಸಾಧನೆಗಳನ್ನು, ಬೆಳವಣಿಗೆಗಳನ್ನು, ಸಾಮರ್ಥ್ಯವನ್ನು, ಅವರ ಜೀವನದೃಷ್ಟಿಯನ್ನು, ಅವರಲ್ಲಿದ್ದ ಒಬ್ಬ ಪ್ರತಿಭಾವಂತ ಕಲಾವಿದನನ್ನು, ಹಲವು ಮುಖಗಳ ಹೆಣಿಗೆಯಲ್ಲಿ ದರ್ಶನಾತ್ಮಕವಾಗಿ ಕಂಡುಕೊಳ್ಳುವುದು ನನ್ನ ಆಶಯ. ಕಾಳಿಂಗರಾಯರು ನಡೆದು ಬಂದ ದಾರಿಯ ಮೂಲಕ ಅವರೇ ಆರಿಸಿ ಸಂಯೋಜಿಸಿ, ಹಾಡಿದ ನೂರಾರು ಹಾಡುಗಳ ಮೂಲಕ ಈ ದರ್ಶನವಿದೆ.

ಕಲಾವಿದರ ಬಗೆಗೆ ವಿಶೇಷ ಪ್ರೀತಿ, ಆದರ ತೋರುವ ಶ್ರೀಮತಿ ಶ್ಯಾಮಲಾ ಜಿ. ಭಾವೆಯವರ ಅಪರಿಮಿತವಾದ ಪ್ರಯತ್ನದಿಂದ ಈ ಕಿರು ಪುಸ್ತಕ ಹೊರ ಬರುತ್ತಿದೆ. ಇದಕ್ಕೆ ಸಲ್ಲುವ ಎಲ್ಲ ಹಿರಿಮೆ ಅವರಿಗೆ ಸೇರುತ್ತದೆ. ಪುಸ್ತಕದ ಅಂದ ಚೆಂದಗಳನ್ನು ಹೊಸತನದಿಂದ ಸಿಂಗರಿಸಿದವರು ಸಂಪಾದಕರಾದ ಷಡಕ್ಷರಿಯವರು. ಅವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸ್ಥಿರಚಿತ್ರದ ಗೋವಿಂದ ಭಟ್, ಫೋಟೋ ಫಾಸ್ಟ್ ಹಾಗೂ ಗ್ರಂಥ ಋಣದ ಎಂ. ಡಿ. ಎಸ್. ಸ್ವಾಮಿ, ಮಾಧುರಿ ಆಡಿಯೋಸ್ ಇವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ

ಜಯಶ್ರೀ ಅರವಿಂದ್

೨೭-೧-೧೯೯೯

## ಗ್ರಂಥ ಋಣ / ಪೂರಕ ವಿವರಗಳ ನೆರವು

ರೂಪತಾರಾ ವಿಶೇಷಾಂಕ - (1982)
ಕರ್ನಾಟಕದ ರಂಗಕಲಾವಿದರು / ಹಂ.ವೆ. ಸೀತಾರಾಮಯ್ಯ (1983)
ಕನ್ನಡ ಸಿನಿಮಾ ಇತಿಹಾಸ ಪುಟದಲ್ಲಿ / ಗಂಗಾಧರ್ ಮೊದಲಿಯಾರ್ (1998)
ಸುಗಮ ಸಂಗೀತದ ಸೀಮಾ ಪುರುಷ ಪಿ.ಕಾಳಿಂಗರಾವ್ / ಹಂಸಧ್ವನಿ ಸಾಂಸ್ಕೃತಿಕ ಟ್ರಸ್ಟ್, ಮೈಸೂರು (1995)
ಸ್ಮರಣೆ / ಕಾಳಿಂಗರಾವ್ ಸಂಸ್ಕರಣ ಸಮಿತಿ, ಬೆಂಗಳೂರು (1992)

ನನ್ನೊಂದಿಗೆ ಕಾಳಿಂಗರಾವ್‌ರವರ ಬಗೆಗೆ ತಮ್ಮ ಅಮೂಲ್ಯವಾದ ವಿವರಗಳನ್ನು ನೀಡಿ ತಮ್ಮ ಹೃದಯವಂತಿಕೆಯನ್ನು ತೋರಿಸಿದವರು ಕಾಳಿಂಗರಾಯರ ಹಲವಾರು ರಕ್ತಸಂಬಂಧಿಗಳು ಮತ್ತು ಅಭಿಮಾನಿ ಸ್ನೇಹಿತರು. ಅವರಿಗೆಲ್ಲಾ ನಾನು ಆಭಾರಿಯಾಗಿದ್ದೇನೆ.

1. ಶೃಂಗೇರಿ ನಾಗರಾಜ ರಾವ್, ಉಪನ್ಯಾಸಕರು, ಹಿರೇಚೌಳೂರು.
2. ಶ್ರೀ ಚೌಡಯ್ಯ ಮಾಸ್ತರರು ಕಾಳಿಂಗರಾಯರ ಹಿರಿಯ ಸೋದರರು 98 ವರುಷದವರಾಗಿದ್ದ ಅವರು ನೀಡಿದ ವಿವರಗಳು ಅನನ್ಯವಾದವು.
3. ಶ್ರೀ ಮಲ್ಲೇಶ್ ರಾವ್ ಮತ್ತು ಶಾಂತಾ ಮಲ್ಲೇಶ್ ರಾವ್, ಶೃಂಗೇರಿ.
4. ಕಾಳಿಂಗರಾಯರ ಧರ್ಮಪತ್ನಿ ಶ್ರೀಮತಿ ಮೀನಾಕ್ಷಮ್ಮ.
5. ಕಾಳಿಂಗರಾಯರ ಮಕ್ಕಳಾದ ವಸಂತ್ ಕಾಳಿಂಗರಾವ್ ಮತ್ತು ಶರತ್ ಕಾಳಿಂಗರಾವ್.
6. ಕಾಳಿಂಗರಾವ್ ಅವರ ದೊಡ್ಡಪ್ಪನ ಮಕ್ಕಳಾದ ಹೊಸಗದ್ದೆ ಶ್ರೀನಿವಾಸರಾವ್.
7. ಕಾಳಿಂಗರಾವ್ ಅವರ ಭಾವಂದಿರಾದ ಪಳ್ಳಗುಡ್ಡ ಕೇಶವರಾವ್
8. ಗುಬ್ಬೀವೀರಣ್ಣನವರ ಮಕ್ಕಳಾದ ಶ್ರೀಮತಿ ಮಾಲತಮ್ಮ.
9. ರಂಗ ಸಂಗೀತ ಕಲಾವಿದರಾದ ಶ್ರೀ ಸೀತಾರಾಮರಾಜು.
10. ರಂಗಭೂಮಿ ನಟ, ನಿರ್ದೇಶಕ, ಸಂಗೀತ ನಿರ್ದೇಶಕ ಗಾಯಕರಾದ ಶ್ರೀ ಯೋಗಾನರಸಿಂಹ.
11. ಕಾಳಿಂಗರಾವ್ ಅವರೊಂದಿಗೆ 25 ವರುಷಗಳ ಕಾಲ ತಬಲ

ನುಡಿಸಿದ ಶ್ರೀ ರಾಮಣ್ಣ, ಮೈಸೂರು.

12. ಕಾಳಿಂಗರಾವ್ ಅವರ ಫೋಟೋಗಳನ್ನು ನೀಡಿದ ಸೋಹನ್‌ಕುಮಾರಿ, ಮೋಹನ್‌ಕುಮಾರಿ.
13. ಸುಗಮ ಸಂಗೀತದ ಗಾಯಕಿಯಾದ ಶ್ರೀಮತಿ ಮಾಲತಿ ಶರ್ಮ
14. ಪ್ರಜಾವಾಣಿ ದೈನಿಕದ ಪ್ರಮುಖ ಉಪಸಂಪಾದಕರಾದ ಶ್ರೀ ಗಂಗಾಧರ್ ಮೊದಲಿಯಾರ್
15. ಕಾಳಿಂಗರಾವ್ ಅವರ ಫೋಟೋಗಳನ್ನು ಅಂದವಾಗಿ ಸಂಸ್ಕರಿಸಿಕೊಟ್ಟ ಶ್ರೀ ಜಿ. ರಾಜೇಂದ್ರಕುಮಾರ್, ಗುಂಡುಕುಟ್ಟಿ.
16. ಕಾಳಿಂಗರಾಯರ ಪ್ರಶಸ್ತಿ ಪತ್ರಗಳ ಜೆರಾಕ್ಸ್ ಪ್ರತಿ ಮಾಡಿಕೊಟ್ಟ ಶ್ರೀ ಕೆ.ಎಸ್. ರಾಧಾಕೃಷ್ಣ, ಮಡಿಕೇರಿ.
17. ಫೋಟೋ ಮತ್ತು ಪ್ರಶಸ್ತಿಗಳನ್ನು ಒದಗಿಸಿಕೊಟ್ಟ ಶ್ರೀಮತಿ ಶ್ಯಾಮಲಾ ಜಿ. ಭಾವೆ.
18. ಕಾಳಿಂಗರಾಯರ ಬಗೆಗೆ ಮಾಹಿತಿ ಸಂಗ್ರಹಕ್ಕೆ ನೆರವಾದ - ಸುದರ್ಶನ್, ಮೈಸೂರು.
19. ಕಾಳಿಂಗರಾಯರ ಸ್ಮರಣ ಸಂಚಿಕೆಯನ್ನು ಕೊಟ್ಟು ನೆರವಾದ ಪ್ರೊ॥ ಮಲ್ಲಣ್ಣ.
20. ಕಾಳಿಂಗರಾಯರ ಬಗೆಗೆ ವಿಶೇಷ ವಿವರಗಳನ್ನೂ, ಪುಸ್ತಕಗಳನ್ನೂ ಸೂಚಿಸಿದ ಪುಸ್ತಕಲೋಕದ ಉಪಸಂಪಾದಕರಾದ, ಶ್ರೀ ಲಿಂಗರಾಜು,
21. ಶ್ರೀ ಮಾಧವ ಉಡುಪ, ಡಿಮನ್‌ಪಾರ್ಕ್, ಸಾಲಿಗ್ರಾಮ
22. ಕಾಳಿಂಗರಾಯರಿಗೆ ಮೈಸೂರು ಮಹಾರಾಜರು ಮತ್ತು ರಾಷ್ಟ್ರಕವಿ ಕುವೆಂಪು ಅವರು ಬರೆದ ಸಂದೇಶ ಪತ್ರಗಳನ್ನು ನೀಡಿ ಸಹಕರಿಸಿದ ಶ್ರೀ ವಿ.ವಿ. ಗೋಪಾಲ್.

ಈ ಮಹನೀಯರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಜಯಶ್ರೀ ಅರವಿಂದ್

# ಓದುಗರಿಗಾಗಿ

# ಕಾಶ್ರೀಂಗರಾಯರ

# ವಿಶೇಷ

# ಪ್ರಶಂಸೆ

# ಅಬಂ
ಬ

# ರಸಋಷಿ ಕುವೆಂಪು ಅವರ ಶುಭ ಸಂದೇಶ

## ಶುಭ ಸಂದೇಶಗಳು



ಡಾ॥ ಕೆ. ವಿ. ಪುಟ್ಟಪ್ಪ, [illegible]


ಮೈಸೂರು.
[illegible]-11-19[illegible]

[illegible]

ಕುವೆಂಪು.

ಮೈಸೂರು.

## ರಾಯರ ಸುಗಮಸಂಗೀತ ರಸಯಾತ್ರೆಗೆ ಮೈಸೂರು ಮಹಾರಾಜರ ಶುಭಹಾರೈಕೆ





ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಮತ್ತು ಶ್ರೀ ಬಾಬುರಾಜೇಂದ್ರ ಪ್ರಸಾದ್‌ರ ಸಮ್ಮುಖದಲ್ಲಿ ರಾಯರು
'ಉದಯವಾಗಲಿ ಚೆಲುವ ಕನ್ನಡ ನಾಡು' ಹಾಡಿ ಸನ್ಮಾನಿತರಾದಾಗ.

## ಮದ್ರಾಸಿನ ರುಕ್ಮಿಣಿದೇವಿಯವರ ಕಲಾಕ್ಷೇತ್ರ ಕೊಟ್ಟ ಕಿರೀಟ

# KALAKSHETRA

ADYAR
MADRAS 20
Phone : [illegible]

President :
RUKMINI DEVI
Vice President :
VASUDEVACHARYA

I am very happy to learn that Shri P. Kalinga Rao, the golden voiced and talented singer of Karnataka and a pioneer in popularising the Folk Music has undertaken a cultural tour of Karnataka with his party.

No Kannadiga can forget his immortal ' Udayavagali Namma Chaluva Kannada Nadu ' and his service to the world of music.

A popular Radio artiste and a leading Music Director, his proposed cultural tour of Karnataka deserves all encouragement by every one.


I wish him all success in this endeavour

with best wishes,

(Sd.) VASUDEVACHARYA




ಖ್ಯಾತ ಹಾಸ್ಯಸಾಹಿತಿ ಬೀChi, ಹಾ.ವೆಂ.ಸೀತಾರಾಮಯ್ಯ, ವಾಟಾಳ್ ನಾಗರಾಜ್ ಅವರೊಂದಿಗೆ ಕೋಲೂರಿಕೊಂಡು ನಿಂತ ರಾಯರು




ಜಿ. ನಾರಾಯಣ್, ಹೊನ್ನಪ್ಪ ಭಾಗವತರೊಂದಿಗೆ ಸನ್ಮಾನಿತ ರಾಯರು




ಡಾ॥ ಸಿಂಧುವಳ್ಳಿ ಅನಂತಮೂರ್ತಿಯವರಿಂದ ರಾಯರಿಗೆ ಸನ್ಮಾನ




ನಟ - ಗಾಯಕ ಹೊನ್ನಪ್ಪ ಭಾಗವತರೊಂದಿಗೆ ಸನ್ಮಾನ ಸಮಾರಂಭವೊಂದರಲ್ಲಿ ರಾಯರು



ಶ್ರೀ ರಾಮಪೂಜಾ ಚಿತ್ರದ ಹಾಡುಗಳ ಧ್ವನಿಮುದ್ರಣ ಸಮಯದಲ್ಲಿ ಡೆಲ್ಸಿತೋನ್ ವಾದ್ಯ ನುಡಿಸುತ್ತಿರುವ ರಾಯರು - ಜೊತೆಯಲ್ಲಿ ಸಂಗೀತ ನಿರ್ದೇಶಕ ವಿಜಯಭಾಸ್ಕರ್, ನವಜ್ಯೋತಿ ಸ್ಟುಡಿಯೋದ ಕೃಷ್ಣಮೂರ್ತಿ ಮತ್ತು ಮೋಹನ್‌ಕುಮಾರ್.



ರಾಯರು ತಮ್ಮ ಕಡೆಗಾಲದಲ್ಲಿ ವೇದಿಕೆಯಲ್ಲಿ ಕಾಣಿಸಿಕೊಳ್ಳುತ್ತಿದ್ದುದು ಹೀಗೆ




ಅಬ್ದುಲ್‌ಗಫಾರ್, ಮೋಹನ್‌ಕುಮಾರಿ, ರಾಯರು, ಹಿನ್ನೆಲೆ ಗಾಯಕಿ ಪಿ.ಲೀಲಾ, ತಾರೀತ ಕುಮಾರ್ ಚೌಧುರಿ ಆಕಾಶವಾಣಿಯ ನಿಯೋಜಿತ ಕಾರ್ಯಕ್ರಮವೊಂದರಲ್ಲಿ.




ಮಿಸ್. ಮಾಧುರಿ ನಾಟಕದಲ್ಲಿ ಮಾಧುರಿಯಾಗಿ ರಾಯರು




ಖ್ಯಾತ ಸಂಗೀತ ನಿರ್ದೇಶಕ ಅನಿಲ್ ಬಿಸ್‌ವಾಸ್‌ರೊಂದಿಗೆ ದೆಹಲಿಯ ಕಾರ್ಯಕ್ರಮವೊಂದರಲ್ಲಿ ರಾಯರು - ಜೊತೆಯಲ್ಲಿ ಮೋಹನ್ ಮತ್ತು ಸೋಹನ್




ಹಿಂದಿ ಚಿತ್ರನಟ ರಾಜ್‌ಕಪೂರ್ ಅವರಿಂದ ಅಭಿನಂದನೆ ಸ್ವೀಕರಿಸುತ್ತಿರುವ ರಾಯರು




ಆತ್ಮೀಯ ಗೆಳೆಯ ತ.ರಾ. ಸುಬ್ಬರಾಯರೊಂದಿಗೆ ರಾಯರು




ತಾರುಣ್ಯದ ಹೊಸ್ತಿಲಲ್ಲಿ ರಾಯರು




ಉತ್ತರಾದಿ ಸಂಗೀತದ ಮೇರುವಿಧ್ವಾಂಸ ಮಲ್ಲಿಕಾರ್ಜುನ ಮನ್ಸೂರರೊಡನೆ ರಾಯರು




ಯೌವ್ವನದ ಸ್ಫುರದ್ರೂಪಿ ತರುಣ



ನಲವತ್ತೆಂಟರ ಹರೆಯದಲ್ಲಿ ಮಿನುಗುವ ಆತ್ಮವಿಶ್ವಾಸ



ಅನುಭವದ ಪಕ್ವನಗೆಯ ರಾಯರು



ಮಧ್ಯವಯಸ್ಸಿನಲ್ಲೂ ಮಾಸದ ಮೋಹಕತೆ



ಖ್ಯಾತ ಸಂಗೀತ ನಿರ್ದೇಶಕ ಶಾಮಣ್ಣನವರ ಪಿಟೀಲು ವಾದನಕ್ಕೆ ಮೋಹನ್ ಮತ್ತು
ಸೋಹನ್‌ರೊಂದಿಗೆ ಹಾಡುತ್ತಿರುವ ರಾಯರು



ತಮ್ಮ ಹಿಂದೂಸ್ತಾನಿ ಸಂಗೀತ ಗುರುಗಳಾದ ರಾಮಚಂದ್ರ ಬುವಾ ಮತ್ತು
ವೆಂಕಟರಾವ್ ರಾಮದುರ್ಗ್‌ ಅವರೊಂದಿಗೆ ತರುಣ ರಾಯರು

# ಗೆಜ್ಜೆ ಪುಟ್ಟಯ್ಯ

ನೃತ್ಯಸ್ಯ ಪುಟ್ಟಿ (ಪುಟ್ಟಯ್ಯ)
ವಾಗ್ಜಾಲೇ ಬಾಬಿ (ಬಾಬಣ್ಣ)
ದಶಾವತಾರಸ್ಯ ಉಪರಳ್ಳಿ (ಉಪ್ಪರಳ್ಳಿ ಶೇಷ)
ಬುದ್ಧಿಶಾಲಿಶ್ಚ ಗಣಪತಿ (ಗಣಪತಿ ಪ್ರಭು)
ಏತೇ ಚತ್ವಾರೋ ಕಲಾಭಿಜ್ಞೋ, ಜನಪ್ರಿಯಃ

- ಇದು ಯಕ್ಷಗಾನದಲ್ಲಿ ಅತ್ಯಂತ ಜನಪ್ರಿಯರಾಗಿದ್ದ ನಾಲ್ವರು ಪ್ರಸಿದ್ಧ ಕಲಾವಿದರ ಬಗೆಗೆ 1905ರಲ್ಲಿ ಪ್ರಚಲಿತವಿದ್ದ ಒಂದು ಪದ್ಯ.

ಈ ನಾಲ್ವರಲ್ಲಿ ಪಾಂಡೇಶ್ವರದ ನಾರಾಯಣರಾವ್ ಅವರು ನರ್ತನದಲ್ಲಿ ದೊಡ್ಡ ಹೆಸರು ಮಾಡಿದ್ದರು. ನರ್ತನವನ್ನು ತಪಸ್ಸಿನಂತೆ ಸ್ವೀಕರಿಸಿ ಬೇರೆಯವರಿಗೂ ದೀಕ್ಷೆ ಕೊಟ್ಟ ಕಲಾಯೋಗಿಯಾಗಿದ್ದರು.

ಸ್ಫುರದ್ರೂಪಿಗಳಾದ ನಾರಾಯಣರಾವ್ ಛಲವಾದಿಗಳೂ, ಶೀಘ್ರಕೋಪಿಗಳೂ ಆಗಿದ್ದರು. ಯಕ್ಷಗಾನ ಕುಣಿತದಲ್ಲಿ ಅವರನ್ನು ಮೀರಿಸುವವರೇ ಇಲ್ಲವೇನೋ ಎಂಬಂತೆ, ನರ್ತನದಲ್ಲಿ ಅಪೂರ್ವವಾದ ಓಘ, ವೇಗಗಳಿದ್ದವು. ನೋಡುವುದಕ್ಕೆ ಆಕಾರದಲ್ಲಿ ಪುಟ್ಟದಾಗಿದ್ದ ಅವರನ್ನು ಮನೆಯವರೆಲ್ಲ ಪುಟ್ಟಯ್ಯನೆಂಬ ರೂಢನಾಮದಿಂದ ಕರೆಯುತ್ತಿದ್ದರು. ನರ್ತನದಲ್ಲಿ ಅದ್ವಿತೀಯರೂ ಆಗಿದ್ದ ಅವರ ಗೆಜ್ಜೆದನಿಯರಿಂಗಣಕ್ಕೆ ಶ್ರೋತೃಗಳು ಹಾತೊರೆಯುತ್ತಿದ್ದರು. ಲಯಬದ್ಧವಾದ ಅವರ ನರ್ತನ, ಹಾವ ಭಾವಗಳ ಲಾಸ್ಯ, ಚುರುಕಾದ ಗತಿ, ಹುಲ್ಲೆಯಂತೆ ಹಾರಿ ಕುಣಿವ ಸುಳಿಗಾಳಿಯಂತಹ ವೇಗ ಇವು ರೋಮಾಂಚನ ತರುತ್ತಿದ್ದವು. ನಾಟ್ಯ ನಿಪುಣರಾದ ಅವರನ್ನು 'ಗೆಜ್ಜೆ ಪುಟ್ಟಯ್ಯ'ನೆಂದು ಸನ್ಮಾನಿಸಿ, ಅದೇ ಹೆಸರಿನಿಂದ ಕರೆಯುತ್ತಿದ್ದರು.

ತಾಳಬ್ರಹ್ಮನೆಂದೂ ಹೆಸರು ಮಾಡಿದ್ದ ಪುಟ್ಟಯ್ಯನವರ ನರ್ತನಕ್ಕೆ ಪಕ್ಕವಾದ್ಯ ನುಡಿಸುವುದೇ ಸಾಹಸವಾಗಿತ್ತು. ಅವರ ನರ್ತನಕ್ಕೆ ಸರಿಸಾಟಿಯಾಗಿ ಪಕ್ಕವಾದ್ಯ ನುಡಿಸಲಾಗದೆ ಮದ್ದಳೆ ನುಡಿಸುವವರು ಹೆದರಿ ಕಂಗಾಲಾಗುತ್ತಿದ್ದರು. ಕೈ ನಡುಗಿ ತಾಳದ ಲೆಕ್ಕಾಚಾರ

ತಲೆಕೆಳಗಾಗುತ್ತಿದ್ದವು. ಪುಟ್ಟಯ್ಯನವರ ವೇಗದ ಪದಚಲನೆ ಭಾವುಕ ಅಭಿನಯ, ನೃತ್ಯ, ನೃತ್ತ ಎರಡೂ ನ ಭೂತೋ ನ ಭವಿಷ್ಯತಿ ಎಂಬಂತಾಗಿತ್ತು. 'ಗೆಜ್ಜೆ ಪುಟ್ಟಯ್ಯ' ಎಂಬ ಬಿರುದು ಅವರಿಗೆ ಅನ್ವರ್ಥವಾಗಿತ್ತು. ಆ ಕಾಲದಲ್ಲಿ ಯಕ್ಷಗಾನಕ್ಕೆ ಚಾಲನೆ ಕೊಟ್ಟ ಕಲಾವಿದರಲ್ಲಿ ಪಾಂಡೇಶ್ವರದ ಪುಟ್ಟಯ್ಯ ಗಮನಾರ್ಹರು. ಯಕ್ಷಗಾನ ಪ್ರವೀಣ ಹಾರಾಡಿ ರಾಮಗಾಣಿಗರು ಪುಟ್ಟಯ್ಯನವರ ಶಿಷ್ಯರಲ್ಲಿ ಒಬ್ಬರು. ಅಂದಿನ ಕಾಲಕ್ಕೆ ಜನಮನ್ನಣೆಯನ್ನು ಪಡೆಯದೆ ಮೂಲೆಗುಂಪಾಗಿದ್ದ 'ಯಕ್ಷಗಾನಕ್ಕೆ' ಚೈತನ್ಯದ ಮಿಂಚು ತಂದವರು ಯಕ್ಷಗಾನದ ಗೆಜ್ಜೆ ಪುಟ್ಟಯ್ಯನವರು. ಯಕ್ಷರಂಗಕ್ಕೆ ಇವರು ಮಾಡಿದ ಕಲಾಸೇವೆಯನ್ನು ಡಾ॥ ಶಿವರಾಮ ಕಾರಂತರು ತಮ್ಮ 'ಯಕ್ಷಗಾನ ಬಯಲಾಟ' ಗ್ರಂಥದಲ್ಲಿ ಸ್ಮರಿಸಿದ್ದಾರೆ. ಈ ಯಕ್ಷಗಾನದ ಗೆಜ್ಜೆ ಪುಟ್ಟಯ್ಯನವರ ಹೆಮ್ಮೆಯ ಪುತ್ರನಾಗಿ, ಸುಗಮ ಸಂಗೀತದ ಹರಿಕಾರನಾಗಿ, ದೊಡ್ಡ ಹೆಸರು ಮಾಡಿದವರೇ ನಮ್ಮ ಪಿ. ಕಾಳಿಂಗರಾಯರು.

## ಅರಮನೆಯ ನೆರಳಲ್ಲಿ

ಯಕ್ಷಗಾನದ ಕಲಾಕ್ಷೇತ್ರದಲ್ಲಿ ಸ್ವಯಂ ಪ್ರಕಾಶಿಸಿ ಮೆರೆದ ಪುಟ್ಟಯ್ಯನವರು ಕೈ ಹಿಡಿದದ್ದು ತಮ್ಮ ಸೋದರಮಾವನ ಮಗಳಾದ ನಾಗಮ್ಮನವರನ್ನು. ಆಕೆ ಎತ್ತರವಾಗಿದ್ದು, ತುಸು ತೆಳ್ಳಗೆ ಬೆಳ್ಳಗೆ ಇದ್ದರು. ನಾಗಮ್ಮನವರಿಗೂ ಶಾಸ್ತ್ರೀಯ ಸಂಗೀತ, ದೇವರನಾಮಗಳನ್ನು ಹಾಡಿಕೊಳ್ಳುವ ಪರಿಪಾಠ ತವರಿನಿಂದಲೇ ಇತ್ತು. ಅಣ್ಣ ಸೂರಾಲ್ ಮಂಜಯ್ಯ ಶಾಸ್ತ್ರೀಯ ಸಂಗೀತದ ಒಳ್ಳೆಯ ವಿದ್ವಾಂಸರಾಗಿದ್ದರು. ಯಕ್ಷಗಾನದ ಮೇಳಕ್ಕಾಗಿ ಊರೂರು ಸುತ್ತುತ್ತಿದ್ದ ಪುಟ್ಟಯ್ಯನವರು ಅನಿವಾರ್ಯವಾಗಿ ನಾಗಮ್ಮನವರಿಂದ, ಮನೆಯಿಂದ ಹೊರಗುಳಿಯಬೇಕಾಗುತ್ತಿತ್ತು. ನಾಗಮ್ಮನವರು ಸ್ವಭಾವತಃ ಸಾಧು. ಜೋರಾಗಿ ಮಾತನಾಡಲು ಗೊತ್ತಿಲ್ಲದ ಮುಗ್ಧೆ, ಭಯಸ್ಥೆ. ಪುಟ್ಟಯ್ಯನವರು ಮೇಳಕ್ಕಾಗಿ ಊರೂರು ತಿರುಗುವಾಗ ಅವರ ಇಬ್ಬರು ತಂಗಿಯರು ವಿಧವೆಯರಾಗಿ ಹಿಂದಿರುಗಿ ತವರಿಗೆ ಬಂದು ಸೇರಿಕೊಂಡಿದ್ದರು. ಸಹನಾಶೀಲೆಯಾಗಿದ್ದ ನಾಗಮ್ಮನವರು ಮನೆಯ

ಕೆಲಸಗಳನ್ನು ಬಹಳ ಅಚ್ಚುಕಟ್ಟಾಗಿ ಮಾಡಿಕೊಂಡು ಹೋಗುತ್ತಿದ್ದರು. ಜೊತೆಗೆ ನಾದಿನಿಯರ ಸೇವೆಯನ್ನೂ ಭಯಭಕ್ತಿಯಿಂದ ಮಾಡುತ್ತಿದ್ದರು. ಕ್ರಮೇಣ ತವರು ಮನೆಯಲ್ಲಿ ತಮ್ಮ ಸ್ವಾಮ್ಯವನ್ನು ಸ್ಥಾಪಿಸಿಕೊಂಡ ಪುಟ್ಟಯ್ಯನವರ ತಂಗಿಯರಿಗೆ ನಾಗಮ್ಮನವರನ್ನು ಕಂಡರೆ ಅಸೂಯೆ. ತಾವು ಅನುಭವಿಸದ ಸುಖವನ್ನು ತಮ್ಮ ವಯಸ್ಸಿನವಳಾದ ಈಕೆ ಅನುಭವಿಸುತ್ತಿರುವಳಲ್ಲ ಎಂಬ ಈರ್ಷ್ಯೆ. ಸಾಲದ್ದಕ್ಕೆ ಚೆಲುವೆಯಾಗಿದ್ದ ನಾಗಮ್ಮ ಪ್ರತಿಕ್ಷಣ ಅವರ ಕಣ್ಣನ್ನು ಕುಕ್ಕುತ್ತಿದ್ದಳು. ಇದರ ಪರಿಣಾಮವಾಗಿ ನಾಗಮ್ಮನಿಗೆ ಚಿತ್ರಹಿಂಸೆ ಪ್ರಾರಂಭವಾಯಿತು. ದೋಸೆ ಮಗಚುವ ಕೈಯಿಂದ ಬರೆಗಳನ್ನು ಹಾಕಿ ಬೆದರಿಸಿದರು. ಇದನ್ನೆಲ್ಲಾ ಸಹಿಸಲಾರದ ನಾಗಮ್ಮ ತವರೂರಾದ ಆರೂರಿಗೆ ತೆರಳಿದಳು. ಆರೂರಿನಲ್ಲಿ ಗಂಡು ಮಗುವಿಗೆ ಜನ್ಮ ಕೊಟ್ಟರು. 1914ನೇ ಆಗಸ್ಟ್ 31ರಂದು ಕನ್ನಡ ಸುಗಮ ಸಂಗೀತದ ಧ್ರುವತಾರೆಯೊಂದು ಧರೆಗಿಳಿಯಿತು. ಪುಟ್ಟಯ್ಯನವರ ಮನೆಯ ದೇವರು 'ಬ್ರಹ್ಮಲಿಂಗ' ದೇವರು. ನಾಗಮ್ಮನವರ ಮನೆಯವರು ಸುಬ್ರಹ್ಮಣ್ಯದೇವರ ಮನೆಯೊಕ್ಕಲಿನವರು. ತಾಯಿ ನಾಗಮ್ಮ ತನಗೆ ಪ್ರೀತಿಪಾತ್ರನಾದ ಸುಬ್ರಹ್ಮಣ್ಯದೇವರ ಹೆಸರನ್ನೇ ಮಗನಿಗಿಟ್ಟರು. ಸುಬ್ರಾಯ ಶಾನ್‌ಭಾಗ್ ಎಂದು ಪ್ರಾರಂಭದಲ್ಲಿ ಕರೆಯುತ್ತಿದ್ದು, ನಂತರ ಕಾಳಿಂಗಶರ್ಮನೆಂದಾಗಿ, ಕಡೆಗೆ ಕಾಳಿಂಗರಾವ್ ಎಂದು ಬದಲಾಯಿತು. ಮುದ್ದು ಸುರಿಯುವ, ಬೆಳದಿಂಗಳ ಕಾಂತಿಯ ಕಾಳಿಂಗ ಅಮ್ಮನ ಬೆಚ್ಚನೆ ಮಡಿಲಲ್ಲಿ ಪ್ರಪಂಚದತ್ತ ಇಣುಕತೊಡಗಿದ.

ಆರೂರು ಗುಡ್ಡಕಾಡುಗಳಿಂದ ಕೂಡಿದ್ದ ಒಂದು ಸಣ್ಣ ಹಳ್ಳಿ. ಊರಿಗೊಂದು ದೇವಸ್ಥಾನ. ಸುತ್ತಲೂ ಮರಗಳು. ರಸ್ತೆಯ ಅಕ್ಕಪಕ್ಕಗಳಲ್ಲಿ ಬೇಲಿಯ ಹೂಗಳು ನಗುತ್ತಿರುವ ದೃಶ್ಯ ಸಾಮಾನ್ಯವಾಗಿತ್ತು. ಮರಗಳ ನಡುವೆ ಜೀರಿಡುವ ಜೀರುಂಡೆ, ಹಾಲಾಡಿ ನದಿಯಲ್ಲಿ ಸೌಮ್ಯವಾಗಿ ಏರಿಬರುವ ತೆರೆಗಳು, ಇವೆಲ್ಲಾ ಒಬ್ಬ ಭಾವುಕ ಜೀವಿಯ, ಒಬ್ಬ ಮಹಾನ್ ವ್ಯಕ್ತಿಯ ಹಾದಿಯನ್ನು ಎದುರು ನೋಡುತ್ತಿದ್ದವು. ನೀರಿನ ತುಂತುರು ಹನಿಯಲ್ಲಿ, ಹಸಿರಿನ ಚಿಗುರಿನ ಸಂಭ್ರಮದ ಸೊಗಸಿನಲ್ಲಿ ಕಾಳಿಂಗ ಆನಂದದಿಂದ ಕಣ್ಣು ತೆರೆಯತೊಡಗಿದ್ದ. ಬಾನಿನತ್ತ, ಹೂವಿನ ಗಿಡಗಳತ್ತ ನೋಡಿ, ನಗುತ್ತಾ

ಕೇಕೆ ಹಾಕುತ್ತಿದ್ದ. ಬಿದಿಗೆ ಚಂದಿರನ ತೇಜಸ್ಸಿನಂತೆ ದಿನ ದಿನಕ್ಕೆ ಅವನ ಕಾಂತಿ ವರ್ಧಿಸುತ್ತಿತ್ತು.

ನೋಡಿದೊಡನೆ ಒಮ್ಮೆ ಎತ್ತಿ ಮುದ್ದಿಡಬೇಕು ಎನಿಸುವ ಮಗು ಕಾಳಿಂಗನ ರೂಪ ಲಾವಣ್ಯಕ್ಕೆ ಬೆರಗಾಗದವರೇ ಇರಲಿಲ್ಲ. ಆ ಹೊಳಪುಗಣ್ಣಿನಲ್ಲಿ ತೇಜಸ್ಸು ಆತ ಮುಂದೆ ಮಹಾವ್ಯಕ್ತಿಯಾಗಲಿದ್ದಾನೆ ಎನ್ನುವುದನ್ನು ಪೂರ್ವ ಭಾವಿಯಾಗಿ ತಿಳಿಸುತ್ತಿತ್ತು. ಹೊಂಬಣ್ಣದ ಗಲ್ಲದ ಸುಳಿನಗು ಎಂಥವರನ್ನೂ ಆಕರ್ಷಿಸುತ್ತಿತ್ತು. ಈ ಚಂದಕ್ಕೆ ತುಂಟತನವೂ ಸೇರಿ ಬಾಲಕ ಕಾಳಿಂಗನನ್ನು ಸಂಭಾಳಿಸಲು ನಾಗಮ್ಮನವರಿಗೆ ಅಸಾಧ್ಯವಾಗುತ್ತಿತ್ತು. ದಿನ ಬೆಳಗಾದರೆ ಸಿಕ್ಕಿದ ಎತ್ತರದ ಮರಹತ್ತಿ ಕುಳಿತು ಆಡುವುದು, ಅಲ್ಲಿಂದ ಜಿಗಿಯುವುದು, ಗೆಳೆಯರೊಡನೆ ಬೀದಿ ಬೀದಿ ಓಡಾಡಿ ಅಲೆದು, ಬಸವಳಿದಾಗ ಮನೆಗೆ ಬರುವುದು ವಾಡಿಕೆಯಾಯಿತು. ಮಗನನ್ನು ಶಿಕ್ಷಣದ ಅಂಕೆಯಲ್ಲಿಡಲು ನಿರ್ಧರಿಸಿದ ನಾಗಮ್ಮ ಸೂರಾಲ್ ಅರಮನೆಯಲ್ಲಿ ಪಾರುಪತ್ಯಗಾರನಾಗಿದ್ದ ಅಣ್ಣ ಮಂಜಯ್ಯನವರೊಂದಿಗೆ ಬಂದು ನೆಲೆಸಿದರು. ಸೂರಾಲ್ ಅರಮನೆಯ ಅರಸ ನಾಗೇಂದ್ರ ತೋಳ್ಹಾರ್ ಅವರ ಮಕ್ಕಳೊಂದಿಗೆ ಬಾಲಕ ಕಾಳಿಂಗನೂ ಶಾಲೆಗೆ ಹೋಗತೊಡಗಿದ. ಸೂರಾಲ್ ಅರಮನೆಯ ಹುಡುಗರ ಜೊತೆಗೆ ಈತನೂ ರಾಜಕುಮಾರನಲ್ಲದಿದ್ದರೂ, ರಾಜಕುಮಾರನಂತೆ ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡಲಾರಂಭಿಸಿದ. ಮೋಹಕ ಕಣ್ಗಳ, ಮುದ್ದು ಸುರಿವ, ಕೆಂಪು-ಬಿಳಿ ಮಿಶ್ರಿತ ಗೌರವರ್ಣದ ಈತ, ಆರು ವರುಷಕ್ಕಿಂತ ಮೊದಲೇ ತನ್ನ 'ಮಂದಹಾಸ' ದಿಂದ ಬೆಳಗತೊಡಗಿದ. ಮಾವ ಮಂಜಯ್ಯನವರಿಂದ ಶಾಸ್ತ್ರೀಯ ಸಂಗೀತದ ಪಾಠವೂ ಆರಂಭವಾಯಿತು.

## ಪದಕ ತಂದ 'ಚಂದ್ರಹಾಸ'

ಬಾಲಕ ಕಾಳಿಂಗ ಎರಡನೇ ತರಗತಿಯಲ್ಲಿದ್ದಾಗ ಶಾಲೆಯ ವಾರ್ಷಿಕೋತ್ಸವಕ್ಕಾಗಿ 'ಚಂದ್ರಹಾಸ' ನಾಟಕ ಪ್ರದರ್ಶನವಿದ್ದು, ಚಂದ್ರಹಾಸನ ಪಾತ್ರಕ್ಕಾಗಿ ಈತನನ್ನೇ ಆರಿಸಿ ತಾಲೀಮು ಮಾಡಿಸಿದ್ದರು. ಕಾಳಿಂಗನ ಶಾರೀರ ಮತ್ತು ಶರೀರ ಎರಡೂ ಅದ್ವಿತೀಯವಾಗಿದ್ದುದೇ

ಈತನನ್ನು ಆರಿಸಲು ಕಾರಣವಾಗಿತ್ತು. 'ಚಂದ್ರಹಾಸ'ನ ಮುಗ್ಧತೆಯನ್ನೂ, ಸೌಂದರ್ಯದ ಸ್ನಿಗ್ಧತೆಯನ್ನೂ ಯಶಸ್ವಿಯಾಗಿ ಅಭಿನಯಿಸಿದ ಕಾಳಿಂಗನನ್ನು ಅಂದು ಕೊಂಡಾಡದವರೇ ಇರಲಿಲ್ಲ. ನಾಟಕ ಪ್ರದರ್ಶನಕ್ಕೆ ವಿಶೇಷ ಆಹ್ವಾನಿತರಾಗಿ ಬಂದಿದ್ದ ಬ್ರಿಟಿಷ್ ಆಫೀಸರ್ ಗೌನ್ ಅವರಂತೂ ಪುಟ್ಟ ಬಾಲಕನ ದಿಟ್ಟತನವನ್ನು ಮೆಚ್ಚಿಕೊಂಡು ತಮ್ಮ ಕೊರಳಲ್ಲಿದ್ದ ಚಿನ್ನದ ಪದಕವನ್ನು ಬಾಲಕ ಕಾಳಿಂಗನ ಕೊರಳಿಗಿಟ್ಟು ಹರಸಿದರು. ಬಾಲಕ ಕಾಳಿಂಗನಿಗೆ ಅಂದಿನಿಂದ ಗಂಧರ್ವಲೋಕದ ಬಾಗಿಲು ತೆರೆಯಿತು. ಈತನ ಸಾಧನೆ, ಹಾಡುಗಾರಿಕೆ, ಅಭಿನಯ, ಬ್ರಿಟಿಷ್ ಆಫೀಸರ್ ಅವರಿಂದ ಚಿನ್ನದ ಪದಕದ ಮನ್ನಣೆ ದೊರೆತದ್ದು, ಮನೆ ಮನೆಯ ಮಾತಾಯಿತು. ಕಲಾರಸಿಕರಿಗೆ ಹುಬ್ಬೇರಿಸುವಂತೆ ಮಾಡಿತು. ಇದು ಮಂಗಳೂರಿನಲ್ಲಿ 'ಅಂಬಾ ಪ್ರಸಾದಿತ' ನಾಟಕ ಮಂಡಳಿ ನಡೆಸುತ್ತಿದ್ದ ಮುಂಡಾಜೆ ರಂಗನಾಥಭಟ್ಟರ ಕಿವಿಗೂ ಬಿದ್ದಿತು. ಸೂರಾಲ್ ಅರಸರ ಸ್ನೇಹಿತರಾದ ಅವರು ತಾವೇ ಸೂರಾಲಿಗೆ ಬಂದು ಬಾಲಕ ಕಾಳಿಂಗನನ್ನು ಕಂಡರು. ಮಿನುಗುವ ಆತನ ಕಣ್ಣುಗಳಲ್ಲಿ, ನಡೆಯುವ ಭಂಗಿಯಲ್ಲಿ, ಮಾತನಾಡುವ ರೀತಿಯಲ್ಲಿ, ಆತ ಅವರಿಗೆ ಅದ್ವಿತೀಯನಾಗಿ ತೋರಿದ. ಆತನ ಮಧುರ ಕಂಠವನ್ನು ಕೇಳಿದಾಗಲಂತೂ ಭಟ್ಟರಿಗೆ ಆಶಾಕಿರಣ ಪ್ರಖರವಾಗಿ ಕಂಡಿತು. ನಾಗಮ್ಮನವರ ಮತ್ತು ಮಂಜಯ್ಯನವರ ಮನವೊಲಿಸಿ ಬಾಲಕ ಕಾಳಿಂಗನನ್ನು ತಮ್ಮ ಅಭಿನಯರಂಗದ ತೆಕ್ಕೆಗೆ ತೆಗೆದುಕೊಳ್ಳುವುದರಲ್ಲಿ ರಂಗನಾಥಭಟ್ಟರು ಸಫಲರಾದರು. ಭಟ್ಟರ ಸಂಗೀತ ಪ್ರೌಢಿಮೆಯ ಬಗೆಗೆ ಮತ್ತು ಅವರ ಧೀಮಂತ ವ್ಯಕ್ತಿತ್ವದ ಬಗೆಗೆ ಗೌರವ ಹೊಂದಿದ್ದ ನಾಗಮ್ಮನವರಾಗಲಿ, ಅವರ ಅಣ್ಣ ಮಂಜಯ್ಯನವರಾಗಲೀ ಮುದ್ದು ಬಾಲನನ್ನು ಅವರೊಡನೆ ಕಳುಹಿಸಲು ಅನುಮಾನಿಸಲಿಲ್ಲ. ಆದರೆ ಕಾಳಿಂಗನ ಶಾಲಾ ವಿದ್ಯಾಭ್ಯಾಸ ಎರಡನೇ ತರಗತಿಗೆ ಇತಿಶ್ರೀ ಆಯಿತು.

## ಕಲಾರೋಹಣದ ಮೊದಲ ಮೆಟ್ಟಿಲು

ಮಂಗಳೂರಿಗೆ ರಂಗನಾಥಭಟ್ಟರೊಂದಿಗೆ ಬಂದಿಳಿದ ಬಾಲಕ ಕಾಳಿಂಗನಿಗೆ ರಂಗನಾಥಭಟ್ಟರೇ ಅಭಿನಯ ಮತ್ತು ಸಂಗೀತ ಕಲಿಸುವ

ಗುರುವಾಗಿ ನಿಂತರು. ಸೂರಾಲಿನಲ್ಲಿ ಮಾವ ಮಂಜಯ್ಯನವರು ಕಲಿಸಿದ ಸಂಸ್ಕೃತ ಶ್ಲೋಕ, ದೇವರನಾಮ, ಭಕ್ತಿ ಪ್ರಧಾನವಾದ ಹಾಡುಗಳ ಅಡಿಪಾಯದಿಂದ ಕಾಳಿಂಗನಲ್ಲಿ ಶಬ್ಧ ಉಚ್ಚಾರದಲ್ಲಿ ಶುದ್ಧತೆ, ಶ್ರುತಿಯಲ್ಲಿ ಹಿಡಿತ ಸಿದ್ಧಿಯಾಗಿತ್ತು. ಭಟ್ಟರೊಂದಿಗೆ ಮಂಗಳೂರಿಗೆ ಬರುವ ವರುಷದ ಮುನ್ನ ಧರ್ಮಸ್ಥಳದಲ್ಲಿ ಉಪನಯನವೂ ಆಗಿತ್ತು. ಧರ್ಮಸ್ಥಳದ ಮಂಜಯ್ಯ ಹೆಗ್ಗಡೆಯವರು ತಾವೇ ನಿಂತು ಬಾಲಕನಿಗೆ ಬ್ರಹ್ಮೋಪದೇಶವನ್ನು ನೀಡಿ 'ಮಂಜುನಾಥ' ಎಂದು ಪುನರ್ನಾಮಕರಣ ಮಾಡಿದರು (ಆದರೆ ಕಾಳಿಂಗ ಎಂಬುವ ಹೆಸರೇ ಸ್ಥಿರವಾಯಿತು.) ಗಾಯಿತ್ರಿ ಮಂತ್ರವನ್ನು ಅವಿಚ್ಛಿನ್ನವಾಗಿ ಜಪಿಸುತ್ತಿದ್ದ ಬಾಲಕ ಕಾಳಿಂಗನಿಗೆ ಸರಸ್ವತಿ ತಾನಾಗಿಯೇ ಒಲಿದು ಅಪ್ಪಿಕೊಂಡಳು.

ಕಲೆಯನ್ನು ಒಲಿಸಿಕೊಳ್ಳಲು ಸಾವಿರಾರು ಜನ ತಪಸ್ಸು ಮಾಡುತ್ತಾರೆ, ಹಾತೊರೆಯುತ್ತಾರೆ, ಅದರ ಬೆನ್ನು ಹತ್ತಿ ಬಿಸಿಲ್ಗುದುರೆಯನ್ನು ಹಿಂಬಾಲಿಸಿದಂತೆ ಹಿಂಬಾಲಿಸುತ್ತಾರೆ. ಆದರೆ ಅವರಿಗೆ ಅದು ಮರೀಚಿಕೆಯೇ ಆಗುತ್ತದೆ. ಪೂರ್ವ ಜನ್ಮದ ಪುಣ್ಯದ ಬಲದಿಂದ, ಸಂಸ್ಕಾರದಿಂದ ಕೇವಲ ಕೆಲವರಿಗೆ ಮಾತ್ರ ಈ ಸಂಪದ ಲಭಿಸುತ್ತದೆ. 'ಕಲೆಯೇ ವ್ಯಕ್ತಿಯ ಬೆನ್ನ ಹಿಂದೆ ಬಿದ್ದು ಆತನನ್ನು ಒಲಿಸಿಕೊಂಡು, ಒಲೈಸಿಕೊಂಡು, ಆತನ ದಾಸ್ಯವಾಗಿ, ಆತನ ಕಾಲ ಬಳಿ ಕುಳಿತು ಅವನಿಗಾಗಿ ಹಾತೊರೆಯುತ್ತದೆ. ಆತನ ಬೆನ್ನ ಹಿಂದೆ ನೆರಳಾಗಿ ಹಿಂಬಾಲಿಸುತ್ತದೆ. ಈ ಸಾದೃಶ್ಯ ಪಾಂಡೇಶ್ವರ ಪುಟ್ಟಯ್ಯ-ನಾಗಮ್ಮನವರ ಮಗ ಕಾಳಿಂಗನಿಗೆ ಅನ್ವರ್ಥವಾಯಿತು. ಆತನ ಬಾಲತನದ ಆಟಪಾಠಗಳಲ್ಲಿಯೂ, ಸಂಗೀತ ಸಾಹಿತ್ಯವೇ ಆಟಿಕೆಯಾಗಿ ಮಾರ್ಪಾಡಾದವು.

ಕರ್ನಾಟಕ ಸಂಗೀತದಲ್ಲಿ ಅದ್ವಿತೀಯರಾಗಿದ್ದ ರಂಗನಾಥಭಟ್ಟರು ಅಭಿನಯದಲ್ಲೂ ದೊಡ್ಡ ಹೆಸರು ಮಾಡಿದ್ದರು. ವೃತ್ತಿರಂಗಭೂಮಿಯ ಇತಿಹಾಸದಲ್ಲಿ ಸಂಗೀತವೇ ನಾಯಕನ ಪಾತ್ರದಷ್ಟು ಶಕ್ತಿಶಾಲಿಯಾಗಿತ್ತು. ವೃತ್ತಿರಂಗಭೂಮಿಯ ಆರಂಭದಿಂದ ಉತ್ತರ ಕರ್ನಾಟಕದಲ್ಲಿ ಹಿಂದೂಸ್ತಾನಿ ಪದ್ಧತಿಯ ಮರಾಠೀ ಹಾಡುಗಳ ಮಟ್ಟುಗಳು ರಂಗಸಂಗೀತವಾಗಿ ಮೆರೆಯುತ್ತಿದ್ದರೆ, ಹಳೆಯ

ಮೈಸೂರು ಭಾಗಗಳಲ್ಲಿ ಪಾರ್ಸಿ ನಾಟಕ ಕಂಪನಿಗಳು ಹಾಡಿ, ಬಿಟ್ಟುಹೋದ ಹಿಂದೂಸ್ತಾನಿ ಹಾಡಿನ ಮಟ್ಟುಗಳು ಮೆರೆಯುತ್ತಿದ್ದವು. ಇದರ ಪುನರ್ನವೀಕರಣವಾದದ್ದು ಮೈಸೂರು ಅರಸರ ಕಾಲದಲ್ಲೇ ಎನ್ನಬಹುದು. ಅರಮನೆಯ ಆಸರೆಯಲ್ಲಿಯೇ ಸ್ಥಾಪಿತವಾದ ನಾಟಕ ರಂಗಭೂಮಿಯ ಸಂಗೀತ, ಶಾಸ್ತ್ರೀಯ ಸಂಗೀತ ವಿದ್ವಾಂಸರಿಂದಲೇ ಪ್ರಾರಂಭವಾಗಿ, ಪ್ರಬಲವಾಗಿಯೇ ಬೇರೂರಿತು. ಅಭಿನಯಕ್ಕಿಂತಲೂ ಸಂಗೀತಕ್ಕೇ ಹೆಚ್ಚಿನ ಪ್ರಾಶಸ್ತ್ಯ ಬೇಕಾಗಿ ಸಂಗೀತ ವಿದ್ವಾಂಸರೇ ನಟನೆಗೆ ಇಳಿದರು. ನಟನಾ ಸಾಮರ್ಥ್ಯಕ್ಕೆ ಶಾಸ್ತ್ರೀಯ ಸಂಗೀತವೇ ಅಡಿಗಲ್ಲಾಯಿತು. ಎಂತಹ ನಟರೂ ಅಭಿನಯವನ್ನು ಕಲಿಯುವ ಮೊದಲು ಕಡ್ಡಾಯವಾಗಿ ಶಾಸ್ತ್ರೀಯ ಸಂಗೀತವನ್ನು ಕಲಿತೇ ಅಭಿನಯ ರಂಗಕ್ಕೆ ಪದಾರ್ಪಣೆ ಮಾಡಬೇಕಿತ್ತು. ರಂಗನಾಥಭಟ್ಟರೂ ಈ ಸಂಪ್ರದಾಯದಲ್ಲಿಯೇ ನುರಿತು ನಟರಾಗಿ, ಸಂಗೀತ ವಿದ್ವಾಂಸರಾಗಿದ್ದು 'ಅಂಬಾ ಪ್ರಸಾದಿತ' ನಾಟಕ ಕಂಪನಿಯನ್ನು ಪ್ರಾರಂಭಿಸಿ ನಡೆಸುತ್ತಿದ್ದರು. ಬಾಲಕ ಕಾಳಿಂಗನನ್ನು ಕರೆ ತಂದೊಡನೆ ನಟನೆ ಹಾಗೂ ಸಂಗೀತಾಭ್ಯಾಸ ಎರಡರಲ್ಲೂ ತರಬೇತು ನೀಡಲು ಪ್ರಾರಂಭಿಸಿದರು. ತಮ್ಮ ಕಂಪನಿಯ ಪ್ರಖ್ಯಾತ ಪೌರಾಣಿಕ ನಾಟಕಗಳಲ್ಲಿ ಸಣ್ಣ ಪುಟ್ಟ ಬಾಲ ಪಾತ್ರಗಳಿಂದ ಆರಂಭಿಸಿ, ಮುಖ್ಯವಾದ ಬಾಲ ಪಾತ್ರಗಳವರೆಗೆ ಇದು ಅವಿರತವಾಗಿ ಸಾಗಿತು. ಧರ್ಮಪುರುಷ, ಲೋಹಿತಾಶ್ವ, ಧ್ರುವ, ಪ್ರಹ್ಲಾದ, ಕೃಷ್ಣ ಪಾತ್ರಗಳಲ್ಲಿ ಅಭಿನಯದ ಅವಕಾಶದೊಂದಿಗೆ ಕಲಾ ಶಿಕ್ಷಣವೂ ಆರೋಹಣದ ಮೆಟ್ಟಿಲು, ಮೆಟ್ಟಿಲನೇರಿತು. ಅಭಿನಯ ಮತ್ತು ಸಂಗೀತದ ಸೋಪಾನದಲ್ಲಿ ಒಂಭತ್ತರ ಮುದ್ದಿನ ಬಾಲಕ ಪ್ರಪಂಚದ ವಿವಿಧ ಅನುಭವಗಳತ್ತ ದಾಪುಗಾಲು ಹಾಕತೊಡಗಿದ. ಕಲಾ ಪ್ರಪಂಚದತ್ತ ಬೆರಗುಗಣ್ಣಿನಿಂದ ನೋಡುತ್ತಲೇ ಎರಡೂ ಕೈಗಳಿಂದ, ಹೃದಯದ ವೈಶಾಲ್ಯತೆಗಳಿಂದ, ತಾನು ಕೇಳಿದ, ಗುರುವಿನಿಂದ ಕಲಿತ, ಎಲ್ಲಾ ಅನುಭವಗಳನ್ನು ಬಾಚಿ ತಬ್ಬಿಕೊಂಡ. ತನು ಮನ ಹೃದಯಗಳಲ್ಲಿ ತುಂಬಿಕೊಂಡ. ಸೂರಾಲ್ ಅರಮನೆಯ ಮಕ್ಕಳೊಡನೆ ಜೊತೆಗೂಡಿ ಆಡಿ ಬೆಳೆದಿದ್ದ ಆತನಿಗೆ ಇದ್ದುದು ಆತ್ಮವಿಶ್ವಾಸವೆಂಬ ಅಕ್ಷಯ ಪಾತ್ರೆ. ಆ ಆತ್ಮ ವಿಶ್ವಾಸವೇ ಅವನ ವ್ಯಕ್ತಿತ್ವವನ್ನು ರೂಪಿಸಿ ಬಾಲಕ ಕಾಳಿಂಗನ ಬದುಕಿನ ಒಳ ಹೊರಗನ್ನು

ಬೆಳಗತೊಡಗಿದವು. ಆಕರ್ಷಕವಾದ ಎಳೆನಗು, ಮಿನುಗುವ ಕಂಗಳಲ್ಲಿ ಮಿನುಗುವ ಕಾಂತಿ, ನೀಳವಾದ ನಾಸಿಕ, ಹೊಂಬಣ್ಣದ ಕದಪು, ಒತ್ತಾದ ದುಂಬಿಗುರುಳ ಕೇಶರಾಶಿಯ ಸೊಬಗು, ಬೆಡಗುಗಳಿಂದ ಕಂಗೊಳಿಸುತ್ತಿದ್ದ ಬಾಲನಟ ಕಾಳಿಂಗ, ತನ್ನ ಕಿನ್ನರ ಕಂಠದಿಂದ ಪ್ರೇಕ್ಷಕರನ್ನು ಒಮ್ಮೆಲೆ ಹತ್ತಿರಕ್ಕೆ ಸೆಳೆದುಕೊಂಡ. ಗುರು ರಂಗನಾಥ ಭಟ್ಟರನ್ನು ಬೆರಗಾಗುವಂತೆ ಮಾಡಿದ. ಅಭಿನಯ ಹಾಗೂ ಹಾಡುಗಾರಿಕೆ ಈ ಎರಡೂ ಪ್ರಕಾರಗಳಲ್ಲಿ ಬಾಲಕನ ಮೃದು ಮಧುರ ಬಾಲ್ಯ ಹೀಗೆ ಕಳೆಯುತ್ತಿರುವಾಗಲೇ.... ಏಳು ವರುಷಗಳು ಸರಿದುಹೋದವು.

## ಚಿನ್ನದ ತೋಡಾ ಮತ್ತು ಉಂಗುರ ತಂದ ಸಂಗೀತ

ಮಂಗಳೂರಿನಲ್ಲಿದ್ದ ತಮ್ಮ ಕಂಪನಿಯನ್ನು ರಂಗನಾಥ ಭಟ್ಟರು ಶಿವಮೊಗ್ಗಾದಲ್ಲಿ ಪ್ರಾರಂಭಿಸಿದರು. ನಾಟಕ ಕಂಪನಿಗಳು ಹೀಗೆ ಊರಿನಿಂದ ಊರಿಗೆ, ವ್ಯಾಪಾರ ದೃಷ್ಟಿಯಿಂದ, ಪ್ರಚಾರ ದೃಷ್ಟಿಯಿಂದ, ಬದಲಾಯಿಸಬೇಕಾದದ್ದು ಅನಿವಾರ್ಯವಾಗಿತ್ತು. ಆಗ ಬಾಲಕ ಕಾಳಿಂಗ ತನ್ನ ಹದಿನಾರನೇ ವಯಸ್ಸಿಗೆ ಕಾಲಿರಿಸಿದ್ದ. ಏಳು ವರುಷ ಕಲಿಸಿದ್ದ ಶಾಸ್ತ್ರೀಯ ಸಂಗೀತ ಕಡಲಿನ ತೆರೆಗಳಂತೆ ಧುಮ್ಮಿಕ್ಕಿ ಮೊರೆಯುತ್ತಿದ್ದವು. ಸಾಮಾನ್ಯರು ಜೀವಮಾನದ ಇಡೀ ಅವಧಿಯಲ್ಲಿ ಕಲಿಯಬೇಕಾದುದನ್ನು ಈತ ಕೇವಲ ಏಳು ವರುಷಗಳಲ್ಲಿ ಕಲಿತು, ತಾನಿನ್ನೂ ಹಸಿದಿದ್ದೇನೆ, ಈವರೆವಿಗೆ ದೊರಕಿದ್ದು ಏನೇನೂ ಸಾಲದು......ಎಂಬಂತಿದ್ದ. ರಂಗನಾಥ ಭಟ್ಟರಿಗೆ ಇದು ಗೋಚರವಾಗದೆ ಇರಲಿಲ್ಲ. ಭೋರ್ಗರೆಯುವ ಕಡಲ ತೆರೆಯನ್ನು ಬಂಧಿಸಲು ಸಾಧ್ಯವೇ?......ತಮ್ಮ ಶಿಷ್ಯನಲ್ಲಿ ಹೊಯ್ದಾಡುತ್ತಿದ್ದ ಸಂಗೀತ ಸರಸ್ವತಿಯನ್ನು ಭುವಿಗೆ ಇಳಿಸಲು ಒಂದು ವೇದಿಕೆಯನ್ನು ಸಿದ್ಧಪಡಿಸಿದರು. ಶಿವಮೊಗ್ಗಾದಲ್ಲಿ ಎರಡೂವರೆ ಗಂಟೆಗಳ ಕಾಲ ಈ ಹದಿನಾರರ ಪೋರ ನಿರರ್ಗಳವಾಗಿ, ಲೀಲಾಜಾಲವಾಗಿ ಹಾಡಿ ಶೋತೃಗಳನ್ನು ರಸಸಾಗರದಲ್ಲಿ ತೇಲಿಸಿದ. ತ್ರಿಸ್ಥಾಯಿಗಳಲ್ಲಿ ಸರಾಗವಾಗಿ ಚಲಿಸುವ ಶುದ್ಧವಾದ ಸ್ವರಕಲ್ಪನೆ, ಶ್ರುತಿ ಶುದ್ಧತೆ, ಖಚಿತವಾದ ಲಯಜ್ಞಾನ, ಮೇಲಾಗಿ ಸಾಹಿತ್ಯದ ಸ್ಫುಟವಾದ ಉಚ್ಚಾರ

ಇದು ಅಂದು ಆ ಕಾರ್ಯಕ್ರಮಕ್ಕೆ ಅತಿಥಿಯಾಗಿ ಬಂದಿದ್ದ ಶಿವಮೊಗ್ಗಾದ ಜಿಲ್ಲಾಧಿಕಾರಿಗಳಾಗಿದ್ದ ಬಿ. ಟಿ. ಕೇಶಯ್ಯಂಗಾರ್ ಅವರನ್ನು ದಿಗ್ಮೂಢರನ್ನಾಗಿಸಿತು. ಶಿವಮೊಗ್ಗಾ ಜಿಲ್ಲೆಯ ಸೆಷನ್ ಜಡ್ಜ್ ಆಗಿದ್ದ ಕೃಷ್ಣಮಾಚಾರ್ ಅವರೂ ಬಾಲಕನ ಹಾಡುಗಾರಿಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ, ರೇಶಿಮೆಯ ಶಲ್ಯ ಹೊದಿಸಿ, ಚಿನ್ನದ ತೋಡವನ್ನು, ಚಿನ್ನದ ಉಂಗುರವನ್ನು ತೊಡಿಸಿ ಸನ್ಮಾನ ಮಾಡಿದರು. ಬಾಲಕ ಕಾಳಿಂಗ ನಾಚಿಕೆಯಿಂದ ಧರೆಗಿಳಿದು ಹೋದರೆ, ಗುರು ರಂಗನಾಥ ಭಟ್ಟರು ಶಿಷ್ಯವನ್ನು ಕಂಡು, ಅವನ ಹಾಡುಗಾರಿಕೆಯನ್ನು ಕೇಳಿ ಆತ್ಮವಿಶ್ವಾಸದಿಂದ ಬೀಗಿದರು.

## ಸ್ತ್ರೀ ಪಾತ್ರದ ಸೊಗಸು

ತಮ್ಮ ಶಿಷ್ಯನನ್ನೇ ದಿಟ್ಟಿಸಿ ಸೋಡುತ್ತಿದ್ದ ರಂಗನಾಥ ಭಟ್ಟರಿಗೆ ಒಮ್ಮೆಲೆ ತಲೆಯಲ್ಲಿ ಮಿಂಚು ಹೊಳೆಯಿತು. ಈ ಮೋಹಕ ಬಾಲಕನ ರಸದುಂಬಿದ ಗಲ್ಲ, ಮಿನುಗುವ ಹರಯದ ಕಣ್ಣುಗಳ ಕಾಂತಿ, ಆಕರ್ಷಕ ನಿಲುವು, ಇನ್ನೂ ಒರಟಾಗದ ಕೋಮಲ ತುಟಿಗಳು, ಮೇಲಾಗಿ ಒಡೆಯದ ಮಧುರ ಕಂಠ......ಸಾಲದ್ದಕ್ಕೆ ಬೆಳದಿಂಗಳಂತಹ ಹೊಂಬಣ್ಣದ ಮೈಕಾಂತಿ, ಇವು ರಾಜಕುಮಾರಿಯಲ್ಲಿರಬೇಕಾದ ಲಕ್ಷಣಗಳು. ಇಷ್ಟೂ ಕಾಳಿಂಗನಲ್ಲಿ ಅವರಿಗೆ ಕಂಡವು. ಬಾಲ ಪಾತ್ರದಿಂದ ಬಾಲಕ ಕಾಳಿಂಗ ರಾಣಿ ಪಾತ್ರಕ್ಕೆ ಒಮ್ಮೆಲೆ ಬಡ್ತಿ ಪಡೆದ. ಕೀರ್ತಿಯೆಂಬ ನೆರಳೂ ಅವನನ್ನು ಹಿಂಬಾಲಿಸಿತ್ತು. ಸ್ತ್ರೀ ಪಾತ್ರಗಳ ಅಭಿನಯದಿಂದ ಪ್ರೇಕ್ಷಕರ ಹೃದಯಕ್ಕೆ ಲಗ್ಗೆ ಹಾಕಿದ ಕಾಳಿಂಗ, ದಿನಕಳೆದಂತೆ ಹೊಸ ವರ್ಚಸ್ಸು ಪಡೆದ. ಹದಿನೇಳರ ಹರಯಕ್ಕೆ ಬಂದು ಪ್ರೇಕ್ಷಕರ ಎದೆಯಲ್ಲಿ ಸುಭದ್ರಸ್ಥಾನ ಗಳಿಸಿದ. 'ಕಾಳಿಯ ಮರ್ದನ' - 'ತುಳಸಿದಾಸ' - 'ಆಜನ್ಮಕುಮಾರಿ' - 'ರಾಯರ ಸೊಸೆ' - 'ವಿಕ್ರಮ ಶಶಿಕಲಾ' - 'ಮಿಸ್ ಮಾಧುರಿ' ಮುಂತಾದ ನಾಟಕಗಳಲ್ಲಿ ಕಾಳಿಂಗ ಸ್ತ್ರೀ ಪಾತ್ರಧಾರಿಯಾಗಿ ಅಭಿನಯಿಸಿ ಪ್ರೇಕ್ಷಕರನ್ನು ಕುರ್ಚಿಯ ಅಂಚಿನಲ್ಲೇ ಕುಳಿತುಕೊಳ್ಳುವಂತೆ ಮಾಡಿದ. ಬ್ರಹ್ಮಚಾರಿಗಳಿಗೆ ವಿರಹ ಬಾಧೆಯನ್ನು ತಂದು ಅವರನ್ನು ಉದ್ವಿಗ್ನರನ್ನಾಗಿಸಿದ. ವೃದ್ಧರನ್ನು ಭೂತಕಾಲದೆಡೆಗೆ ತಳ್ಳಿ ಅವರವರೇ ಪೇಚಾಡುವಂತೆ ಮಾಡಿದ. ಮೃದು

ಹೃದಯದ ಹೆಣ್ಣುಗಳು ನಾಟಕದಲ್ಲಿನ ಅಭಿನಯವನ್ನು ನೋಡಿ ತಲ್ಲಣಗೊಂಡರು. ಪ್ರತಿಬಾರಿ ಹಾಡುವಾಗಲೂ, ಪ್ರತಿಯೊಂದು ಆಟದಲ್ಲಿಯೂ ಕಾಳಿಂಗ ಹಾಡುವ ಹಾಡಿಗೆ ಒನ್ಸ್‌ಮೋರ್ ಬೇಡಿಕೆ ಇದ್ದೇ ಇರುತ್ತಿತ್ತು.

ಕಾಳಿಂಗ ಸ್ತ್ರೀಪಾತ್ರಧಾರಿಯಾಗಿದ್ದು ಅವನ ಹಾಡುಗಾರಿಕೆಯ ಉತ್ತಮ ಗುಣಮಟ್ಟದಿಂದ ಎಂಬುದು ಸುಸ್ಪಷ್ಟ. ಏಕೆಂದರೆ ದೊಡ್ಡ ದೊಡ್ಡ ನಾಟಕ ಕಂಪನಿಯಲ್ಲಿ ಹೊಸನಟರಿಗೆ ಮೊದಲು ಅವಕಾಶ ಕೊಡುತ್ತಿದ್ದುದೇ ಸ್ತ್ರೀ ಪಾತ್ರಧಾರಿಗಳಾಗಿ. ಅವರ ನೈಪುಣ್ಯತೆ, ಅರ್ಹತೆಯನ್ನು ಅನಂತರದಲ್ಲಿ ಪರಿಗಣಿಸಿ ಅವರಿಗೆ ಪುರುಷ ಪಾತ್ರಗಳನ್ನು ನೀಡುತ್ತಿದ್ದರು. ಸ್ತ್ರೀಯರು ಅಷ್ಟಾಗಿ ನಾಟಕರಂಗಕ್ಕೆ ಬಾರದಿರುವುದೂ ಇದಕ್ಕೆ ಮುಖ್ಯ ಕಾರಣವಾಗಿತ್ತು.

## ಉತ್ತರಾದಿಯ ರಿಯಾಝ್

ರಂಗನಾಥಭಟ್ಟರು ತಮ್ಮ ಕಂಪನಿಯನ್ನು ಮುಂದೆ ಸೊಲ್ಲಾಪುರಕ್ಕೆ ವರ್ಗಾಯಿಸಿದ್ದು ಕಾಳಿಂಗನ ಬದುಕಿನಲ್ಲಿ ಮತ್ತೊಂದು ತಿರುವನ್ನು ತಂದಿತು. ಮುಖ್ಯನಾಯಕ ಪಾತ್ರಗಳನ್ನು ನಿರ್ವಹಿಸಲು ಸುಪ್ರಸಿದ್ಧ ಹಿಂದೂಸ್ತಾನಿ ವಿದ್ವಾಂಸರುಗಳಾದ ವೆಂಕಟರಾವ್ ರಾಮದುರ್ಗ್ ಮತ್ತು ರಾಮಚಂದ್ರ ಬುವಾ ಮರೋಳ್‌ಕರ್ ಅವರು 'ಅಂಬಾಪ್ರಸಾದಿತ' ಕಂಪನಿಯಲ್ಲಿ ನಿಯೋಜಿತರಾದರು. ಅದರೊಂದಿಗೆ ಅವರುಗಳ ಅಭಿಮುಖವಾಗಿ 'ನಾಯಕಿ' ಪಾತ್ರವನ್ನು ಮಾಡುವವನು ಹರಯದ ಹುಡುಗ ಕಾಳಿಂಗನೇ ಆಗಿದ್ದ. ಇದು ಸಂಜೆಯಿಂದ ನಡುರಾತ್ರಿಯವರೆವಿಗೆ ಪ್ರದರ್ಶಿತವಾಗುತ್ತಿತ್ತು. ಹಗಲು ಉಳಿದ ವೇಳೆಯಲ್ಲಿ ಕಾಳಿಂಗ ತನ್ನ ನಾಯಕರಾದ ವೆಂಕಟರಾವ್ ರಾಮದುರ್ಗ್ ಮತ್ತು ರಾಮಚಂದ್ರಬುವಾ ಮರೋಳ್‌ಕರ್ ಇವರಲ್ಲಿ ಉತ್ತರಾದಿ ಸಂಗೀತಪಾಠ ಆರಂಭಿಸಿದ. ಇದು ರಂಗನಾಥ ಭಟ್ಟರ ಮಹದಾಕಾಂಕ್ಷೆಯೂ ಆಗಿದ್ದರಿಂದ ಕಾಳಿಂಗನ ಸಂಗೀತಾಭ್ಯಾಸ ಅವ್ಯಾಹತವಾಗಿ ಯಾವ ಅಡೆತಡೆಯಿಲ್ಲದೆ ನಡೆಯಿತು. ಬ್ರಾಹ್ಮೀ ಮಹೂರ್ತದಿಂದ ಪ್ರಾರಂಭವಾದ ಸಂಗೀತ ಸಾಧನೆ ಸ್ನಾನ, ಪೂಜೆ, ಊಟಕ್ಕಾಗಿ ವಿನಿಯೋಗಿಸುವ ಸಮಯವನ್ನು ಬಿಟ್ಟರೆ ಗೋಧೂಳಿಯ

ಸಮಯದವರೆವಿಗೆ, ಛೋಟಾ ಖ್ಯಾಲ್, ಬಡಾ ಖ್ಯಾಲ್, ಝುಮರಿ, ತಾನ, ವಿತಾನ, ಸ್ವರ, ಆಲಾಪ್, ಲಯಗಳಲ್ಲಿ ನಿರಂತರವಾಗಿ ಮುಳುಗಿರುತಿತ್ತು. ಈ ಸಾಧನೆಯೆ ಹರಯದ ಕಾಳಿಂಗನ ಶಾರೀರವನ್ನು ಹದವಾಗಿಡಲು ಬಹುಮಟ್ಟಿಗೆ ಕಾರಣವಾಯಿತು. ಹೀಗಾಗಿಯೇ ಮುಂದೆ ಎಂದೂ ಕಂಠ ಅವರಿಗೆ ಕೈಕೊಡಲಿಲ್ಲ.

ದಕ್ಷಿಣಾದಿ ಮತ್ತು ಉತ್ತರಾದಿಯಲ್ಲಿ ಪಂಡಿತರನ್ನು ಬೆರಗುಗೊಳಿಸುವಂತೆ ಹಾಡಲು ಕಲಿತ ಕಾಳಿಂಗ, ಅಪರೂಪದ ರಾಗಗಳನ್ನೂ ನಿರಾಯಾಸವಾಗಿ, ಲೀಲಾಜಾಲವಾಗಿ, ವಿಶೇಷ ಸಂಚಾರದಿಂದ, ವಿನೂತನ ಸಂಚಾರದವರೆವಿಗೆ ಹಾಡುವ ಸಿದ್ಧಿ ಪಡೆದ. ಅತಿಕಷ್ಟವಾದ ತಾಳಗಳೂ ಸುಲಭದಲ್ಲಿ ಇವನಿಗೆ ದಕ್ಕಿಬಿಟ್ಟವು. ಮಧುರ ಕಂಠದಲ್ಲಿ ಹೊರಬಂದ ಸ್ವರತಾನಗಳೆಲ್ಲಾ ಬಾನಿನಲ್ಲಿ ಹೊಳೆಯುವ ಚುಕ್ಕೆಗಳಂತೆ ಲುಕುಲುಕು ಹೊಳೆಯತೊಡಗಿದವು. ನೀರಿನ ಮಂಜುಳ ಧ್ವನಿಯಲ್ಲಿ ಉಲಿಯತೊಡಗಿದವು. ಶ್ರುತಿಮಾಡಿದ ಶುದ್ಧ ತಂಬೂರಿ ಇಟ್ಟಲ್ಲಿಯೇ ಗಾಳಿಯುಲಿತಕ್ಕೆ ಝೇಂಕರಿಸುವಂತೆ ಸಂಗೀತಸುಧೆ ಕಾಳಿಂಗನಲ್ಲಿ ಪುಟಿಯತೊಡಗಿದಳು. ಅಂತರಂಗದಲ್ಲಿದ್ದ ಈ ಉಲುಹು ಬಹಿರಂಗದಲ್ಲೂ ಕಾಣತೊಡಗಿತು. ಅಲ್ಲಿಗೆ ಹರಯದ ಇಪ್ಪತ್ತು ವಸಂತಗಳು ಬಂದು ಕಾಳಿಂಗನನ್ನು ಅಪ್ಪಿಹೋದವು. ಕೋಗಿಲೆಯ ಕಂಠಕ್ಕೆ ವಸಂತದ ಚಿಗುರಿನ ರುಚಿ ಲಭಿಸಿ ಮತ್ತಷ್ಟು ಮಧುರವಾಯಿತು.

## ಕೊಡಲಾರದ ಕಣ್ಣುಗಳು

ಸೊಲ್ಲಾಪುರದಲ್ಲಿ ಭಟ್ಟರ ಕಂಪನಿಯು ಮೊಕ್ಕಾಂ ಹೂಡಿದ ವೇಳೆಯಲ್ಲೇ ಉತ್ತರಾದಿ ಸಂಗೀತದ ಪ್ರತಿಭಾನ್ವಿತ ವಿದ್ವಾಂಸರಾದ ಬಾಲಗಂಧರ್ವರ ಕಂಪನಿಯೂ ಮೊಕ್ಕಾಂ ಹೂಡಿತ್ತು. ಬಾಲ ಗಂಧರ್ವರದು ಸ್ತ್ರೀ ಪಾತ್ರದಲ್ಲಿ ಅಸಾಧಾರಣ ಹೆಸರು. ಅವರಿಗೆ ಸರಿಸಮಾನರಾಗಿ ಸ್ತ್ರೀ ಪಾತ್ರ ಮಾಡುವ ಪುರುಷರಿಲ್ಲವೆಂದೇ ಪ್ರಚಲಿತವಾಗಿತ್ತು. ಸ್ತ್ರೀ ಕಲಾವಿದರಿಗಿಂತಲೂ ಮಿಗಿಲಾದ ಭಾವುಕ ಅಭಿನಯ, ಕೋಗಿಲೆ ಕಂಠ, ಇವೆಲ್ಲಾ ಬಾಲ ಗಂಧರ್ವರು ಗಳಿಸಿದ ಅಪಾರವಾದ ಪ್ರಖ್ಯಾತಿಗೆ ಕಾರಣವಾಗಿದ್ದವು. ಒಂದು ದಿನ ಗಂಧರ್ವರ ನಾಟಕವಿದ್ದರೆ, ಮತ್ತೊಂದು ದಿನ ಭಟ್ಟರ ನಾಟಕವಿರುತ್ತಿತ್ತು. ಕಾಳಿಂಗನ

ಸ್ತ್ರೀಪಾತ್ರಾಭಿನಯದ ಬಗೆಗೆ ತುಂಬಾ ಕೇಳಿದ್ದ ಗಂಧರ್ವರು ತಾವೇ ಬಂದು ಕಾಳಿಂಗನ ಅಭಿನಯವನ್ನೂ ಗಾಯನವನ್ನೂ ನೋಡಿ ತಮ್ಮನ್ನೇ ಮರೆತರು. ಕಾಳಿಂಗನನ್ನು ತಮ್ಮಲ್ಲಿಗೆ ಆಹ್ವಾನಿಸಿ ಉತ್ತರಾದಿ ಸಂಗೀತ ಬೈಟಕ್ ಮಾಡಿಸಿ, ಹರಸಿ ಸನ್ಮಾನಿಸಿದರು. ಭಟ್ಟರನ್ನು ಸ್ವಲ್ಪ ಹತ್ತಿರಕ್ಕೆ ಕರೆದು ದೈನ್ಯದಿಂದ, ಈ 'ಹುಡುಗನನ್ನು ನನಗೆ ಕೊಡುವಿರಾ' ಎಂದರು. ಬಾಲಕ ಕಾಳಿಂಗನನ್ನು ಎಳೆಯತನದಿಂದ ಪ್ರೀತಿಯಿಂದ ಸಾಕಿ ಸಲಹಿದ್ದ ಭಟ್ಟರಿಗೆ ಇದು ಸಾಧ್ಯವೇ? ಕಾಳಿಂಗನ ಅವರ ಸಂಬಂಧ ಕೇವಲ ವ್ಯಾವಹಾರಿಕವಾಗಿರಲಿಲ್ಲ. ಹೃದಯಾಂತರಂಗದಿಂದ ಅವು ಕೂಡಿಹೋಗಿದ್ದವು. ಅವರು ಬಾಲಗಂಧರ್ವರೊಂದಿಗೆ ನಗುತ್ತಲೇ ಹೇಳಿದರು, 'ನನ್ನೆರಡೂ ಕಣ್ಣುಗಳೂ ಕಾಳಿಂಗನೇ ಆಗಿರುವಾಗ ಹೇಗೆ ಕೊಡಲಿ' ಎಂದು. ರಂಗನಾಥ ಭಟ್ಟರು ತಾವೇ ಬೆಳೆಸಿದ ಪೋರ ಕಾಳಿಂಗನಿಗೆ ತಂದೆ, ತಾಯಿ, ಗುರು - ಮೂವರೂ ಆಗಿದ್ದರು. ಅವರು ಕಳಿಸಿದರೂ ಹೋಗಲಾರದಂತೆ ಕಾಳಿಂಗನೂ ಅವರತ್ತ ಬಲವಾದ ಪ್ರೀತಿಯ ಸೆಳೆತ ವಿರಿಸಿಕೊಂಡಿದ್ದ. ಅವರಿಗೆ ಬಾಲ ಕಾಳಿಂಗ ಕಣ್ಣುಗಳಾಗಿದ್ದರೆ, ಆತನಿಗೆ ಭಟ್ಟರು ಹೃದಯವೇ ಆಗಿದ್ದರು.

## ಅಭಿನಯಕ್ಕೆ ತೆರೆ

ಬಾಲಕನಾಗಿ, ಹರಯದ ಹದಿನೇಳರವನಾಗಿ, ಇಪ್ಪತ್ತು ವಸಂತಗಳನ್ನು ಅಪ್ಪಿಕೊಂಡಿದ್ದ ಕಾಳಿಂಗನಿಗೆ ಮತ್ತೆರಡು ವಸಂತಗಳು ಬಂದು ಆಲಂಗಿಸಿ ಹೋದವು. ಒಮ್ಮೊಮ್ಮೆ ಅವು ಬಂದಾಗಲೂ ಚೈತ್ರ್ಯದ ಸಂಭ್ರಮ, ನವಿರುತನ, ಹೊಸಕಾಣಿಕೆಗಳನ್ನು ಕೊಟ್ಟು ಅವನನ್ನು ಮುಂದಕ್ಕೆ ಬೆಳೆಸುತ್ತಿದ್ದವು. ರಕ್ತ ಬಿಸಿಯಾಗುವ ಸ್ತರದಲ್ಲಿ ಆತ ಮುಂದಡಿ ಇಟ್ಟ. ಮುಟ್ಟಿದ್ದೆಲ್ಲಾ ಚಿನ್ನವಾಯಿತು. ಹಾಡಿದ್ದೆಲ್ಲಾ ನಗುವ ಹೂವುಗಳ ಹಾರವಾಗಿ ಶಾರದೆಯ ಕೊರಳನ್ನಲಂಕರಿಸಿದವು. ಕಲೆಯ ಜೀವನದಲ್ಲಿ ಆರೋಹಣದ ಕೊನೆಯ ಅಂಚಿನಲ್ಲಿರುವಾಗಲೇ, ಅದುವರೆವಿಗೂ ತಿಳಿಯದಿದ್ದ ಹೊಸ ಅನುಭವಗಳು ಎದುರಾದವು.

ಇವನ ಹೃದಯದಂತಿದ್ದ ಭಟ್ಟರ ಕಂಪನಿ ತನ್ನ ಅವಸಾನದತ್ತ ದಾಪುಗಾಲು ಹಾಕಿತ್ತು. ತರುಣ ಕಾಳಿಂಗ ತನ್ನ ಬಾಳನ್ನು ಬೆಳಕು ಮಾಡಿದ ತಂದೆ, ತಾಯಿ ಹಾಗೂ ಗುರು ಸಮಾನರಾದ ಭಟ್ಟರಿಗೆ ಭದ್ರವಾದ

ಊರುಗೋಲಾಗಿ ನಿಲ್ಲಲು ನಿರ್ಧರಿಸಿದ. ತನಗೆ ತಿಳಿದವರ ಸಲಹೆ, ನೆರವನ್ನು ಬೇಡಿದ. ಬೇಡಿದೊಡನೆಯೆ ಹತ್ತು, ಇಪ್ಪತ್ತು ಭುಜಗಳು ಆಸರೆಗೆ ದೊರೆತವು. ಒಂದು ಶುಭದಿನದಲ್ಲಿ ಕಂಪನಿಯ ಸಂಪೂರ್ಣ ಹೊಣೆಯನ್ನು ಹರಯದ ಕಾಳಿಂಗನೇ ಏಕಾಂಗಿಯಾಗಿ ಹೊತ್ತುಕೊಂಡ. ಆರ್ಥಿಕ ಹೊಡೆತದಿಂದ ತೊಂದರೆಗೊಳಗಾದ ಭಟ್ಟರನ್ನು ಮೇಲೆ ಎತ್ತಿ ನೆಮ್ಮದಿಯಲ್ಲಿರಿಸಿ, ತಾನೇ ಆತಂಕದ ಭಾರವನ್ನು ಹೆಗಲಿಗೆಳೆದುಕೊಂಡ ಕಾಳಿಂಗನ ಮೊದಲ ಹಾದಿ ಸುಗಮವಾಗಿಯೇ ಇತ್ತು. ಆ ವೇಳೆಗೆ ಬಿ. ಸುಶೀಲ ಎನ್ನುವ ಪ್ರಸಿದ್ಧ ಅಭಿನೇತ್ರಿ ನಾಯಕಿಯ ಪಾತ್ರಕ್ಕೆ ಸಿದ್ಧಳಾಗಿದ್ದಳು. ನಾಯಕನ ಪಾತ್ರಕ್ಕೆ ತರುಣ ಕಾಳಿಂಗನೇ ಸೂಕ್ತನಾಗಿದ್ದ. ಸುಶೀಲಾಳ ಸೋದರ ಮಹಾಬಲರಾವ್ ಎನ್ನುವವರೇ ಹಾಸ್ಯ ಪಾತ್ರದ ನಿರ್ವಹಣೆ ಮಾಡುತ್ತಿದ್ದರು. ಮಹಾಲಿಂಗರಾವ್ ಎನ್ನುವರು ಹಾರ್ಮೋನಿಯಂ ನುಡಿಸುತ್ತಿದ್ದರು. ಹಳೆ ಕರ್ನಾಟಕದತ್ತ ಕಂಪನಿಯನ್ನು ತೆಗೆದುಕೊಂಡು ಬಂದು, ಚಿಕ್ಕಬಳ್ಳಾಪುರ, ಬೌರಿಂಗ್‌ಪೇಟೆ, ಬೆಂಗಳೂರು (ತುಳಸಿ ತೋಟದ ಥಿಯೇಟರಿನಲ್ಲಿ) ಮುಂತಾದೆಡೆಯಲ್ಲಿ ಕ್ಯಾಂಪ್ ಆರಂಭಿಸಿದರು. 'ರಾಯರ ಸೊಸೆ' ಎನ್ನುವ ಸಾಮಾಜಿಕ ನಾಟಕ ಇಲ್ಲೆಲ್ಲ ಪ್ರದರ್ಶನಗೊಂಡಿತು. ಕಲಾಭಿಮಾನಿಗಳು ಸಂಭ್ರಮದಿಂದ ಸ್ವಾಗತಿಸಿದ ಈ ನಾಟಕಕ್ಕೆ ಬಿ.ಎಂ.ಶ್ರೀ, ಮಾಸ್ತಿ, ಅನಕೃ, ಸಿ.ಕೆ. ವೆಂಕಟರಾಮಯ್ಯ, ಟಿ. ಚೌಡಯ್ಯ (ಪಿಟೀಲು) ಮುಂತಾದವರ ಮೆಚ್ಚುಗೆಯೂ ದೊರಕಿತು. ಈ ನಾಟಕ ಜಯಭೇರಿ ಗಳಿಸಿತು. ಮೇಲೆ ಮೇಲೆ ನೂರಾರು ಪ್ರದರ್ಶನವನ್ನು ಪಡೆಯಿತು. ಆದರೆ ಹೊಸ ಅನ್ವೇಷಣೆಗಳತ್ತ ಭರದಿಂದ ಸಾಗುತ್ತಿದ್ದ ಆಸೆ-ಮನಸ್ಸಿನ ಕಾಳಿಂಗನಿಗೆ ಇದರಿಂದ ಮಾನಸಿಕ ಲಾಭವೇನೂ ಆಗಲಿಲ್ಲ. ಗುರುಗಳಾದ ಭಟ್ಟರ ಸಾಮೀಪ್ಯ ಇಲ್ಲದಿರುವುದು, ಹೆಚ್ಚಿದ ಜವಾಬ್ದಾರಿಯ ಹೊಣೆಗಾರಿಕೆ, ಕಲಾಶಿಕ್ಷಣದ ಅನ್ವೇಷಣೆಯ ಬದಲು ಉದರನಿಮಿತ್ತವಾದ ವ್ಯವಹಾರ, ಇವು ಆತನಲ್ಲಿ ಕ್ರಮೇಣ ನಿರಾಸಕ್ತಿ ಮೂಡಿಸತೊಡಗಿದುವು. ಕಂಪನಿಯ ಯಜಮಾನನಾಗಿದ್ದುದರಿಂದ ಕಾಳಿಂಗ ಹೆಸರಿನ ಮುಂದೆ 'ರಾಯ' ಎನ್ನುವ ಗೌರವ ವಿಶೇಷಣವೂ ಸೇರಿ, ಕಾಳಿಂಗರಾಯನಾದ. ಸಂಗೀತದ ರಿಯಾಝು ಹಿಂದೆ ಹಿಂದಕ್ಕೆ ಹೋಗುತ್ತಿರುವಂತೆ ಭಾಸವಾಗತೊಡಗಿತು. ಹಾಗೂ ಹೀಗೂ ಎಂಟು

ತಿಂಗಳು ಭಟ್ಟರ ಕಂಪನಿಯ ಭಾರವನ್ನು ಹೊತ್ತ ಕಾಳಿಂಗರಾಯ ಹೆಗಲಿನ ಮೇಲಿನ ಭಾರವನ್ನು ಒಮ್ಮೆಲೆ ಇಳಿಸಿಕೊಂಡು ಮತ್ತೆ ಹಗುರಾದ. ಬಣ್ಣದ ಬದುಕಿನ ಅಂಬಾಪ್ರಸಾದಿತ ಕಂಪನಿಯ ರಂಗಕ್ಕೆ ತೆರೆಬಿತ್ತು.

## ಮೌನದಲ್ಲಿ ಕರಗಿದ ಗೆಜ್ಜೆದನಿ

'ಅಂಬಾಪ್ರಸಾದಿತ' ಕಂಪನಿಗೆ ತೆರೆ ಎಳೆದ ಕಾಳಿಂಗರಾಯ ನೇರ ನಡೆದದ್ದು ತಾಯಿ ನಾಗಮ್ಮನವರಿದ್ದ ಸೂರಾಲಿನೆಡೆಗೆ. ಮಾವ ಮಂಜಯ್ಯ ತಮ್ಮ ತಂಗಿಯ ಮಗನ ಕೀರ್ತಿಯನ್ನು ಕೇಳಿ ಆನಂದಪಟ್ಟಿದ್ದರು. ತಾವು ಬದುಕಿರುವವರೆಗೆ ನಾಗಮ್ಮನವರ ಯೋಗಕ್ಷೇಮವನ್ನು ನೋಡಿಕೊಂಡರು. ಕಾಳಿಂಗರಾಯರು ಭಟ್ಟರ ಕಂಪನಿ ಬಿಟ್ಟು ವಾಪಸ್ಸು ಬಂದಾಗ ಮಾವ ಮಂಜಯ್ಯನವರು ಇಹಲೋಕದ ಯಾತ್ರೆ ಮುಗಿಸಿದ್ದರು. ನಾಗಮ್ಮ ತಮ್ಮ ಬದುಕಿಗಾಗಿ ಅರಮನೆಯಲ್ಲಿಯೇ ತಮ್ಮ ಕೈಲಾದ ಕೆಲಸ ಮಾಡಿಕೊಂಡಿದ್ದರು. ಛಲಗಾತಿಯಾಗಿದ್ದ ಆಕೆ ಬದುಕಿಗೆ ಎಂದೂ ಬೆನ್ನು ಮಾಡಿ ಕುಳಿತುಕೊಳ್ಳಲಿಲ್ಲ. ಯಾವುದಕ್ಕೂ ಸಿದ್ಧ ಎಂದು ತೋರಿಸಿದ್ದರು. ಗೆಜ್ಜೆ ಪುಟ್ಟಯ್ಯ ಮರುವಿವಾಹವಾಗಿ ರಾಮಕೃಷ್ಣ, ಸದಾಶಿವ ಎನ್ನುವ ಎರಡು ಗಂಡು ಮಕ್ಕಳನ್ನೂ, ಸೀತಮ್ಮ ಎನ್ನುವ ಹೆಣ್ಣುಮಗಳೊಬ್ಬಳನ್ನು ಪಡೆದಿದ್ದರು. ನಾಗಮ್ಮ ಯಾವುದೇ ಉದ್ವೇಗ, ಏರಿಳಿತಗಳನ್ನು ತೋರಿಸಿಕೊಳ್ಳದೆ, ಶಾಂತವಾಗಿ ಅಣ್ಣನೊಡನೆ ಬಾಳಿದರು. ಎಂದೂ ಪತಿಯನ್ನು ನಿಂದಿಸಲಿಲ್ಲ. ಪತಿ ಪುಟ್ಟಯ್ಯನವರು ನಾಗಮ್ಮನವರನ್ನು ಹೆಂಡತಿ ಎಂದು ಹೃದಯಕ್ಕೆ ಸೆಳೆದುಕೊಳ್ಳದಿದ್ದರೂ, ಆಕೆ ಮಾತ್ರ ನಿಸ್ವಾರ್ಥ ಪ್ರೇಮವನ್ನೇ ವ್ಯಕ್ತಪಡಿಸಿದರು. ಒಂಟಿಯಾಗಿ ಇದ್ದೇ ಆತ್ಮಾಭಿಮಾನ ಮೆರೆದರು. ಗೆಜ್ಜೆ ಪುಟ್ಟಯ್ಯನವರ ಗೆಜ್ಜೆದನಿ ಒಂದು ದಿನ ಮೌನದಲ್ಲಿ ಕರಗಿಹೋಯಿತು. ಅಂದಿಗೆ ನಾಗಮ್ಮ ಕಡೆಯ ಬಾರಿ ಪತಿಯ ಮುಖದರ್ಶನ ಮಾಡಿ ಬಂದರು. ಪಾಂಡೇಶ್ವರದಲ್ಲಿ ನಾಗಮ್ಮನಿಗಿದ್ದ ಕಡೆಯ ದೀಪ ಆರಿಹೋಗಿತ್ತು.

ನಮ್ಮ ಕಾಳಿಂಗರಾಯರು ಭಟ್ಟರ ಕಂಪನಿಯಿಂದ ತನ್ನ ಹುಟ್ಟೂರಿಗೆ ಪಯಣ ನಡೆಸುವ ವೇಳೆಗೆ ಈ ಘಟನೆಗಳೆಲ್ಲಾ ಘಟಿಸಿ

ಹೋಗಿದ್ದವು. ಕಾಳಿಂಗರಾಯರಿಗೆ ರಂಗನಾಥ ಭಟ್ಟರು ತೋರಿಸಿದ ಅವ್ಯಾಜ್ಯವಾದ ಪ್ರೀತಿಯನ್ನು ಬಿಟ್ಟರೆ, ತಂದೆಯ ಪ್ರೀತಿಯಾಗಲಿ, ಅಣ್ಣ ತಮ್ಮಂದಿರೊಡನೆ ಕೂಡಿ ಆಟವಾಡುವ ಭಾಗ್ಯವಾಗಲಿ ಅಜ್ಜ ಅಜ್ಜಿಯರೊಂದಿಗೆ ನಡೆಸಿದ ಮುದ್ದಾಟದ, ಕಥೆ ಕೇಳುವ, ಆಟ-ಪಾಠಗಳಾಗಲಿ, ಅಕ್ಕಪಕ್ಕದವರೊಡನೆ ಒಡನಾಡುವ ಸೌಭಾಗ್ಯವಾಗಲಿ, ಉಹ್ಞಂ! ಯಾವುವೂ ದೊರೆಯಲಿಲ್ಲ. ಪುಟ್ಟಯ್ಯನವರು ಅನ್ಯರ ಮಾತಿನ ಒತ್ತಡಗಳಿಂದ ಹೆಂಡತಿ ನಾಗಮ್ಮ ಮತ್ತು ಮುದ್ದಾದ ಮಗ ಕಾಳಿಂಗನನ್ನು ಎಂದೂ ಬಾಚಿ ತಬ್ಬಿಕೊಳ್ಳಲಿಲ್ಲ. ಕಾಳಿಂಗರಾಯರಿಗೆ ಜೀವನದಲ್ಲಿ ಈ ಸುಖ ವಂಚಿತವಾಯಿತು ಎನ್ನದೆ ವಿಧಿ ಇಲ್ಲ.

## ಹೂವಾದ ಹರಯ

ಸಮಾಜದಲ್ಲಿ ಕುಟುಂಬ ಎನ್ನುವ ವ್ಯವಸ್ಥೆ ಹೇಗೆ ವ್ಯಕ್ತಿಯ ಹುಟ್ಟಿನಿಂದ ಸಾವಿನವರೆವಿಗೆ ಆತನ ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಬೆನ್ನೆಲುಬಾಗಿರುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಮಾನವನ ಸುಸಂಸ್ಕೃತವಾದ ಜೀವನಕ್ಕೆ ಕುಟುಂಬದಲ್ಲಿನ ತಂದೆ, ತಾಯಿ, ಅಣ್ಣ, ತಮ್ಮ, ತಂಗಿ, ಅಕ್ಕ ಹೀಗೆ ಎಲ್ಲರೊಡಗೂಡಿ ಬೆಳೆಯುವುದೇ ಬದುಕಿನ ಮೊದಲ ಪಾಠ. ಶಿಶು ತನ್ನ ಬಾಲ್ಯದಿಂದಲೇ ತಂದೆ ಕಲಿಸುವ ಶಿಸ್ತಿನಿಂದ, ತಾಯಿ ಕಲಿಸುವ ಮುಗ್ಧ ಪ್ರೀತಿಯಿಂದ, ಅಣ್ಣ ತಮ್ಮಂದಿರಾಗಲಿ, ಅಕ್ಕತಂಗಿಯರಾಗಲಿ ಕಲಿಸುವ ನಿಸ್ವಾರ್ಥತೆಯಿಂದ ರೂಪುಗೊಳ್ಳುತ್ತದೆ. ಶಾಲೆಯಲ್ಲಿ ಹಂಚಿದ ಸಿಹಿಯನ್ನು ಜತನವಾಗಿ ಉಳಿಸಿಕೊಂಡು ತಮ್ಮನಿಗೆ ತಂದು ಉಣಿಸುವ ಅಣ್ಣನ ಪ್ರೀತಿಯಲ್ಲಿ ನಿಸ್ವಾರ್ಥ ಪ್ರೇಮ ಎದ್ದು ಕಾಣುತ್ತದೆ. ಅಕ್ಕ ತಮ್ಮನ ಕೆನ್ನೆಯ ಮೇಲೆ ಬಾಗಿ ಮುತ್ತನ್ನಿಡುತ್ತ ತನ್ನ ಪುಟ್ಟ ಕೈಗಳಿಂದ ತಮ್ಮನ ಕೊರಳನ್ನು ಅಪ್ಪಿ ಹಿಡಿಯುವ ಸ್ವಾಭಾವಿಕ ಕ್ರಿಯೆಯಲ್ಲಿ ಎಂತಹ ಆಳವಾದ ಮುಗ್ಧವಾದ ಪ್ರೀತಿಯಿದೆ, ಸೆಳೆತವಿದೆ...... ಆದರೆ ಇದ್ಯಾವುದೂ ನಮ್ಮ ಕಾಳಿಂಗರಾಯರನ್ನು ಸೋಂಕಲೇ ಇಲ್ಲ. ಬಾಲ್ಯದಿಂದಲೇ ಪ್ರೀತಿ, ಪ್ರೇಮದ ಅಮೃತ ಸಿಂಚನದ ಬದಲು, ಅವರಿಗೆ ದೊರಕಿದ್ದು ತನ್ನವರಿಂದ ಅಗಲಿಕೆ, ಶಿಸ್ತಿನ ಕಲಾಶಿಕ್ಷಣ, ನಟನೆಯ

ವೃತ್ತಿ ಜೀವನ. ಇದೆಲ್ಲಾ ಕಾಳಿಂಗರಾಯರ ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರಿದವು. ತನ್ನ ಜೊತೆಯವರೊಡನೆ ಸರಿಸಮಾನವಾದ ಕೌಟುಂಬಿಕ ಹಿನ್ನೆಲೆ, ಸ್ಥಿತಿಗತಿಗಳು ತನಗಿಲ್ಲ ಎಂಬುದು ವೇದ್ಯವಾದೊಡನೆಯೇ ಅವರ ಮನಸ್ಸು ಮತ್ತಷ್ಟು ಏಕಾಂತತೆಯನ್ನು ಬಯಸಿತು. ಹೃದಯ ಅಂತರಂಗದ ಹೊತ್ತಿಗೆಯಲ್ಲಿ ಬಾಲ್ಯದ ನೋವುಗಳೆಲ್ಲಾ ಗುರುತು ಮಾಡಿಸಿ ತಮ್ಮ ಇರವನ್ನು ಬಚ್ಚಿಟ್ಟವು. ಕಾಲ ಬಂದಾಗ ಇದಕ್ಕೆ ತಕ್ಕ ಉತ್ತರ ಕೊಡುತ್ತೇನೆಂದ ಕಾಳಿಂಗರಾಯ ಮುಖದಲ್ಲಿ ಬಾಡದ ಮಲ್ಲಿಗೆ ನಗುವನ್ನು ಶಾಶ್ವತವಾಗಿ ಸ್ಥಾಪಿಸಿಕೊಂಡ. ತಾನು ಸಾಗಬೇಕಾದ ಗುರಿಯನ್ನು ಮಾತ್ರ ಮರೆಯಲಿಲ್ಲ. ಸೂರಾಲಿಗೆ ಬಂದ ಮಗನನ್ನು ಕಂಡ ನಾಗಮ್ಮನ ಕಣ್ಣುಗಳರಳಿದವು. ಬಾಲಕನಾಗಿದ್ದ ಮಗ ಹರಯಕ್ಕೆ ಬಂದಿದ್ದ. ಕತ್ತಲೆಯನ್ನು ಹೊಡೆದೋಡಿಸುವಂತಹ ಮುಖಕಾಂತಿಯಿಂದ ಹೊಳೆಯುತ್ತಿದ್ದ. ಕಲ್ಲುಗಳಿಗೂ ಜೀವ ಬರಿಸುವಂತಹ ಚುರುಕು ಮಾತು, ಬಾಡಿಹೋದ ಹೂವುಗಳಿಗೂ ಮತ್ತೆ ಮೊಗ್ಗಾಗಿ ಹರಯ ತುಂಬುವ ಮೋಹಕ ನಗು, ಆಕರ್ಷಕ ನಿಲುವು, ಸೊಂಪಿನ ಕಪ್ಪನೆ ಕೇಶರಾಶಿ, ತನ್ನ ಮಗ ಅಸಾಮಾನ್ಯ ರೂಪವಂತ ಎನ್ನುವುದು ಹೆಮ್ಮೆ ತಂದಂತೆ, ಮುಂದಿನ ವಿಚಾರಗಳೂ ಆಕೆಯ ಮನಸ್ಸಿನಲ್ಲಿ ಹಾದುಹೋದವು. ದೂರದೂರಿನಲ್ಲಿ ಇಂತಹ ಚೆಲುವಾಂತ ಚೆನ್ನಿಗನನ್ನು ಏಕಾಂಗಿಯಾಗಿ ಬಿಡಲಾದೀತೇ?....ಆಕೆ ತನ್ನ ಅಕ್ಕ ಸುಬ್ಬಮ್ಮ (ದೊಡ್ಡಮ್ಮನ ಮಗಳು)ನ ಮೊಮ್ಮಗಳಾದ ಮೀನಾಕ್ಷಿಯೆಂಬ ಹನ್ನೆರಡು ವರುಷದ ಸುಂದರ ಹುಡುಗಿಯನ್ನು ಒಂದು ಶುಭದಿನದಲ್ಲಿ ಸೊಸೆಯಾಗಿ ತಂದೇ ಬಿಟ್ಟಳು. ತಾಯಿಯ ಮಾತನ್ನು ಹೃದಯಪೂರ್ವಕವಾಗಿ ಒಪ್ಪಿಕೊಂಡ ತರುಣ ಕಾಳಿಂಗರಾಯ ಮನಃಪೂರ್ವಕವಾಗಿ ಮುಗ್ಧ ಮೀನಾಕ್ಷಿಯನ್ನು ವರಿಸಿದ.

## ಎರಳೆ ಕಂಗಳ ಮೀನಾಕ್ಷಿ

ಹರಯದ ಮನ್ಮಥ ಕಾಳಿಂಗರಾಯ ಕೈಹಿಡಿದದ್ದು ಎರಳೆ ಕಂಗಳ ಮುಗ್ಧ ಮನದ ಹುಡುಗಿ ಮೀನಾಕ್ಷಿಯನ್ನು ಹಾಲುಗಲ್ಲದ, ಬಿಳುಪು ಮಿಶ್ರವಾದ ಕೆಂಪು ಕೆನ್ನೆಯ ಹುಡುಗಿ ಮೀನಾಕ್ಷಿ ಆಗಿನ್ನೂ ಹನ್ನೆರಡರ ಹೊಸಿಲಲ್ಲಿ ಆಡುವ ಪುಟ್ಟ ಹುಡುಗಿ. ಕಾಳಿಂಗರಾಯನಿಗೆ ಇಪ್ಪತ್ತೆರಡರ

ಪ್ರಾಯ. ಎಳ್ಳು ಹೂವಿನಂತಿದ್ದ ಆಕೆಯೋ ನಾಚಿಕೆಯ ಮುದ್ದೆ. ರಾಯನಿಗೋ ಆಕೆಯನ್ನು ಮಾತನಾಡಿಸುವ ಬಯಕೆ. ಇಬ್ಬರಿಗೂ ಇದ್ದ ವಯಸ್ಸಿನ ಅಂತರದ ಕಂದರ ಹತ್ತು ವರುಷಗಳದ್ದು. ನಾಗಮ್ಮನವರ ಆಸೆಯಂತೂ ನೆರವೇರಿತು. ಆದರೆ ಕಾಳಿಂಗರಾಯ ಮದುವೆಯಾಗಿಯೂ ಬ್ರಹ್ಮಚಾರಿಯಾಗಿಯೇ ಉಳಿದ. ಎರಳೆ ಕಂಗಳ ಮೀನಾಕ್ಷಿಯೋ ಎದುರಿಗೂ ಬಾರಳು. ಕಣ್ತುಂಬಾ ತುಂಬಿಕೊಳ್ಳುವ ಎಳೆಯ ಸೌಂದರ್ಯದ ದರುಶನವೂ ಕಾರ್ಗಾಲದ ಮಿಂಚಿನಂತೆ ಆಗೊಮ್ಮೆ....ಈಗೊಮ್ಮೆ. ಆಸೆಯ ಮಾತನಾಡಿಯಾದರೂ ಸಾಮೀಪ್ಯ ಸಿಗಲಿ ಎಂದು ಹಂಬಲಿಸಿದರೆ, ಅವಳೋ ಹುಲ್ಲೆಯಂತೆ ಒಳಗೂ, ಹೊರಗೂ ಚಿಮ್ಮಿ ಜಿಗಿಯುವಳು. ಧ್ವನಿಯೋ ನೀರಿನಲ್ಲಿ ವೀಣೆ ಮಿಡಿದಂತೆ. ಈ ಚಡಪಡಿಕೆಯಲ್ಲಿ ಕಾಳಿಂಗರಾಯ ತಳಮಳಿಸಿದ. ಅದು ಅವನಿಗೆ ಮಾತ್ರ ಗೊತ್ತಿತ್ತು. ಪ್ರೀತಿಗಾಗಿ ಹಂಬಲಿಸಿ ಮಿಡಿದ ಹೃದಯ ತನ್ನ ಮನದ ಕಹಿ ಅನುಭವಗಳನ್ನು ಎದೆಯ ಹೊತ್ತಿಗೆಯ ಒಳಪುಟದಲ್ಲಿ ದಾಖಲು ಮಾಡಿಕೊಂಡಿತು. ಹೊರಮುಖದಲ್ಲಿ ಎಂದಿನಂತೆ ಸೋಗಿನ ನಗೆ, ನವಿಲಿನ ನಡೆ, ಹೊತ್ತಿದ್ದ ಕಾಳಿಂಗರಾಯ ಸದಾಕಾಲ ಹಸನ್ಮುಖಿಯೇ.

## ಹೊಸ ದಿಗಂತದತ್ತ ಹೊರಟಾಗ

ಮೀನಾಕ್ಷಿ ಕಾಳಿಂಗರಾಯನನ್ನು ವರಿಸಿದ್ದಾಗ ತನ್ನ ಗೆಳತಿಯರೊಡನೆ ಆಡುತ್ತಿದ್ದ ವಯಸ್ಸು. ಸಂಸಾರದ ಹೊರೆಯನ್ನು ಹೊರಲಾರದ ಮನಸ್ಸು, ಮಾಗದ ಒಡಲ ತುಂಬಾ ಆತಂಕದ ಕಡಲು. ನಿತ್ಯವೂ ಹೊಸತನ್ನು ಅಪೇಕ್ಷಿಸುವ ಕಾಳಿಂಗರಾಯ ನಿಂತಲ್ಲಿ ನಿಲ್ಲಲಾರದವನಾಗಿದ್ದ. ಕಲಿತ ಸಂಗೀತ ಎದೆಯಲ್ಲಿಯೇ ಗುನುಗುತ್ತಾ ಹೊಸ ಅಂಕಣಕ್ಕೆ ಹಾದಿ ತೆರೆಯತೊಡಗಿತು. ಹೊಸ ಸಂಗೀತದ ಅಲೆ ಎದೆಗೆ ಸುತ್ತಮುತ್ತಲಿಂದ ನುಗ್ಗತೊಡಗಿತು. ಹೊಸ ದಾರಿಯರಸಿ ಹೊರಟ ರಾಯ ದೂರದ ಮದರಾಸಿಗೆ ಬಂದ. ಸ್ವಲ್ಪ ದಿನಗಳ ಕಾಲ ಶಾಸ್ತ್ರೀಯ ಸಂಗೀತದ ಬೋಧನಾವೃತ್ತಿಯನ್ನು ನಡೆಸಿದ. ಅಲ್ಲಿಯೂ ಬೇಸರವಾಗಿ ಪಾಶ್ಚಾತ್ಯ ಸಂಗೀತದ ಹೊಸ ವಾತಾವರಣದಲ್ಲಿ ತನ್ನನ್ನು ತಾನೇ ತೊಡಗಿಸಿಕೊಂಡ. ಚಲನಚಿತ್ರ ಸಂಗೀತದ ಸೆಳೆತವೂ ಅವನನ್ನು

ತೆಕ್ಕೆಗೆ ತೆಗೆದುಕೊಂಡಿತು. ಆಧುನಿಕ ಪ್ರಪಂಚದ ಹೊಸ ಸಂಗೀತದ ಅಲೆಯಲ್ಲಿ ಕಾಳಿಂಗರಾಯ ತೋಯ್ದುಹೋದ. ಅಲ್ಲಿಯವರೆವಿಗೆ ಆತ ಕಲಿಯದ ಹೊಸ ಅಲೆಯ ಸಂಗೀತ ಆತನಿಗರಿವಾಗದಂತೆಯೇ ಆತನ ಮೈ ಮನಸ್ಸುಗಳಿಗೆ ದಕ್ಕಿ ಹೋಯಿತು.

ಈ ವೇಳೆಗೆ ಮದರಾಸಿನಲ್ಲಿ ದಾಕ್ಷಿಣಾತ್ಯ ಚಿತ್ರರಂಗದ ಅಂದಿನ ಹೆಸರಾಂತ ನಿರ್ಮಾಪಕ - ನಿರ್ದೇಶಕರಾದ, ಕೆ. ಸುಬ್ರಹ್ಮಣ್ಯ ಅವರು ಕಾಳಿಂಗರಾಯನನ್ನು ತಮ್ಮ ಚಿತ್ರಕ್ಕೆ ಸಂಗೀತ ನಿರ್ದೇಶಿಸಬೇಕೆಂದು ಆಹ್ವಾನವಿತ್ತರು. ಕಾಳಿಂಗರಾಯ ಗರಿಕೆದರಿದ ನವಿಲಿನಂತೆ ಸಂತೋಷದಿಂದ ಒಪ್ಪಿಕೊಂಡ. ಸದಾ ಹೊಸ ಬಗೆಯನ್ನು ಅನ್ವೇಷಿಸುತ್ತಿದ್ದ ಆತನಿಗಂತೂ - ಉತ್ಸಾಹ ಮೇರೆ ಮೀರಿ ಹಾರಿತು. 'ಪ್ರೇಮಸಾಗರ'ವೆಂಬ ತಮ್ಮ ಪ್ರಪ್ರಥಮ ಸಂಗೀತ ನಿರ್ದೇಶನದಲ್ಲಿ ಹೊಸ ದಿಗಂತಗಳತ್ತ ದಿಟ್ಟಿಸಿ ನೋಡಿ ಯಶಸ್ಸನ್ನು ಪಡೆದ. ಇದೇ ಯಶಸ್ಸಿನ ಹಾದಿಯಲ್ಲಿ ಇದೇ ನಿರ್ಮಾಪಕರ ತಮಿಳು ಚಿತ್ರವೊಂದರ ಸಂಗೀತ ನಿರ್ದೇಶನವನ್ನು ಮಾಡಲು ಹೊರಟ ರಾಯನಿಗೆ ತನ್ನ ಪ್ರಯೋಗಶೀಲತೆಯ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಸನ್ನಿವೇಶ ಬಂದೊದಗಿ ಅರ್ಧವಲ್ಲಿಯೇ ಆ ಚಿತ್ರಕ್ಕೆ ಕೈಮುಗಿದು ಹೊರಗೆ ಬಂದ.

## ದೊಡ್ಡಮ್ಮನ ಪ್ರೀತಿಯ ಸೆಲೆಯಾದ ಮೀನಾಕ್ಷಿ

ಮದುವೆಯಾಗಿ ಹೆಂಡತಿಯನ್ನು ಅತ್ತೆಯ ಮನೆಯಲ್ಲಿಯೇ ಬಿಟ್ಟು ಕಾಳಿಂಗರಾಯ ಮದರಾಸಿಗೆ ಬಂದ. ಮುದ್ದು ಹುಡುಗಿ ಮೀನಾಕ್ಷಿ ತನ್ನ ದೊಡ್ಡಮ್ಮನ ಮನೆಯಾದ (ಮಂದರ್ತಿಯ ಮುಂದೆ) ಕೊತ್ತೂರಿನಲ್ಲಿ ಹೋಗಿ ಸೇರಿದಳು. ಬಾಲ್ಯದಿಂದಲೂ ಇಬ್ಬರು ದೊಡ್ಡಮ್ಮಂದಿರ ಆರೈಕೆಯಲ್ಲಿ ಬೆಳೆದ ಮೀನಾಕ್ಷಿಯ ಮದುವೆಯನ್ನು ಚಿಕ್ಕ ದೊಡ್ಡಮ್ಮನೇ ಪ್ರೀತಿಯಿಂದ ಮಾಡಿದ್ದರು. ಮಕ್ಕಳಿಲ್ಲದ ಅವರಿಗೆ ಮೀನಾಕ್ಷಿಯೇ ಪ್ರೀತಿಯ ಸೆಲೆಯಾಗಿದ್ದಳು. ಮೇಗರಹಳ್ಳಿಯಲ್ಲಿ ವಾಸವಾಗಿದ್ದ ದೊಡ್ಡ ದೊಡ್ಡಮ್ಮನಿಗೂ ಮೀನಾಕ್ಷಿ ಪ್ರೀತಿಯ ಕಣ್ಮಣಿಯಾಗಿದ್ದಳು.

ಮೀನಾಕ್ಷಿಯ ತಾಯಿ ಚಂದ್ರಮ್ಮನಿಗೆ ಬಾರಕೂರಿನಲ್ಲಿ ಸ್ವಂತ ಮನೆಯಿತ್ತು. ಅರ್ಧ ಎಕರೆ ಜಾಗದಲ್ಲಿ ಮನೆ, ನಾಲ್ಕೈದು ತೆಂಗಿನ

ಮರಗಳಿದ್ದವು. ಪತಿ (ಸೋಮಶೇಖರಯ್ಯ) ಅದೇ ಊರಿನಲ್ಲೇ ಮತ್ತೊಬ್ಬ ಪತ್ನಿಯೊಂದಿಗೆ ವಾಸವಾಗಿದ್ದುದರಿಂದ, ತನ್ನ ತವರು ಮನೆಯಲ್ಲಿಯೇ ಉಳಿದುಕೊಂಡು ಸಣ್ಣ ಹೋಟೆಲನ್ನು ನಡೆಸುತ್ತಿದ್ದರು. ಹೋಟೇಲಿನಲ್ಲಿ ತಾವೇ ಅಡಿಗೆ, ವಗೈರೆ ಕೆಲಸ ಮಾಡುತ್ತಾ, ಗಿರಾಕಿಗಳಿಗೆ ತಿಂಡಿ ಊಟ ಸರಬರಾಜು ಮಾಡುತ್ತಿದ್ದರು. ಮಗ ಗುರುರಾಜನೂ ತಾಯಿಗೆ ಸಹಕರಿಸುತ್ತಿದ್ದ. ಮನೆಯ ಸುತ್ತ ನಾಲ್ಕಾರು ತೆಂಗಿನ ಮರಗಳು ಇದ್ದವು. ಗುರುರಾಜ ತಾಯಿಯೊಡನೆ ಇದ್ದ. ಸೋಮಶೇಖರಯ್ಯ ವಿಶ್ವಕರ್ಮ ಜಾತಿಯ (ಮರಗೆಲಸ ಮಾಡುವ) ಹೆಂಗಸಿನೊಂದಿಗೆ ಇದ್ದು, ಸಣ್ಣ ಬೀಡಾ ಅಂಗಡಿ ಇಟ್ಟುಕೊಂಡಿದ್ದ.

## ಶಿಷ್ಯೆಯರಾದ ಸೋಹನ್ ಮತ್ತು ಮೋಹನ್

ಸಂಗೀತದ ಬಗೆಗೆ ಕಾಳಿಂಗ ರಾಯನಿಗಿದ್ದ ಅಪಾರ ಜ್ಞಾನ, ಸಂಶೋಧನ ಪ್ರವೃತ್ತಿಯನ್ನು ಗುರುತಿಸಿದ ದಕ್ಷಿಣ ಹಿಂದಿ ಪ್ರಚಾರ ಸಭೆಯವರು ಆತನನ್ನು ತಮ್ಮ ಹಿಂದಿ ಸಂಗೀತ ಕಾಲೇಜಿನ ಪ್ರಿನ್ಸಿಪಾಲರ ಹುದ್ದೆಗೆ ಆಮಂತ್ರಿಸಿ ವಿನಂತಿಸಿಕೊಂಡರು. ಕಾಳಿಂಗರಾಯ ಈ ಹುದ್ದೆಯನ್ನು ಅಲಂಕರಿಸಿ ಶಾಸ್ತ್ರೀಯ ಹಿಂದೂಸ್ತಾನಿ ಸಂಗೀತದ ಸ್ಥಿತಿಯನ್ನು ಉತ್ತಮಪಡಿಸಿದ. ಕಾಳಿಂಗರಾಯನ ಕೀರ್ತಿ ದಿನೇ ದಿನೇ ಬೆಳೆಯುತ್ತಾ ಬಂದಿತು. ನೂರಾರು ಶಿಷ್ಯರು ಸಂಗೀತ ಕಲಿಯಲು ಇವರ ಬಳಿ ಬಂದರು. ಅವರಲ್ಲಿ ಪ್ರಮುಖರಾದವರು ಸೋಹನ್‌ಕುಮಾರಿ ಮತ್ತು ಮೋಹನ್‌ಕುಮಾರಿಯರೆಂಬ ಸೋದರಿಯರು. ಸುಶ್ರಾವ್ಯವಾಗಿ ಹಾಡುತ್ತಿದ್ದ ಇವರಿಬ್ಬರು ಅತ್ಯಂತ ಚೆಲುವೆಯರೂ ಆಗಿದ್ದರು. ಕಾಳಿಂಗರಾಯನ ಜೀವನ ಸಂಗೀತ ಈ ಸೋದರಿಯರಿಬ್ಬರಿಂದಲೇ ಅತ್ಯಂತ ಪ್ರಭಾವಶಾಲಿಯಾಗಲು ಕಾರಣವಾಯಿತು ಎಂಬುದು ಗಮನಾರ್ಹವಾದುದು.

## ತನ್ನನ್ನೇ ತಾನು ಕಳೆದುಕೊಂಡಾಗ

ಕಾಳಿಂಗರಾಯನ ಜೀವನ ಶೈಲಿ ಆಧುನಿಕತೆಯತ್ತ ತಿರುಗಿದುದು ಅವನು ಮದರಾಸಿಗೆ ಪ್ರಿನ್ಸಿಪಾಲನಾಗಿ ಬಂದಾಗ. ಅದುವರೆವಿಗೂ

ತೊಡುತ್ತಿದ್ದ ಸಾಮಾನ್ಯ ವೇಷ ಭೂಷಣಗಳು ಮಾಯವಾಗಿ, ಕೋಟು ಸೂಟು ಬಂದಿದ್ದವು. ಕೈ ತುಂಬಾ ಸಂಪಾದನೆ, ಸುತ್ತಮುತ್ತೆಲ್ಲಾ ಕೀರ್ತಿಯ ಪರಿಮಳ, ಸುಂದರ ಆಕರ್ಷಕ ರೂಪು, ಮೇಲಾಗಿ ಉಕ್ಕುತ್ತಿದ್ದ ಇಪ್ಪತ್ತನಾಲ್ಕರ ಹರಯ ಇವಿಷ್ಟು ಕಾಳಿಂಗರಾಯನ ಬದುಕಿಗೆ ಹೊಸ ಆಯಾಮವನ್ನೂ ನೀಡಿದ್ದವು. ಸಂಗೀತ ಕಲಿಯಲು ಬಂದ ಜಯಲಕ್ಷ್ಮೀ ವರದಾಚಾರ್ ಎನ್ನುವ ಹೆಣ್ಣು, ಕಾಳಿಗಂರಾಯನ ಸ್ಫುರದ್ರೂಪಕ್ಕೆ ಬೆರಗಾಗಿ ಮನಸೋತಳು. 1938ರಲ್ಲಿ ಆಗಿನ ಕಾಲದ ಎಂ.ಎ., ಮಾಡಿ, ಒಳ್ಳೆಯ (ಪತ್ರಕರ್ತೆ) ಕೆಲಸದಲ್ಲಿದ್ದ ರೂಪಸಿ, ಕಾಳಿಂಗರಾಯನಿಗೆ ತನ್ನನ್ನೇ ಅರ್ಪಿಸಿಕೊಂಡಳು. ವಿದ್ಯಾವಂತೆಯೂ, ಚುರುಕು ಬುದ್ಧಿಯವಳೂ ಆದ ಹರಯದ ಹೆಣ್ಣಿಗೆ ಚೆಲುವ ಕಾಳಿಂಗರಾಯ ಸೋಲಲಾರದವನಾದ. ಹೆಂಡತಿಯಿಂದ ಇನ್ನೂ ದೊರಕದಾದ ಸುಖಕ್ಕೆ ಅಂತುಕೊಂಡು ಶರಣಾದ. ತನ್ನನ್ನೇ ತಾನು ಕಳೆದುಕೊಂಡ.

ಕನ್ನಡ, ಸಂಸ್ಕೃತ, ಹಿಂದಿ, ತುಳು, ಕೊಂಕಣಿ ಭಾಷೆಯ ಪರಿಣತನಾದ ಕಾಳಿಂಗರಾಯ ಇಂಗ್ಲೀಷ್ ಭಾಷೆಯಲ್ಲಿ ಅತ್ಯದ್ಭುತವಾದ ಹಿಡಿತ ಗಳಿಸಿದ್ದು ಪ್ರೇಯಸಿ ಜಯಲಕ್ಷ್ಮಿಯಿಂದ ಎನ್ನಬಹುದು. ಇಂಗ್ಲೀಷ್ ಎಂ.ಎ., ಮಾಡಿ ಆಗಲೇ ಎರಡು ಸಾವಿರ ರೂ. ಮಾಸಿಕ ವರಮಾನ ಪಡೆಯುತ್ತಿದ್ದ, ಆಕೆಯಿಂದ, ಕಾಳಿಂಗರಾಯ ತನ್ನ ಜೀವನ ಶೈಲಿಯನ್ನು ನವಿರುಗೊಳಿಸಿದ ಟಾಕು ಠೀಕಾದ ಸೂಟು ಕೋಟಿನಿಂದ ಹೊಳೆಯುವ ಬೂಟಿನವರೆವಿಗೆ ತನ್ನ ಹೊರ, ಒಳ, ವ್ಯಕ್ತಿತ್ವವನ್ನು ತೀಡಿ, ತಿದ್ದಿ ಸಿಂಗರಿಸಿಕೊಂಡ. ಆಕೆಯ ಮೇಲಿನ ಸೆಳೆತ ಹೆಚ್ಚಾದಂತೆ ಬೆಂಗಳೂರಿನಲ್ಲಿ ಮನೆ ಮಾಡಿ ಕರೆದು ತಂದ. ತಾಯಿಯ ಆಣತಿಯಂತೆ ತಾಳಿ ಕಟ್ಟಿದ್ದ ಮೀನಾಕ್ಷಿಯನ್ನೂ, ಪ್ರೇಯಸಿ ಜಯಲಕ್ಷ್ಮಿಯೊಂದಿಗೆ ಬಾಳ್ವೆ ಮಾಡಲು ಕರೆದು ತಂದ. ಎರಡೂವರೆ ವರುಷಗಳ ಕಾಲ ಗಂಡನೊಡನೆ, ಗಂಡನ ಪ್ರೇಯಸಿಯೊಡನೆ ಬಾಳ್ವೆ ಮಾಡಲು ಪ್ರಯತ್ನ ನಡೆಸಿದ ಮೀನಾಕ್ಷಿ, ಸಫಲಳಾಗದೆ ಮತ್ತೆ ದೊಡ್ಡಮ್ಮನ ಮಡಿಲಿಗೇ ಬಂದು ಸೇರಿದಳು. ನಾಲ್ಕಾರು ವರುಷಗಳ ಕಾಲ ತನ್ನೊಂದಿಗೆ ಬಾಳ್ವೆ ಮಾಡಿದ ಕಾಳಿಂಗರಾಯನನ್ನು ಜಯಲಕ್ಷ್ಮಿ ಆಕಸ್ಮಿಕವಾಗಿ ಬಿಟ್ಟು ತೀರಿ ಹೋದಳು. ಅಲ್ಲಿಗೆ ಆ ಸಂಬಂಧ ಮುಗಿದುಹೋಯಿತು.

ಮದರಾಸಿನಲ್ಲಿ ಹೆಸರಾಗಿದ್ದ ಕಾಳಿಂಗರಾಯರ ಕ್ರಿಯಾಶೀಲತೆಯನ್ನೂ, ಪ್ರಯೋಗ ತತ್ಪರತೆಯನ್ನೂ ಗಮನಿಸಿದ ಆರ್. ನಾಗೇಂದ್ರರಾವ್ ಮತ್ತು ಎಂ.ವಿ. ಸುಬ್ಬಯ್ಯನಾಯ್ಡು ಅವರು ಜಂಟಿಯಾಗಿ ತಯಾರಿಸಿದ 'ವಸಂತಸೇನಾ' (1941) ಚಿತ್ರಕ್ಕೆ ಸಂಗೀತ ನೀಡಬೇಕೆಂದು ಕಾಳಿಂಗರಾಯನನ್ನೇ ನೇಮಿಸಿದರು. ಬೌದ್ಧ ಭಿಕ್ಷು ಪಾತ್ರ (ಧರ್ಮಕ್ಕೆ ಜಯವು ಸತ್ಯ, ಜಗವೆಲ್ಲ ಮಿಥ್ಯ, ಎಂಬ ಹಾಡನ್ನು ಸುಮಧುರವಾಗಿ ಹಾಡಿದ) ವನ್ನು ನಿರ್ವಹಿಸಿದ್ದೇ ಅಲ್ಲದೆ, 'ವಸಂತಸೇನಾ' ಚಿತ್ರಕ್ಕೆ ನಾಲ್ಕು ಹಾಡುಗಳಿಗೆ ಮಧುರ, ಉತ್ತಮ ರಾಗಗಳನ್ನು ಸಂಯೋಜಿಸಿಕೊಟ್ಟ ಕಾಳಿಂಗರಾಯ. 'ವಸಂತಸೇನಾ' ಚಿತ್ರ ಎಲ್ಲಾ ರೀತಿಯಲ್ಲೂ ಜಯಭೇರಿ ಹೊಡೆದು ಹೆಸರು ಮಾಡಿತು. ಬೆಂಗಳೂರಿನ ಮೂವೀಲ್ಯಾಂಡ್‌ನಲ್ಲಿ 100 ದಿನ ಓಡಿತು - ಶತದಿನೋತ್ಸವ ಕಂಡಿತು. ಕನ್ನಡ ಚಿತ್ರಸಂಗೀತದಲ್ಲಿ ಮೊಟ್ಟಮೊದಲ ಬಾರಿಗೆ ಆಧುನಿಕ ವಾದ್ಯವೃಂದ (ಆರ್ಕೆಷ್ಟ್ರಾ) ವನ್ನು ಬಳಕೆಗೆ ತಂದು 'ವಸಂತಸೇನಾ' ಚಿತ್ರದಲ್ಲಿ ಅಭಿನಯಿಸಿ ಆ ಚಿತ್ರ ನೂರು ದಿನ ಓಡಿದರೂ ಬದುಕಿಗಾಗಿ ಹೋರಾಡುವುದು ನಡೆದೇ ಇತ್ತು. 'ಶ್ರೀ ಮಂಜುನಾಥೇಶ್ವರ ನಾಟಕ ಮಂಡಲಿ' ಯ ಒಡೆಯರಾದ ಹೆಚ್.ಆರ್. ರಾಮನಾಥಶಾಸ್ತ್ರಿಯವರ ನಾಟಕ ಮಂಡಲಿಯಲ್ಲಿ ಕಾಳಿಂಗರಾಯ ಮತ್ತೆ ಬಣ್ಣ ಹಚ್ಚಿಕೊಳ್ಳಲು ಪ್ರಾರಂಭಿಸಿದ. 'ರಾಯರ ಸೊಸೆ' ಯಲ್ಲಿ ನಾಯಕನ ಪಾತ್ರ ಮಾಡುತ್ತಿದ್ದ. ಕೊಡಿಯಾಲದಲ್ಲಿ ನಡೆಯುತ್ತಿದ್ದ 'ರಾಯರ ಸೊಸೆ' ಯಲ್ಲಿ ನಾಯಕನ ಪಾತ್ರವನ್ನೂ, ಕೃಷ್ಣಲೀಲಾದಲ್ಲಿ ವಸುದೇವನ ಪಾತ್ರವನ್ನೂ ಮಾಡುತ್ತಿದ್ದ.

## ಸಾನಿಧ್ಯ-ದಾಂಪತ್ಯ

ತನ್ನೆಲ್ಲಾ ಕೆಲಸಗಳ ಮಧ್ಯೆ ರಾಯ ತನ್ನ ತಾಯಿಯನ್ನು ನೋಡಿ ಬರಲು ಆಗಾಗ ಊರಿಗೆ (ಬಾರ್‌ಕೂರಿಗೆ) ಹೋಗುತ್ತಿದ್ದ. ಹೋದಾಗ ಪತ್ನಿ ಮೀನಾಕ್ಷಿಯ ಸಾನಿಧ್ಯವೂ ದೊರೆಯುತ್ತಿತ್ತು. ಅದರ ಫಲವಾಗಿ ಹೆಣ್ಣು ಮಗುವಿಗೆ ತಂದೆಯಾದ. ಮುದ್ದಿನ ಮಗಳು ಪ್ರೇಮ ಹುಟ್ಟಿದ ಗಳಿಗೆಯಲ್ಲಿ ಮದರಾಸಿನಲ್ಲಿ ಟಾಪ್ ವಾದ್ಯಾರ್ ಎಂಬ ಬಿರುದು (1943ರಲ್ಲಿ) ಅವನ ಕೊರಳನ್ನು ಅಲಂಕರಿಸಿತು. ಬದುಕಿನ ಕ್ರಮವೂ

ಹಂತಹಂತವಾಗಿ ಬದಲಾದವು. ಚಲನಚಿತ್ರ ಸಂಗೀತದಲ್ಲೇ ಹೊಸ ಬಗೆಯನ್ನು ಹುಡುಕುತ್ತ ದೊರಕಿಸಿಕೊಂಡ ಅವನಿಗೆ, ಅದಷ್ಟೇ ಜೀವನದ ಪರಮಪೌನತ್ಯ ಎನಿಸಲಿಲ್ಲ. ಕನ್ನಡ ಸಾಹಿತ್ಯದಲ್ಲಿ ಅಸಾಮಾನ್ಯ ತಿಳುವಳಿಕೆ ಇದ್ದ ಕಾಳಿಂಗರಾಯನನ್ನು ಕವಿಗಳ ಕವಿತೆಗಳು ಕೈಬೀಸಿ ಕರೆದವು. ಜೀವನಕ್ಕೆ ಚೈತನ್ಯವನ್ನು ತುಂಬುವ ಒರತೆಗಳೆನಿಸಿದ, ಜಾನಪದ ಸಾಹಿತ್ಯದ ಬಗೆಗೆ ವಿಶೇಷವಾದ ಒಲವು ಮೂಡತೊಡಗಿತು. ಸಾಹಿತ್ಯದ ಸುಭಗತೆ, ಸಹಜತೆಗೆ ಮನಸ್ಸು ಬೆರಗಾಗತೊಡಗಿತು. ಚಿತ್ರ ಸಂಗೀತಕ್ಕಿಂತಾ ತೀರಾ ಭಿನ್ನವಾದ ಸಂಗೀತವೊಂದನ್ನು ಕವಿಗಳಿಂದ ರಚನೆಗೊಂಡ ಬಿಡಿ ಗೀತೆಗಳು ಬೇಡುತ್ತವೆ ಎಂಬುದು ಮನವರಿಕೆಯಾಯಿತು. ಅವುಗಳ ರೀತಿ, ರಚನೆ, ನಡೆ, ಲಯ, ಲಾಸ್ಯ, ಪ್ರಯೋಗಶೀಲವಾದ ಅವನನ್ನು ಕಾಡತೊಡಗಿತು. ಅಷ್ಟೇ ಅಲ್ಲ ಅವನ ಹೃದಯವನ್ನು ಹೊಕ್ಕು ಹಾಡಾಗಿ ಹರಿಯಿತು. ಪರಿಣಾಮ ಹತ್ತಾರು, ನೂರಾರು, ಸಾವಿರಾರು ಹಾಡುಗಳು ಆತನ ಸ್ವರ ಸಂಯೋಜನೆಯ ಮೋಡಿಯಿಂದ ಮಾಂತ್ರಿಕಸ್ಪರ್ಶ ಪಡೆದವು. ಜೀವಂತವಾಗಿ ಚಿರಂತನಗೊಂಡವು.

'ಮೂಡಲ್ ಕುಣಗಲ್ ಕೆರೆ' 'ಬಾರಯ್ಯ ಬೆಳದಿಂಗಳೆ', 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು', 'ಎಲ್ಲಾದರು ಇರು', 'ಏರಿಸಿ ಹಾರಿಸಿ', 'ಬೆಟ್ಟ ಬಿಟ್ಟಳಿಯುತ್ತ', 'ಬಾಗಿಲೊಳು ಕೈಮುಗಿದು' 'ಹೇಳ್‌ಕೊಳ್ಳಾಕ್ ಒಂದೂರು', 'ಬ್ರಹ್ಮನಿಗೆ ಜೋಡಿಸ್ತೀನಿ', 'ಅತ್ತಿಲ್ಲದ ಮನೆಗೆ', 'ತೂಗಿರೋ ಚಿನ್ನವ'......ಹೀಗೆ ಹೇಳುತ್ತಾ ಹೋದರೆ ಮುಗಿಲೆತ್ತರಕ್ಕೇರುವಷ್ಟು ಗೀತೆಗಳು ಕಾಳಿಂಗರಾಯನ ಬೊಕ್ಕಸವನ್ನು ಸೇರಿ ಹಾಯಾದವು. ಈತ ಜಾನಪದ ಗೀತೆಗಳನ್ನು ವೇದಿಕೆಯ ಮೇಲೆ ಹಾಡಿದ ಹೊಸ ಪ್ರಯೋಗ ಪುರುಷನಾದಂತೆ, ದಾಸರ ಪದಗಳನ್ನು ಹೊಸ ಅಲೆಯಲ್ಲಿ ತೋಯಿಸಿ ಸಫಲನಾದ. ಕೇವಲ ಮಡಿ ಹೆಂಗಸರು ಅಥವಾ ವೈದಿಕರು ಮಾತ್ರ ಹಾಡಬೇಕೆಂಬ ನಿಯಮವನ್ನು ಮುರಿದು, ಯಾರು ಹಿತವರು ನಿನಗೆ, ನಗೆಯು ಬರುತಿದೆ, ಮಾಡು ಸಿಕ್ಕದಲ್ಲಾ, ಯಾಕಳುವೆ ಎಲೆ ಕಂದ ಮುಂತಾದ ನೂರಾರು ದಾಸರಪದಗಳನ್ನು ಸಹಜ ಸೌಂದರ್ಯದ ಸಂಗೀತದಿಂದ ಅಲಂಕರಿಸಿದ. ಇವುಗಳೆಲ್ಲಾ ಸೂಕ್ತ ವೇದಿಕೆಯಲ್ಲಿ ಪ್ರಕಾಶಗೊಂಡು ದಿನ ಮಾತ್ರದಲ್ಲಿ

ಜನಪ್ರಿಯತೆಯ ಶಿಖರಕ್ಕೇರಿದವು. ಕರ್ನಾಟಕದಲ್ಲಿ ಅಲ್ಲದೆ, ಡೆಲ್ಲಿ, ನಾಗಪುರ, ಮುಂಬೈ, ಪೂನಾ, ಕಲ್ಕತ್ತ ಮುಂತಾಗಿ ಇಡೀ ಭಾರತದಗಲಕ್ಕೂ ಹಬ್ಬಿ ಹರಿದು ಹಾಸು ಹೊಕ್ಕಾದವು. ಕಾಳಿಂಗರಾಯ-ಕಾಳಿಂಗರಾಯರೆಂಬ ಬಹುವಚನಕ್ಕೆ ಪಾತ್ರನಾದ.

## ಗೀತನಾಟಕದಲ್ಲಿ ಕಾಳಿಂಗರಾಯರು

ಮದ್ರಾಸಿನಲ್ಲಿ ಎತ್ತನೋಡಿದರೂ ಕಾಳಿಂಗರಾಯರ ಹಾಡುಗಳ ಧಾಟಿ, ಪಲುಕು, ಸಂಯೋಜನೆಯ ವಿಶೇಷ ರೀತಿ, ಮನೆ ಮಾತಾಗಿರುವಾಗಲೇ, ರಾಯರಿಗೆ ತಾವು ಅಭಿನಯಿಸಿದ ರಂಗಭೂಮಿಯ ವೇದಿಕೆ, ಹೊಸ ಪ್ರಯೋಗಕ್ಕೆ ಎಳೆದಿತ್ತು. ಸಂಗೀತಕ್ಕೆ ತನ್ನನ್ನು ಥಳುಕು ಹಾಕಿಕೊಂಡಿದ್ದ ರಾಯರಿಗೆ, ಸಂಗೀತ ಮತ್ತು ಅಭಿನಯ ಎರಡೂ ಏಕೆ ಒಟ್ಟಾಗಿ ಸೇರಬಾರದು? ಎಂಬ ಕುತೂಹಲ ಮೂಡಿತು. ಗೀತಗಳೊಂದಿಗೆ ಅಭಿನಯವಿರುವ, ಅಂದರೆ ಗೀತೆಗಳೇ ಸಂಭಾಷಣೆಯ ರೂಪದಲ್ಲಿರುವ 'ಗೀತನಾಟಕ' ಗಳಾದ 'ಬುದ್ಧ', 'ಆಮ್ರಪಾಲಿ' 'ಸಾವಿತ್ರಿ ಸತ್ಯವಾನ್' 'ರಾಧಾಕೃಷ್ಣ' ಮುಂತಾದ ಗೀತನಾಟಕಗಳು ಹೊಸ ಪ್ರಯೋಗಗಳಾಗಿ ಮದರಾಸ್, ಮೈಸೂರು, ಆಕಾಶವಾಣಿಯಲ್ಲಿ ಪ್ರಸಾರವಾದವು. ವೇದಿಕೆಯ ಮೇಲೂ ಇವು ಪ್ರಯೋಗವಾದವು. ಸಾಮಾನ್ಯರಿಂದ, ಉನ್ನತ ಅಧಿಕಾರಿಗಳೂ ಸಹ ಟಿಕೆಟ್ಟು ತೆಗೆದುಕೊಂಡು ಬಂದು ನೋಡುತ್ತಿದ್ದರು. ಹೀಗಾಗಿ 'ಗೀತನಾಟಕ'ದ ಹೊಸ ಪ್ರಯೋಗದಲ್ಲಿಯೂ ಕಾಳಿಂಗರಾಯರು ಸಂಪೂರ್ಣವಾಗಿ ಸಹೃದಯರನ್ನೂ ಗೆದ್ದರು. ಅವರ ಶೈಲಿಯ ವಿಶಿಷ್ಟತೆಯೇ ಬೆರಗಾಗಿಸುವಂತದ್ದು. ಒಮ್ಮೆ ಮಾಸ್ತಿ ವೆಂಕಟೇಶಯ್ಯಂಗಾರ್ ಅವರ ಸಂಗೀತ ಪ್ರಧಾನವಾದ, ಐತಿಹಾಸಿಕ ರೂಪಕವಾದ, 'ತಾನ್‌ಸೇನ್' ಗೀತನಾಟಕ ಆಕಾಶವಾಣಿಯಲ್ಲಿ ಪ್ರಸಾರವಾಗಲು ಸಿದ್ಧವಾಗಿ, ಬೈಜುವಿನ ಪಾತ್ರಕ್ಕೆ ಕಾಳಿಂಗರಾಯರನ್ನು ಆರಿಸಿದ್ದರು. ಕಾಳಿಂಗರಾಯರ ಸಂಗೀತ ಸಾಮರ್ಥ್ಯದ ಬಗೆಗೆ ಅರಿವಿಲ್ಲದ ಮಾಸ್ತಿಯವರಿಗೋ ಮನಸ್ಸಿನಲ್ಲೇ ಭಯ. ಬೈಜು ಪಾತ್ರಕ್ಕೆ ಈತ ನ್ಯಾಯ ಸಲ್ಲಿಸಬಲ್ಲನೇ ಎಂಬ ಆತಂಕ. ಕಾರ್ಯಕ್ರಮದ ಹಿಂದಿನ ದಿನ ರಿಹರ್ಸಲ್ ನೋಡಲು ಮಾಸ್ತಿಯವರು ಸೂಚನೆ ಕೊಡದೆ ಬಂದು

ಕುಳಿತಿದ್ದರು. ಕಾಳಿಂಗರಾಯರು ಹಾಡಲು ಪ್ರಾರಂಭಿಸಿದೊಡನೆಯೇ ಮಾಸ್ತಿಯವರು ತಮ್ಮನ್ನೇ ಮರೆತುಹೋಗಿದ್ದರು. ಅಕ್ಬರನ ಕಾಲದ ಹುಚ್ಚ ಬೈಜುವಿನ ಸಾಕ್ಷಾತ್ಕಾರವಾಗುತ್ತಲೇ ಕಣ್ಣು ಬಿಟ್ಟು ನೋಡಿದರು. ಎದುರಿಗೆ ಜೋಡಿ ತಂಬೂರಿಗಳ ಶ್ರುತಿಯ ಝೇಂಕಾರದಿಂದ ಹಾಡುತ್ತಾ ಕುಳಿತಿದ್ದ ಕಾಳಿಂಗರಾಯರನ್ನು ಕಂಡು ಹೃದಯ ತುಂಬಿ ಬಂದಿತು. ಜೊತೆಗೆ ರಾಯರ, ಸೌಜನ್ಯಶೀಲ ನಡವಳಿಕೆ, ಸರಳತೆ, ಸೌಮ್ಯತೆಗಳಿಗೆ ಬೆರಗಾದ ಮಾಸ್ತಿಯವರು ಬಾಯಿ ತುಂಬಾ ಹರಸಿ ಕಳಿಸಿದರು.

## ನಾದ ತಂದ ವೈಭವ

ಕಾಳಿಂಗರಾಯರನ್ನು ಸಂಗೀತ ಹಾಗೂ ಕೀರ್ತಿ ಎಂಬ ಇಬ್ಬರು ಕಾಂತೆಯರು ಸೆಳೆದುಕೊಂಡಂತೆ, ಐಶ್ವರ್ಯ ಲಕ್ಷ್ಮಿಯೂ, ಈ ಅವಧಿಯಲ್ಲಿ ಬಂದು ಆಲಂಗಿಸಿಕೊಂಡಳು. ರಾಯರಿಟ್ಟ ಪ್ರತಿಯೊಂದು ಹೆಜ್ಜೆಯಲ್ಲೂ ಈ ಮೂವರು ಅವರನ್ನು ಹಿಂಬಾಲಿಸುತ್ತಿದ್ದರು. ಅವರನ್ನು ತಕ್ಕೈಸುತ್ತಿದ್ದರು. ಪಾಲಿಸುತ್ತಿದ್ದರು. ರಾಯರು ಮದರಾಸಿನಲ್ಲಿ ಪ್ರತಿಷ್ಠಿತ ಸಂಗೀತ ನಿರ್ದೇಶಕರಾಗಿದ್ದರು. ಉತ್ತಮ ಗಾಯಕರಾಗಿಯೂ, ಪ್ರಸಿದ್ಧ ಗುರುಗಳೆಂದೂ ಹೆಸರು ಮಾಡಿದ್ದರು. ದೊಡ್ಡ ಮನೆಯಲ್ಲಿ ವಾಸವಾಗಿದ್ದರು. ಮನೆಯ ಒಳಗೆ ಹೊರಗೆ ಅತ್ಯಂತ ವಿಶಾಲವಾಗಿ, ಶ್ರೀಮಂತಿಕೆ ಮುಕ್ಕಳಿಸುತ್ತಿತ್ತು. ಆದರೆ ರಾಯರ ಹೃದಯ ವೈಶಾಲ್ಯ ಆ ಮನೆಯನ್ನೂ ಮೀರಿಸುವಷ್ಟು ದೊಡ್ಡದಾಗಿತ್ತು. ಮನೆಗೆ ಶಿಷ್ಯರಾಗಿ ಬರುವವರು ಅದೆಷ್ಟೋ ಮಂದಿ, ಗೆಳೆಯರಾಗಿ ಬರುವವರು ಇನ್ನೆಷ್ಟೋ ಮಂದಿ. ಬಂದವರೆಲ್ಲಾ ರಾಯರ ಮನೆಯಲ್ಲೇ ಭೋಜನ, ಉಪಚಾರ, ಸಾಂಗೋಪಾಂಗವಾಗಿ ನಡೆದು ಹೋಗುತ್ತಿತ್ತು. ಪ್ರಾರಂಭದಲ್ಲಿ ಸ್ನೇಹಿತ ಪೆನ್ಸಿಲ್ ಫ್ಯಾಕ್ಟರಿಯ ಪೆರುಮಾಳ್‌ರಿಂದ 40ರೂಗೆ ಕೊಂಡಿದ್ದ ಇಂಗ್ಲೆಂಡಿನ ಸೈಕಲ್ಲಿನಲ್ಲಿ ಸವಾರಿ ಮಾಡಿ ಮೆರೆದಿದ್ದ ರಾಯರು, ತದನಂತರದಲ್ಲೇ ಮೋಟಾರ್ ಬೈಕ್ ತೆಗೆದುಕೊಂಡರು. ಮೋಟಾರ್ ಬೈಕ್‌ನ ಸುಖ ತಿಳಿಯುವುದರೊಳಗೇ 'ಮಾರಿಸ್ ಮೈನರ್' ಕಾರಿನ ಮಾಲೀಕರೂ ಆದರು. ಇವರ ಸಂಗೀತ ಸಂಜೆಗಳು

ದ್ವಿಗುಣಗೊಂಡವು. ಪ್ರಸಿದ್ಧ ಕವಿಗಳೆಲ್ಲಾ ಇವರ ಸಂಯೋಜನೆಯಲ್ಲಿ ತಮ್ಮ ಹಾಡುಗಳು ಜೀವ ತಾಳುವ ದಿನ ಬರುತ್ತದೆಯೇ ಎಂದು ಆಸೆಯಿಂದ ನಿರೀಕ್ಷಿಸುವ ಕಾಲ ಪ್ರಾರಂಭವಾಗಿ ಪ್ರಬಲವಾಯಿತು. ಶಿಷ್ಯರಾಗಲು ನಾಮುಂದು ತಾಮುಂದು ಎಂದು ಸಂಗೀತ ವಿದ್ಯಾರ್ಥಿಗಳು ನೂಕುನುಗ್ಗಲಾದರು. ಇವರ ಗಾಯನವನ್ನು ಧ್ವನಿಮುದ್ರಿಸಿಕೊಳ್ಳಲು ರೆಕಾರ್ಡಿಂಗ್ ಕಂಪನಿಗಳಾದ, ಕೊಲಂಬೋ, ಎಚ್.ಎಮ್.ವಿ. ಮತ್ತು ಸರಸ್ವತೀ ಸಂಸ್ಥೆಗಳು ಪೈಪೋಟಿ ನಡೆಸಿದವು. ಒಂದು ಹಾಡಿಗೆ 1946ರಲ್ಲಿ (ಆಗಿನ ಮೌಲ್ಯದಲ್ಲೇ) ಎರಡು ಸಾವಿರ ರೂಪಾಯಿ ಸಂಭಾವನೆ ಕೊಡಲು ಮುಂದಾದವು. ಮಧುರ ಕಂಠ, ಅಪೂರ್ವ ವಾದ ಕಲೆ, ಅನನ್ಯವಾದ ರೂಪು, ವರ್ಚಸ್ಸು, ಅಪರಿಮಿತವಾದ ಬೇಡಿಕೆ, ಅದ್ಭುತವಾದ ಮನ್ನಣೆ, ಅನಂತವಾದ ಜನಾನುರಾಗ, ಯಥೇಚ್ಛವಾದ ಸಂಪಾದನೆ, ಉನ್ನತವಾದ ಕೀರ್ತಿ ಇವೆಲ್ಲಾ ಕಾಳಿಂಗರಾಯರನ್ನು ಆಪಾದಮಸ್ತಕವಾಗಿ ಆವರಿಸಿದ್ದವು. ಆದರೆ ಹುಟ್ಟಿನಿಂದಲೇ ಹಮ್ಮು ಬಿಮ್ಮಿಲ್ಲದವರಾಗಿದ್ದು, ಸೌಜನ್ಯ ಮೂರ್ತಿಗಳೂ, ಸರಳ ಸಹೃದಯರೂ ಆಗಿದ್ದ ಕಾಳಿಂಗರಾಯರು ಎಂದೂ ಇದಕ್ಕಾಗಿ ಬೀಗಲೇ ಇಲ್ಲ, ತಾನು ಎತ್ತರದಲ್ಲಿದ್ದೇನೆ ಎಂದು ತಪ್ಪಿಯೂ ಯೋಚಿಸಲಿಲ್ಲ. ಬದಲಿಗೆ ಮತ್ತಷ್ಟು ಸರಳರೂ, ವಿನೋದಮಯಿಗಳೂ ಆದರು. ಉತ್ತಮವಾದ ಕನ್ನಡ ಮತ್ತು ಇಂಗ್ಲೀಷ್ ಸಾಹಿತ್ಯದ ಪುಸ್ತಕಗಳನ್ನು ನೂರಾರು ಸಂಖ್ಯೆಗಳಲ್ಲಿ ಸಂಗ್ರಹಿಸಿಕೊಂಡಿದ್ದರು. ಅಲ್ಲದೆ ಪ್ರಸಿದ್ಧ ಕವಿಗಳ ಕವಿತೆಗಳಿಗೆ ರಾಗ ಜೋಡಿಸಿ ಹಾಡಿದ ಮೇಲೆ ಮತ್ತೆ ಪುಸ್ತಕ ತೆಗೆದು ನೋಡುತ್ತಿರಲಿಲ್ಲ. ಇಡೀ ಕವಿತೆ ಕಂಠದಲ್ಲೇ ನಿಂತಿರುತ್ತಿದ್ದವು. ಪುಸ್ತಕ ನೋಡಿ ಹಾಡುವ ಪರಿಪಾಠವೇ ಅವರಿಗಿರಲಿಲ್ಲ. ತಾವು ಹಾಡುವ ಎಲ್ಲಾ ಹಾಡುಗಳೂ ಅವರಿಗೆ ಬಾಯ್ಪಾಠವಾಗಿದ್ದವು. ಕನ್ನಡ ಸಾಹಿತ್ಯದಲ್ಲಿ ಅವರು ಮೆಚ್ಚಿದ್ದ ಕವಿ ಕುವೆಂಪು, ಇಂಗ್ಲೀಷ್ ಸಾಹಿತ್ಯದಲ್ಲಿ ಷೇಕ್ಸ್‌ಪಿಯರ್.

ಕಾಳಿಂಗರಾಯರು ಎಂದೂ ಏಕಾಂಗಿಯಾಗಿರುತ್ತಿರಲಿಲ್ಲ. ಬಂಧು ಬಾಂಧವರು, ಜನಾಂಗದಿಂದ ದೂರವಿದ್ದ ಅವರಿಗೆ, ಗೆಳೆಯರ ಬಳಗ ವಿಪುಲವಾಗಿತ್ತು. ತಮ್ಮ ಸುತ್ತಮುತ್ತಿನವರನ್ನು ಸದಾ ನಗೆಚಾಟಿಯಿಂದ ನಗಿಸುತ್ತಿದ್ದ ರಾಯರು ಎಂದೂ

ಕೋಪಿಸಿಕೊಂಡದ್ದೇ ಇಲ್ಲ. ತಮ್ಮ ಮಾರಿಸ್ ಮೈನರ್ ಕಾರಿನಲ್ಲಿ ಗೆಳೆಯರನ್ನು ಕೂರಿಸಿಕೊಂಡು ಪೇಟೆಯಲ್ಲಿ ತಿರುಗುವಾಗ ರಾಯರು ರೆಕ್ಕೆ ಬಿಚ್ಚಿದ ಕೋಗಿಲೆಯಂತಾಡುತ್ತಿದ್ದರು. ಅತಿ ರಭಸದಿಂದ ಕಾರು ಡ್ರೈವ್ ಮಾಡುತ್ತಲೇ ಕ್ಷಣದಲ್ಲೇ ಹೊಸ ಕವಿತೆಗಳಿಗೆ ರಾಗ ಜೋಡಿಸುತ್ತಾ, ಪಕ್ಕದಲ್ಲಿದ್ದವರಿಗೆ ಅಚ್ಚರಿ ಮೂಡಿಸುತ್ತಿದ್ದರು. ಹಾಸ್ಯಪ್ರಜ್ಞೆ ಅವರಲ್ಲಿ ಅದ್ಭುತವಾಗಿತ್ತು. ತಮ್ಮ ಸ್ನೇಹವಲಯಕ್ಕೆ ರಾಯರು ಸದಾಕಾಲ ಸಂಗೀತದೌತಣ ನೀಡುತ್ತಿದ್ದರು.

ಹೆಸರಾಂತ ಹಿಂದೂಸ್ತಾನಿ ಗಾಯಕರೆಲ್ಲಾ ಕಾಳಿಂಗರಾಯರನ್ನು ಹುಡುಕಿಕೊಂಡು ಬಂದರು. ರಾಯರಿಗೆ ಸಂಗೀತವೇ ಸರ್ವಸ್ವವಾಯಿತು.

ಕಣಗಾಲ್ ಪ್ರಭಾಕರ ಶಾಸ್ತ್ರಿಗಳು ಮದ್ರಾಸಿಗೆ ನೃತ್ಯ ಕಲಿಯಲು ಬಂದವರು ಕಾಳಿಂಗರಾಯರ ದೊಡ್ಡಮನೆಯಲ್ಲೇ ಆಶ್ರಯ ಪಡೆದಿದ್ದರು. ರಾಯರು ''ಪ್ರಭಾಕರ, ನೀನು ನೃತ್ಯ ಕಲಿಯುವುದಕ್ಕಿಂತಾ, ಪದ್ಯ ಬರೀ ರಾಜಾ, ನಿನ್ನ ಭಾಷಾಜ್ಞಾನ ಚೆನ್ನಾಗಿದೆ, ನೀನು ಸಾಹಿತಿಯಾಗ್ತೀಯಾ''- ಎಂದು ಗೀತೆಗಳನ್ನು ಬರೆಯಲು ಪ್ರೇರೇಪಿಸಿದರು. ಪ್ರಭಾಕರ ಶಾಸ್ತ್ರಿಗಳು ಬರೆದ ತಮ್ಮ ಮೊಟ್ಟಮೊದಲ ಗೀತೆಯಾದ 'ಜೋಜೋ ಬಾಲಕೃಷ್ಣಾ ಜೋಗುಳ ಪಾಡುತ್ತಾ ತೂಗುವೆನಾ' ಎಂಬ ಗೀತೆಗೆ ಕಾಳಿಂಗರಾಯರೇ ರಾಗ ಸಂಯೋಜಿಸಿ ಮೋಹನ್‌ಕುಮಾರಿಯಿಂದ ಹಾಡಿಸಿದರು. ಆ ಹಾಡು ರಾಯರಿಗೆ ಮತ್ತು ಶಾಸ್ತ್ರಿಗಳಿಗೆ ಒಳ್ಳೆಯ ಹೆಸರು ಕೊಟ್ಟಿತು. ತದನಂತರದಲ್ಲೇ ಪ್ರಭಾಕರ ಶಾಸ್ತ್ರಿಗಳು ಚಿತ್ರಸಾಹಿತಿಯಾಗಿ ಹೆಸರು ಮಾಡಿದರು. ಶಾಸ್ತ್ರಿಗಳ ಮದುವೆಯನ್ನೂ ಕಾಳಿಂಗರಾಯರೇ ಮಾಡಿ ತಮ್ಮ ಮನೆಯಲ್ಲೇ ಅವರನ್ನೂ ಇರಿಸಿಕೊಂಡರು. ಜೊತೆಗೆ ಪುಟ್ಟಣ್ಣ ಕಣಗಾಲರೂ ಬಂದು ಸೇರಿಕೊಂಡರು. ಹೀಗೆ ಸಂಸಾರಗಳು ರಾಯರ ಹೆಗಲಿಗೆ ಬಿದ್ದು ಅವರನ್ನು ಆತುಕೊಂಡಿದ್ದವು. ಜೊತೆಗೆ ಜಿ.ಕೆ. ವೆಂಕಟೇಶ್ ತಮ್ಮ ಸಂಸಾರದೊಂದಿಗೆ ರಾಯರ ಮನೆಯಲ್ಲಿಯೇ ವಾಸವಾಗಿದ್ದರು. ರಾಯರಿಗೂ ವೆಂಕಟೇಶ್ ಅವರಿಗೂ ಅನನ್ಯವಾದ ಸ್ನೇಹವಿದ್ದು, ಇದಕ್ಕೆ ಅನುಭವದ ಹಿರಿತನವಾಗಲಿ, ಸಾಮಾಜಿಕ ಸ್ಥಿತಿಗತಿಗಳಾಗಲಿ ಅಡ್ಡ ಬಂದಿರಲಿಲ್ಲ. ರಾಯರು ತಾವೇ ರಾಗ

ಸಂಯೋಜಿಸಿದ ಕೆಲವು ಗೀತೆಗಳ ಲಾಭವನ್ನು, ಸಂಪೂರ್ಣ ಸ್ವಾಮ್ಯವನ್ನು, ಪ್ರಚಾರ ಫಲಕಗಳ ಹಿರಿಮೆಗಳನ್ನು, ಜಿ.ಕೆ. ವೆಂಕಟೇಶ್ ಅವರಿಗೇ ವಹಿಸಿಕೊಟ್ಟರು. ರಾಯರ ರಾಗ ಸಂಯೋಜನೆಗಳನ್ನು ಅನುಕರಿಸಿ ತಂತಮ್ಮ ಹೆಸರು ಹಾಕಿಕೊಂಡ ಹಲವು ಶಿಷ್ಯರನ್ನು ಕಂಡು ''ಸರಸ್ವತಿ ಭಂಡಾರದಲ್ಲಿ ಅದೆಷ್ಟೋ ಮುತ್ತುಗಳಿವೆ. ಯಾರು ಎಷ್ಟು ಆರಿಸಿಕೊಂಡರೂ ಅಲ್ಲಿ ಅವು ಅಕ್ಷಯವಾಗುತ್ತಲೇ ಇರುತ್ತವೆ'' ಎಂದು ತಮ್ಮ ದೊಡ್ಡ ಮನಸ್ಸಿನ ದರ್ಶನ ಮಾಡಿಸಿದರು.

## ನಂಬಿಕೆ ಕುಸಿದಾಗ

ಮದರಾಸಿನ ರಾಯರ ಮನೆಯಲ್ಲಿ ಆಪ್ತರು, ಶಿಷ್ಯರು ಎನಿಸಿಕೊಂಡವರು ತಿಂಗಳುಗಳ ಕಾಲ ಜಾಂಡಾ ಹೂಡುತ್ತಿದ್ದ ಹಾಗೇ ಸಂಪಾದಿಸುವ ಕೈ ಕೆಳಗಾಗಿ, ತಿನ್ನುವ ಕೈಗಳು ಮೇಲಾಗಿದ್ದವು. ರಾಯರನ್ನು ಅವಲಂಬಿಸಿಕೊಂಡಿದ್ದ ಶಿಷ್ಯ ಸಮುದಾಯ ಸದ್ದಿಲ್ಲದೆ ಕಾಲ್ತೆಗೆದಿತ್ತು. ರಾಯರಿಗಾದರೋ ತಮಗೆ ಬಹುಮಾನವಾಗಿ ದೊರೆತ ಚಿನ್ನದ ಪದಕ, ಬೆಳ್ಳಿಯ ಲೋಟ, ಚಿನ್ನದ ಉಂಗುರ, ಬೆಲೆ ಬಾಳುವ ವಾಚ್, ಯಾವುದರಲ್ಲಿಯೂ ಮೂಲಭೂತವಾಗಿ ಅಂಟಿಕೊಳ್ಳುವ ಸ್ವಾರ್ಥದ ನಂಟಿರಲಿಲ್ಲ. ಅವರು ಯಾವಾಗಲೂ ಉದಾರಹಸ್ತರೇ ಆಗಿದ್ದರು. ದಾನಶೂರತೆಯಲ್ಲಿ ಅವರನ್ನು ಮೀರಿಸುವರೇ ಇರಲಿಲ್ಲವೆನ್ನಬೇಕು.

ಗೆಳೆಯನೊಬ್ಬನ ಮದುವೆಗೆ ತಮ್ಮ ಕಾರಿನಲ್ಲಿ ಹೋಗಿದ್ದ ರಾಯರು ಆತ 'ಈಗ ಮಾರಿಸ್ ಮೈನರ್ ಕಾರು ಸಿಗುತ್ತಲೇ ಇಲ್ಲ ಮಹರಾಯ, ನನಗೊಂದು ಫ್ಯಾಮಿಲಿ ಕಾರ್ ಬೇಕಾಗಿದೆ' ಎಂದಾಗ, ಹಿಂದೆ ಮುಂದೆ ನೋಡದೆ ತಮ್ಮ ಕಾರನ್ನೇ ಆತನಿಗೆ ಬಳುವಳಿಯಾಗಿ ಕೊಟ್ಟು, ಸ್ವಸ್ಥ ನಗುವಿನಿಂದ ಮನೆಯತ್ತ ನಡೆದು ಬಂದರು. ಗಾಯನದ ಸಂಪೂರ್ಣ ವ್ಯವಹಾರ ನೋಡಿಕೊಳ್ಳುತ್ತಿದ್ದ 'ದಾಸಿ' ಎಂಬುವನು ರಾಯರ ನಂಬುಗೆಯ ಗೋಪುರವನ್ನು ಕೆಳಗುರುಳಿಸಿದ. ರಾಯರ ಆರ್ಥಿಕ ಸಂಪಾದನೆಯನ್ನೆಲ್ಲಾ ಆತ ಕಬಳಿಸಿ, ಹಾಲಿನ ಮನದ ರಾಯರಿಗೆ ದ್ರೋಹವೆಸಗಿದ. ಮದರಾಸಿನ ತಮ್ಮ ಸ್ವಂತ ಮನೆಯನ್ನೂ ಮಾರಿದ ರಾಯರು ಬಾಡಿಗೆ ಮನೆ ಹಿಡಿದು, ಮತ್ತೆ

ಸೈಕಲ್ ಸವಾರಿಯಲ್ಲಿ ಮನೆ ಮನೆ ಪಾಠ ಹೇಳಿ, ತನ್ನೊಡನಿದ್ದವರನ್ನು ಸಲಹಿದರು. ಸ್ಥಿತಿಗತಿಗಳಲ್ಲಿ ಏರುಪೇರಾದರೂ ಸಂಗೀತ ಸಾಧನೆ ಪ್ರಖರವಾಗಿಯೇ ಇತ್ತು. ಹೀಗೆ ಮದರಾಸಿನಲ್ಲಿ ಜಯಭೇರಿ ಹೊಡೆಯುತ್ತಿದ್ದ ರಾಯರ ಸೇವೆ ಕನ್ನಡ ಚಿತ್ರರಂಗಕ್ಕೂ ಸಲ್ಲಬೇಕೆಂದು ತೀರ್ಮಾನಿಸಿದ ನವಜ್ಯೋತಿ ಸ್ಟುಡಿಯೋವಿನ ಶ್ರೀ ಜಿ. ಆರ್. ರಾಮಯ್ಯನವರು ತಮ್ಮ ಸ್ಟುಡಿಯೋ ವತಿಯಿಂದ ತಯಾರಾಗುವ ಚಿತ್ರಗಳ ಸಂಗೀತ ನಿರ್ದೇಶನಕ್ಕೆ ಆಮಂತ್ರಣವನ್ನಿತ್ತರು. ಕನ್ನಡ ನಾಡುನುಡಿಯ ಕಟ್ಟಾಭಿಮಾನಿಗಳಾದ ಕಾಳಿಂಗರಾಯರು ಈ ಆಮಂತ್ರಣವನ್ನು ಅತ್ಯಂತ ಸಂತೋಷದಿಂದ ಸ್ವೀಕರಿಸಿದರು. ಮೈಸೂರಿನಲ್ಲಿ ತಯಾರಾದ ಪ್ರಥಮ ಚಿತ್ರ ''ಕೃಷ್ಣಲೀಲಾ'' ಚಿತ್ರಕ್ಕೆ ಸಂಗೀತ ನಿರ್ದೇಶನ ನೀಡುವ ಸಲುವಾಗಿ ಮದರಾಸಿನಲ್ಲಿದ್ದ ತಮ್ಮ ಬಿಡಾರವನ್ನು ಖಾಲಿ ಮಾಡಿ, ಶಿಷ್ಯೆಯರಾದ ಸೋಹನ್‌ಕುಮಾರಿ, ಮೋಹನ್‌ಕುಮಾರಿಯರೊಂದಿಗೆ ಮೈಸೂರಿಗೆ ಬಂದು ನೆಲೆಸಿದರು.

1947ರಲ್ಲಿ ತಯಾರಾದ 'ಕೃಷ್ಣಲೀಲಾ' ಚಿತ್ರಕ್ಕೆ ಕಾಳಿಂಗರಾಯರು ಅತ್ಯದ್ಭುತವಾಗಿ ಸಂಗೀತ ನಿರ್ದೇಶನ ಮಾಡಿದರು. ಜೊತೆಗೆ 'ಭಕ್ತ ರಾಮದಾಸ್' (1948) ಎಂಬ ಚಿತ್ರಕ್ಕೂ ಅಪೂರ್ವವಾಗಿ ಸಂಗೀತ ನಿರ್ದೇಶನ ಮಾಡಿದರು. ತಮಾಷೆಯ ಸಂಗತಿ ಎಂದರೆ 'ರಾಮದಾಸ್' ಚಿತ್ರಕ್ಕೆ ಬೀದಿಯಲ್ಲಿ ಭಿಕ್ಷೆ ಕೇಳಲು ಬಂದ ಹುಡುಗಿಯೊಬ್ಬಳ ಗಾಯನವನ್ನು ಮೆಚ್ಚಿ ಆಕೆಯನ್ನು ಆ ಚಿತ್ರದಲ್ಲಿ ಹಾಡಿಸಿದ್ದು, ಕಾಳಿಂಗರಾಯರು ಹಾಡಿಸಿದ ಆ ಭಿಕ್ಷುಕಿಯ ಹಾಡು 'ಉಡುಜಾ ಉಡುಜಾ ಪಂಛೀ' ಎಂಬುದು ವಾದ್ಯ ವೃಂದದೊಂದಿಗೆ ಬಂದಾಗ ವಿನೂತನವೂ ವಿಶಿಷ್ಟವೂ ಆಗಿತ್ತು. ಬಹುಶಃ ಹೀಗೆ ಹೊಸ ಪ್ರಯೋಗಗಳಿಗೆ ತನ್ನನ್ನು ತಾನು ತೆರೆದುಕೊಳ್ಳುತ್ತಿದ್ದವರಲ್ಲಿ ರಾಯರು ಏಕಮೇವಾದ್ವಿತೀಯರು ಎನ್ನಬಹುದು. ಇದೇ ಸಮಯದಲ್ಲಿ ಭಾರತದ ಹೆಸರಾಂತ ನೃತ್ಯಪಟು ಶ್ರೀ ಉದಯಶಂಕರ್ ನಿರ್ಮಿಸಿದ 'ಕಲ್ಪನಾ' ಹಿಂದಿ ಚಿತ್ರಕ್ಕೆ ಸಂಗೀತ ನೀಡುವ ಆಹ್ವಾನ ಬಂತು. ಚಿತ್ರದ ಪ್ರಾರಂಭದಿಂದ ಅಂತ್ಯದವರೆವಿಗೆ ಬರೀ ನೃತ್ಯಗಳಿಂದಲೇ ಸಂಯೋಜಿಸಲ್ಪಟ್ಟಿದ್ದ, ನೃತ್ಯಮಯವೂ, ಸಂಗೀತಮಯವೂ ಆದ ಆ ಚಿತ್ರಕ್ಕೆ ರಾಯರು ಪಂಡಿತರು, ಪಾಮರರು

ಬೆರಗಾಗುವಂತೆ ಸಂಗೀತ ಸಂಯೋಜಿಸಿದರು. ಆ ಚಿತ್ರದ ಯಶಸ್ಸಿನ ಹಿಂದೆಯೇ 'ಜಿಂದಗಿ ಮುಸ್ಕುರಾನೆ ಲಗೀ' ಮತ್ತು 'ಕಲಿಮುರ್‌ಝಾನೆ ಲಗೀ' ಎಂಬ ಮತ್ತೆರಡು ಚಿತ್ರಕ್ಕೆ ರಾಯರಿಗೆ ಸಂಗೀತ ನಿರ್ದೇಶನ ಮಾಡಲು ಆಹ್ವಾನ ಬಂದಿತು. ರಾಯರು ಆ ಎರಡೂ ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿ ತಾವೂ ಹಿನ್ನೆಲೆಯಲ್ಲಿ ಹಾಡಿದರು. ರಾಯರ ಸೊಗಸಾದ ಶಾರೀರ, ಮೇಲಾಗಿ ಶ್ರುತಿ - ಲಯಬದ್ಧವಾದ ಗಾಯನದಿಂದ ಪ್ರಖ್ಯಾತರಾದರು. ಹಿನ್ನೆಲೆಗಾಯನದಲ್ಲಿಯೂ ಇವರನ್ನು ಆಹ್ವಾನಿಸುವರ ಸಂಖ್ಯೆ ಮೇರೆ ಮೀರಿತು. ನಟನೆ, ಸಂಗೀತ ಸಂಯೋಜನೆ, ಗಾಯನ ಈ ಮೂರು ವೃತ್ತಿಗಳೂ ಇವರ ಪ್ರವೃತ್ತಿಯೇ ಆದವು. ರಾಯರು ಈ ಮೂರು ಪ್ರಕಾರಗಳಲ್ಲಿಯೂ ತಾರೆಯಾಗಿ ಮೆರೆದರು.

## ಸಂಗೀತ ಸಂಸಾರವನ್ನು ಮರೆಸಿದಾಗ

ರಾಯರನ್ನು ಸಂಗೀತ ಸರಸ್ವತಿ ಹೀಗೆ ಆಲಂಗಿಸಿಕೊಂಡಾಗ ಅವರು ತಮ್ಮನ್ನೇ ಅವಳಿಗೆ ಅರ್ಪಿಸಿಕೊಂಡರು. ಹರಯದ ಧರ್ಮಪತ್ನಿ ದೂರದ ಊರಿನಲ್ಲಿರುವುದೂ ಅವರಿಗೆ ಮರೆತು ಹೋಗುತ್ತಿತ್ತು. (ಬಾರಕೂರಿಗೆ) ತಾಯಿಯನ್ನು ನೋಡಿಕೊಂಡು ಹೋಗಿದ್ದವರು, ಮಗಳು ಪ್ರೇಮಾ (1943) ಹುಟ್ಟಿದ ಎಂಟು ತಿಂಗಳ ನಂತರ ಬಂದು ಮಗಳ ಮುಖವನ್ನು ನೋಡಿದರು. ದೊಡ್ಡಮ್ಮನ ಮನೆಯಲ್ಲಿದ್ದ ಮೀನಾಕ್ಷಿ ತಮ್ಮ ತವರು ಮನೆಯಾದ ಬಾರಕೂರಿಗೆ ಬಂದು ಸೇರಿದಳು. ಹತ್ತೊಂಭತ್ತು ವರುಷದ ಮುಗ್ಧೆಗೆ ಆಡಲು ಮುದ್ದು ಮಗಳು ದೊರೆತಿದ್ದಳು. ಪತಿಯ ಅಗಲಿಕೆಯ ನೋವನ್ನು ಪುಟ್ಟಕಂದಮ್ಮ ಪ್ರೇಮಾ ತನ್ನ ಮುದ್ದು ಆಟಪಾಟಗಳಿಂದ ದೂರಮಾಡಿದ್ದಳು. ಮಗಳು ಎಂಟು ತಿಂಗಳ ಕೂಸಾಗಿದ್ದಾಗ ಬಂದು ನೋಡಿ ಮುದ್ದಿಸಿ ಹೋದ ಕಾಳಿಂಗರಾಯರು ಮತ್ತೆ ಬಂದದ್ದು ವರುಷಗಳ ನಂತರ. ತಮ್ಮ ವೃತ್ತಿಯಲ್ಲಿ ಅಪಾರ ಶ್ರದ್ಧೆ, ಶಿಸ್ತು, ಗಳಿಸಿ ದೊಡ್ಡ ಹೆಸರು ಮಾಡಿದ್ದ ರಾಯರು, ವೈಯುಕ್ತಿಕ ಜೀವನದಲ್ಲಿ ಇದಕ್ಕೆ ತದ್ವಿರುದ್ಧವಾಗಿದ್ದರು. ತಾವು ಜೊತೆಯಿರುವಷ್ಟು ಕಾಲ ಹೆಂಡತಿಯೊಡನೆ ಪ್ರೀತಿಯಿಂದ ಇರುತ್ತಿದ್ದ ರಾಯರು, ಊರಿಗೆ ಹೋದೊಡನೆ ಎಲ್ಲರನ್ನೂ ಮರೆತು

ಏಕಾಂಗಿಯಾಗಿ ಸಂಗೀತದಲ್ಲಿ ತಾವೇ ಕರಗಿ ಹೋಗುತ್ತಿದ್ದರು. ಮೊದಲನೆ ಮಗಳು ಪ್ರೇಮ ಹುಟ್ಟಿದ ಎಂಟು ವರುಷಗಳ ನಂತರದಲ್ಲಿ ವಸಂತ್ ಹುಟ್ಟಿದ. ಪುಟ್ಟ ವಸಂತನನ್ನು ನೋಡಲು ಆಗಾಗ್ಗೆ ಊರಿಗೆ ಬರುತ್ತಿದ್ದ ರಾಯರಿಗೆ ತಾಯಿ ನಾಗಮ್ಮನವರನ್ನು ಕಂಡರೆ ಅತೀವ ಪ್ರೀತಿ. ಒಮ್ಮೊಮ್ಮೆ ಪ್ರೀತಿ ಹೆಚ್ಚಾದಾಗ ಭಾವುಕತೆಯಿಂದ ಕಣ್ಣೀರಿಡುತ್ತಿದ್ದ ರಾಯರು, ತಮ್ಮ ಮನದ ತಾಕಲಾಟಗಳಿಂದ ತೊಳಲಾಡುತ್ತಿದ್ದರು. ಅವರ ಈ ತೊಳಲಾಡುವಿಕೆಗೆ ಸಂಗೀತ ಒಂದೇ ಸಿದ್ಧೌಷಧಿಯಾಗಿತ್ತು. ಇದೇ ಅವರಿಗೆ ಎಲ್ಲವನ್ನೂ ಮರೆಸಿತ್ತು.

## ತಾಯಿಯ ಋಣ ತೀರಿದಾಗ

'ಕೃಷ್ಣಲೀಲಾ' ಚಿತ್ರದ ಡೈರೆಕ್ಟರ್ ಆಗಿದ್ದ ಸಿ.ವಿ. ರಾಜು ಅವರು 'ನಟಶೇಖರ' ಎನ್ನುವ ತಮ್ಮ ಸ್ವಂತ ಚಿತ್ರದಲ್ಲಿ ಸಂಗೀತ ನಿರ್ದೇಶನವನ್ನು ಕಾಳಿಂಗರಾಯರಿಗೆ ನೀಡಿ, ಅವರನ್ನು ಮದರಾಸಿಗೆ ಕರೆದುಕೊಂಡು ಹೋದರು (1954) ರಾಯರು ಸಂಗೀತ ನಿರ್ದೇಶನ ಮಾಡಿ ರಿರೇಕಾರ್ಡಿಂಗ್ ಮಾಡುತ್ತಿದ್ದಾಗ ಊರಿನಿಂದ ಟೆಲಿಗ್ರಾಂ ಬಂದಿತು. ಕೆಲಸದಲ್ಲಿ ಮೈಮರೆತಿದ್ದ ರಾಯರು ತಂತೀ ತಂದ ಪತ್ರವನ್ನು ಜೇಬಿನಲ್ಲಿಟ್ಟು ರೆಕಾರ್ಡಿಂಗ್ ಮುಗಿಸಿ ಹೊರ ಬಂದು ಸಿಗರೇಟಿಗಾಗಿ ಜೇಬಿಗಾಗಿ ಕೈಹಾಕಿದಾಗ, ಟೆಲಿಗ್ರಾಂ ವಿಷಯ ತಿಳಿಯಿತು. ತಾಯಿಯ ಮರಣ ಸಮಾಚಾರ ತಿಳಿದು ದುಃಖ ಪಟ್ಟರು. ಊರಿಗೆ ಹೋಗಲು ಹಣವಿರದೆ ಆ ಚಿತ್ರದ ನಿರ್ದೇಶಕ ಸಿ.ವಿ. ರಾಜು ಅವರನ್ನು ಹಣ ಕೇಳಿದಾಗ ಆತ ಜೇಬಿನಿಂದ ಮೂರು ಕಾಸು ತೆಗೆದು ಮೇಲಕ್ಕೆ ಹಾರಿಸಿ ತೆಗೆದುಕೊಳ್ಳಿ ಎಂದು ನಕ್ಕು ಹೋದರು. ರಾಯರು ಸದಾ ತಮ್ಮೊಡನೆ ನೆರಳಾಗಿರುತ್ತಿದ್ದ ಮೋಹನ್‌ಕುಮಾರಿಯವರ ಕೊರಳಲ್ಲಿದ್ದ ಚಿನ್ನದ ಸರವನ್ನು ಮಾರಿ ಆ ಹಣದಲ್ಲಿ ಮದ್ರಾಸಿನಿಂದ ಬಾರಕೂರಿಗೆ ಟ್ಯಾಕ್ಸಿ ಮಾಡಿಕೊಂಡು ಬಂದು ತಲುಪುವಲ್ಲಿ ತಾಯಿಯ ಅಂತ್ಯಕ್ರಿಯೆ ಮುಗಿದಿತ್ತು. ನಾಗಮ್ಮನವರು ಸೂರಾಲಿನಲ್ಲಿದ್ದ ಅಣ್ಣ ಮಂಜಯ್ಯನವರು ಇರುವವರೋ ಅವರೊಡನಿದ್ದು ಅಣ್ಣ ಕಾಲವಾದ ಬಳಿಕ ತಮ್ಮ ಅಕ್ಕ ಸುಬ್ಬಕ್ಕನ ಮಗಳಾದ ಚಂದ್ರಮ್ಮನ ಮನೆಯಲ್ಲಿಯೇ ಬಾಳುವೆ ನಡೆಸಿದರು. ಚಂದ್ರಮ್ಮನ ಮಗಳು ಮೀನಾಕ್ಷಿಯನ್ನೇ ತಮ್ಮ

ಮಗ ಕಾಳಿಂಗರಾಯನಿಗೆ ಮದುವೆ ಮಾಡಿದ್ದರು. ಕಾರಣ ಸುಗುಣೆಯಾದ ಸೊಸೆ ಮೀನಾಕ್ಷಿ ತಮ್ಮನ್ನು ಕಡೆಗಾಲದವರೆಗೆ ನೋಡಿಕೊಳ್ಳುತ್ತಾಳೆ ಎಂಬ ಭರವಸೆಯಿಂದ. ಸಜ್ಜನಳಾದ ಮೀನಾಕ್ಷಿ ಒಂದು ಭಾವೆಯಿಂದ ಹಿರಿಯಜ್ಜಿಯೂ, ಮತ್ತೊಂದು ಭಾವೆಯಿಂದ ಅತ್ತೆಯೂ ಆಗಿದ್ದ ನಾಗಮ್ಮನನ್ನು ಶಕ್ತಿ ಮೀರಿ ನೋಡಿಕೊಂಡು ಉಪಚಾರ ಮಾಡಿದಳು. ಶಾಲೆಗೆ ಒಂದು ದಿನವೂ ಹೋಗಿ ಕಲಿಯದ ಮೀನಾಕ್ಷಿ ಬಾಳಿನಲ್ಲಿ ಕಲಿತದ್ದು ಮಾತ್ರ ಬಹಳ. 'ಹುಟ್ಟಿದ್ ಮನೆ ಏಕಾದಶಿ, ಹೊಕ್ಕಿದ್ ಮನೆ ಶಿವರಾತ್ರಿ' ಎನ್ನುವ ಗಾದೆ ಮಾತಿಗೆ ಮೀನಾಕ್ಷಿಯೇ ಒಳ್ಳೆಯ ಉದಾಹರಣೆಯಾದಳು. ಒಂದು ಕಡೆ ಇವಳ ಪತಿಯಾದ ಕಾಳಿಂಗರಾಯರು ಅತ್ಯಂತ ವೈಭವದಿಂದ ಕೀರ್ತಿವಂತರಾಗಿ ಮೆರೆಯುತ್ತ ಪ್ರಖ್ಯಾತರಾಗಿದ್ದರೆ, ಈಕೆಯಾದರೋ ಪತಿಯು ಬಾಳುತ್ತಿದ್ದ ಬಾಳಿಗೆ ತದ್ವಿರುದ್ಧವಾಗಿ ಬಾಳುತ್ತಿದ್ದಳು. ಪತಿಯು ಬಂದು ಹೋದ ಒಂಭತ್ತು ತಿಂಗಳಲ್ಲೇ ಮತ್ತೊಂದು ಮಗುವಿಗೆ ತಾಯಿಯಾಗುವ ಭಾಗ್ಯ ಬಿಟ್ಟರೆ, ಬೇರಾವ ಉಪಕಾರವೂ ಅವಳ ಹತ್ತಿರ ಸುಳಿಯಲಿಲ್ಲ. ಮಗಳು ಪ್ರೇಮಾ, ಮಗ ವಸಂತ್‌ನೊಟ್ಟಿಗೆ ಮತ್ತೊಬ್ಬ ಮಗ ಶರತ್ ಹುಟ್ಟಿದ. ಮಕ್ಕಳನ್ನು ಸಾಕುವ ಹೊಣೆ ಮೂವತ್ತೆರಡರ ಮುಗ್ಧ ಮೀನಾಕ್ಷಿಯ ಕೊರಳಿಗೆ ಜೋತು ಬಿದ್ದಿತು.

## ಎತ್ತಾಗಿ ತೊತ್ತಾಗಿ ದುಡಿದ ಮೀನಾಕ್ಷಿ

ಮೀನಾಕ್ಷಿಯ ತಾಯಿ ಚಂದ್ರಾವತಿ, ತಂದೆ ಸೋಮಶೇಖರಯ್ಯ, ಇಬ್ಬರೂ ಕೂಡಿ ಬಾಳದೆ ಬೇರೆ ಇದ್ದಿದ್ದರಿಂದ, ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತೆಂಬಂತಾಯಿತು. ಮೀನಾಕ್ಷಿಯನ್ನು ಬಾಲ್ಯದಿಂದಲೇ ಸಂತೈಸುವವರು, ಲಾಲಿಸುವವರು ಯಾರೂ ಇರಲಿಲ್ಲ. ತಂದೆಯ ಆರೈಕೆ ಪ್ರೀತಿಯಲ್ಲಿ ಬೆಳೆಯದ ಮೀನಾಕ್ಷಿಗೆ ತಾಯಿ ಚಂದ್ರಮ್ಮನೇ ಸರ್ವಸ್ವವಾಗಿದ್ದಳು. ಚಂದ್ರಮ್ಮನ ಮಗ ಗುರುರಾಜ, ಮಗಳು ಮೀನಾಕ್ಷಿ ಇಬ್ಬರ ಜೀವನ ನಿರ್ವಹಣೆಗೆ ಮನೆಯಲ್ಲೇ ಚಿಕ್ಕ ಹೋಟೆಲನ್ನು ನಡೆಸುತ್ತಿದ್ದಳು. ಚಿಕ್ಕಮ್ಮನಾದ ನಾಗಮ್ಮನವರನ್ನು ತನ್ನ ಮನೆಯಲ್ಲಿಯೇ ತಂದಿರಿಸಿಕೊಂಡು ಕಡೆಗಾಲದವರೆವಿಗೂ ಸಾಕಿದಳು. 1954ರಲ್ಲಿ ಮಗ ಗುರುರಾಜ

ತೀರಿಹೋದ. ಮಗನ ಅಗಲಿಕೆಯ ನೋವಿನಲ್ಲಿ ಹಾಗೂ ಹೀಗೂ ಎರಡು ವರುಷ ಕಳೆದ ಚಂದ್ರಮ್ಮ 1956ರಲ್ಲಿ ತನ್ನ ಮಗನನ್ನು ಹಿಂಬಾಲಿಸಿದಳು.

ತನ್ನ ಪತಿಯಾದ ಸೋಮಯ್ಯ ತನ್ನೆದುರೇ ಮತ್ತೊಬ್ಬ (ಚಿಕ್ಕಮ್ಮನೆಂಬ ಬಡಗಿ ಜಾತಿಯವಳು) ಹೆಂಗಸಿನೊಂದಿಗೆ ಸಂಸಾರ ಮಾಡುತ್ತಿದ್ದುದ್ದನ್ನು ನೋಡಿಯೂ ತುಟಿ ಪಿಟಿಕೆನ್ನಲಿಲ್ಲ. ಮಕ್ಕಳನ್ನು ತನ್ನ ಉಸಿರಿರುವ ತನಕ ಕಷ್ಟಪಟ್ಟು ಜೋಪಾನ ಮಾಡಿದಳು. ಚಂದ್ರಮ್ಮ ತೀರಿಹೋದ ನಂತರವೇ ಮೀನಾಕ್ಷಿಗೆ ಬದುಕು ಎದುರಾದದ್ದು. ಅದುವರೆವಿಗೂ ಸಂಸಾರ ನಡೆಸುತ್ತಿದ್ದ ತಾಯಿ ಇಲ್ಲವಾದಳು. ಗಂಡನ ಅಗಲಿಕೆ, ಮಕ್ಕಳ ಭವಿಷ್ಯ, ಮೇಲಾಗಿ ಕಾಡಿ ತಿನ್ನುವ ದಾರಿದ್ರ್ಯ, ಇವೆಲ್ಲದರ ಮಧ್ಯ ದಿಕ್ಕು ತಪ್ಪಿದಂತಾಯಿತು. ತನಗೆ ತಿಳಿದ ಭಟ್ಟರ ಮನೆಯಲ್ಲಿ ಮನೆ ಕೆಲಸ ಮಾಡಲು ಪ್ರಾರಂಭಿಸಿದಳು. ಭತ್ತ ಕುಟ್ಟುವುದು, ಗದ್ದೆ ಕಾಯುವುದು, ಅಡಿಗೆ, ವಗೈರೆ ಕೆಲಸ ಮಾಡುವುದು. ಯಾವ ಕೆಲಸಕ್ಕೊ ಸೈ, ಓದು ಬರಹ ಬಾರದ ಹಳ್ಳಿ ಹುಡುಗಿ ಮಾಡುವುದಾದರೂ ಏನನ್ನು? ತಾಯಿ ನಡೆಸುತ್ತಿದ್ದ ಹೋಟೆಲನ್ನು ಮೀನಾಕ್ಷಿಯೂ ಮುಂದುವರೆಸಲು ಪ್ರಾರಂಭಿಸಿದ್ದಳು. ಆದರೆ ಸುಖ ಎನ್ನುವುದು ಅವಳ ಹಣೆಯಲ್ಲಿ ಬರೆದಿರಲಿಲ್ಲವೇನೋ, ಒಂದು ದಿನ ಜೋರಾಗಿ ಗಾಳಿ ಬೀಸಿ ಹೋಟೆಲ್ ಬಿದ್ದು ಹೋಯಿತು. ಮತ್ತೆ ಅದನ್ನು ಕಟ್ಟಿಕೊಳ್ಳುವ ಅನುಕೂಲ, ಚಾತುರ್ಯ ಎರಡೂ ಮೀನಾಕ್ಷಿಗೆ ಇರದಿದ್ದುದರಿಂದ ವಿಧಿಯಿಲ್ಲದೆ ಅನ್ಯರ ಮನೆಯಲ್ಲಿ ತೊತ್ತಿನಂತೆ ಕೆಲಸ ಮಾಡಲು ಪ್ರಾರಂಭಿಸಿದಳು ಹದಿಮೂರು ವರುಷದ ಮುದ್ದು ಹುಡುಗಿ ಪ್ರೇಮಳೂ ಅಮ್ಮನನ್ನು ಜೊತೆಗೂಡಿದಳು. ಐದನೇ ಇಯತ್ತೇಗೆ ಅವಳ ವಿದ್ಯಾಭ್ಯಾಸ ಮುಗಿದು ಹೋಗಿದ್ದುದರಿಂದ, ಭಟ್ಟರ ಮನೆಯಲ್ಲಿ ಭತ್ತ ಕುಟ್ಟಲು ತಾನೂ ಅಮ್ಮನೊಡನೆ ಹೋಗುತ್ತಿದ್ದಳು. ಒಂದು ದಿನಕ್ಕೆ ತಾಯಿ ಮಗಳು ಸೇರಿ ಅರ್ಧಮುಡಿ (21 ಸೇರು) ಭತ್ತ ಕುಟ್ಟುತ್ತಿದ್ದರು. ಅವರಿಗೆ ಅದಕ್ಕೆ ಐದು ಸೇರು ಅಕ್ಕಿ ಸಂಪಾದನೆಯಾಗಿ ದೊರಕುತ್ತಿತ್ತು. ಒಂದು ಹೊತ್ತಿಗೆ ಎರಡೂವರೆ ಸೇರು ಅಕ್ಕಿ ಹಾಕಿ ದೊಡ್ಡ ಹಂಡೆ ನೀರು ಹಾಕಿ ಗಂಜಿ ಮಾಡಿ ಮಕ್ಕಳಿಗೆ ಎರಡು ಹೊತ್ತು

ಕೊಡುತ್ತಿದ್ದರು. ತಾನು ರಾತ್ರಿಯೂಟ ಮಾಡದೆ ತನ್ನ ಭಾಗದ ಗಂಜಿಯನ್ನುಳಿಸಿ ಮರುದಿನ ಮುಂಜಾನೆ ಮಕ್ಕಳಿಗೆ ಶಾಲೆಗೆ ಹೋಗುವ ಮುನ್ನ ಬಡಿಸುತ್ತಿದ್ದರು. ಅಂದು ರಾತ್ರಿಯೂಟ ಬಿಟ್ಟವರು ಇಂದಿಗೂ ಅದೇ ಪರಿಪಾಠ ಬೆಳೆಸಿಕೊಂಡಿದ್ದಾರೆ. ಏನೂ ಇಲ್ಲದ ದಿನ ತೆಂಗಿನಕಾಯಿ ಎಳನೀರು, ಅಥವಾ ತೋಟದಲ್ಲಿ ಬಿಟ್ಟಿದ್ದ ಹಲಸಿನ ಹಣ್ಣು ಇವಿಷ್ಟರಲ್ಲಿಯೇ ಮಕ್ಕಳನ್ನು ಬೆಳೆಸಿದರು. ಭಾವ ಹಾಸ್ಯಗಾರ ವೆಂಕಟರಾವ್ ಅವರು ಶನಿವಾರದ ದಿನ ಬಂದು ಮಕ್ಕಳನ್ನು ಕರೆದೊಯ್ದು ಸೋಮವಾರ ಮುಂಜಾನೆ ಶಾಲೆಯ ಹೊತ್ತಿಗೆ ಕಳಿಸಿಕೊಡುತ್ತಿದ್ದರು. ವಾರಕ್ಕೊಂದು ದಿನ ದೊಡ್ಡಪ್ಪ ವೆಂಕಟರಮಣ ಅವರ ಮನೆಯಲ್ಲಿ ಮಕ್ಕಳಿಗೆ ಹೊಟ್ಟೆ ತುಂಬಾ ಊಟ ಸಿಗುತ್ತಿತ್ತು. ಆಗ ಯಕ್ಷಗಾನದಲ್ಲಿ ಹಾಸ್ಯಪಾತ್ರ ಮಾಡುತ್ತಿದ್ದ ವೆಂಕಟರಾಯರು ಯಕ್ಷಗಾನದಲ್ಲಿ ದೊಡ್ಡ ಹೆಸರು ಮಾಡಿದ್ದರು. ಹರಯದ ಮೀನಾಕ್ಷಿಗೆ ಉಡಲು ಸೀರೆಯಾದರೂ ಎಲ್ಲಿ?.... ಹನ್ನೆರಡು ಮೊಳದ ಒಂದು ಸೀರೆಯನ್ನೂ ಮೂರು ತುಂಡುಗಳನ್ನಾಗಿ ಮಾಡಿ ಒಂದೊಂದು ತುಂಡನ್ನು ಒಂದೊಂದು ದಿವಸ ಉಟ್ಟುಕೊಳ್ಳುತ್ತಿದ್ದರು. ಮೈಮೇಲೆ ತೊಡಲು ರವಿಕೆಯಾಗಲಿ, ಲಂಗವಾಗಲಿ ಇರಲಿಲ್ಲ. ಸುಮ್ಮನೆ ನಾಲ್ಕು ಮೊಳದ ಸೀರೆಯ ತುಂಡನ್ನು ಮೈಮೇಲೆ ಸುತ್ತಿಕೊಳ್ಳುತ್ತಿದ್ದರು.

ಮಕ್ಕಳಿಗೂ ಒಂದೊಂದೇ ಜೊತೆ ಬಟ್ಟೆಗಳಿದ್ದು, ಅವು ಯಾವ ಬದಿಯಿಂದ ತಿರುಗಿಸಿಕೊಂಡು ಹಾಕಿಕೊಂಡರೂ ಹರಕು ಮುಚ್ಚಲಾಗದಂತಿದ್ದವು. ಭತ್ತ ಕುಟ್ಟಲಾರದ ದಿನ ಒಂದು ಲೋಟ ರವೆಯನ್ನು ಒಂದು ದೊಡ್ಡ ಹಂಡೆ ನೀರಿಗೆ ಹಾಕಿ ಕುದಿಸಿ, ಅದಕ್ಕೆ ಎರಡು ತೆಂಗಿನ ಕಾಯಿ ರುಬ್ಬಿ ಹಾಕಿ, ರುಚಿಗೆ ತಕ್ಕ ಉಪ್ಪನ್ನು ಹಾಕಿ ಬಡಿಸುತ್ತಿದ್ದರು. ಇಡೀ ದಿವಸ ಮಕ್ಕಳಿಗೆಲ್ಲಾ ಅದೇ ಎರಡೂ ಹೊತ್ತಿನ ಗಂಜಿಯೂಟವಾಗಿರುತ್ತಿತ್ತು. ಇತ್ತ ಪಾಯಸಕ್ಕೆ ಪಾಯಸವೂ ಅಲ್ಲದೆ, ಗಂಜಿಗೆ ಗಂಜಿಯೂ ಅಲ್ಲದೆ, ಹೇಗೋ ಏನೋ, ಅಂತೂ ದಿನಗಳು ಕಳೆಯುತ್ತಿದ್ದವು. ಮಕ್ಕಳು ಕೆರೆಯಲ್ಲಿ ಸ್ನಾನ ಮಾಡಿ, ಮನೆಯಲ್ಲಿ ತಾಯಿ ಮಾಡಿಕೊಟ್ಟ ಗಂಜಿಯೂಟ ಮಾಡಿ ಶಾಲೆಗೆ ಹೋಗುತ್ತಿದ್ದರು.

ಶಾಲೆಗೆ ಹೋಗುತ್ತಿದ್ದ ಅವರಿಗೆ ಓದಲು ಪುಸ್ತಕಗಳೂ, ಅವುಗಳನ್ನು ಖರೀದಿಸಲು ಹಣವೂ ಇಲ್ಲದಿದ್ದುದರಿಂದ 5ನೇ

ಇಯತ್ತೆಯವರೆವಿಗೆ ಬರಿಯ ಸ್ಲೇಟು ಬಳಪದಲ್ಲಿ ಪಾಠ ಕಲಿತರು. ಶಾಲೆಯಲ್ಲಿ ಮಾಸ್ತರು ಹೇಳಿದ್ದನ್ನೂ, ಒಮ್ಮೆ ಕೇಳಿದ್ದನ್ನೂ, ನೆನಪಿನಲ್ಲಿಟ್ಟುಕೊಂಡೇ, ಏಕಪಾಠಿಯಾಗಿ ಪಾಠ ಕಲಿತರು. ಸೀಮೆಎಣ್ಣೆ ದೀಪದಲ್ಲೇ ಮಕ್ಕಳ ವಿದ್ಯಾಭ್ಯಾಸ, ಮನೆಯ ಗೃಹಕೃತ್ಯಗಳು ಅವಿಚ್ಛಿನ್ನವಾಗಿ ನಡೆಯುತ್ತಿದ್ದವು. ಬ್ರಾಹ್ಮಣರ ಮನೆಯಲ್ಲಿ, ಹೊಲದಲ್ಲಿ, ಕೆಲಸಮಾಡುತ್ತ, ಮಕ್ಕಳನ್ನು ಲಾಲಿಸಿದಳು ಮೀನಾಕ್ಷಿ. ಕಾಳಿಂಗರಾಯರು ಮನಸ್ಸು ಬಂದಾಗಲೊಮ್ಮೆ ಬಂದು ನೂರೋ, ಐವತ್ತೋ ರೂಪಾಯಿಗಳನ್ನು ಕೈಯ್ಯೊಳಗಿಟ್ಟು ಹೋಗುತ್ತಿದ್ದರು. ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಸಾಕಾಗುತ್ತದೆಯೇ? ಮೀನಾಕ್ಷಿ ತೇಪೆ ಹಾಕುತ್ತಲೇ ಸಂಸಾರದ ಮಾನವನ್ನು, ಪ್ರಾಣವನ್ನು ಕಾಪಾಡಿಕೊಳ್ಳಲು ಹೋರಾಡುತ್ತಿದ್ದಳು. ಆದರೆ ಸಂಸಾರವೆಂದರೆ ತಾವರೆ ಎಲೆಯ ಮೇಲಿನ ನೀರಿನಂತಿದ್ದ ಕಾಳಿಂಗರಾಯರು ತಾವು ಯಥೇಚ್ಛವಾಗಿ ಸಂಪಾದಿಸುತ್ತಿದ್ದ ಸಾವಿರಾರು ರೂಪಾಯಿಗಳನ್ನು ಎರಡೂ ಕೈಗಳಲ್ಲಿ ದಾನಮಾಡುತ್ತಿದ್ದರು. ದಾರಿಯಲ್ಲಿ ಹೋಗುವ ಭಿಕ್ಷುಕನಿಂದ ಹಿಡಿದು, ಗೆಳೆಯರಿಗೆ, ಶಿಷ್ಯರಿಗೆ, ಕಂಡವರಿಗೆ, ಯಾರಿಗಾದರೂ ಸರಿ, ಮನೋವೇಗದಲ್ಲಿ ಕೈಯಲ್ಲಿದ್ದುದನ್ನು ದಾನಮಾಡುವ ಉದಾರಿಗಳಾಗಿದ್ದರು. ರಾಯರನ್ನು ಕಂಡರೆ ಊರಿಗೆ ಊರೇ ಕೊಂಡಾಡುತ್ತಿತ್ತು. ಸಿಹಿಯಾದ ಪರಿಮಳ ತುಂಬಿದ ಪಾಯಸವನ್ನು ತನ್ನಲ್ಲೇ ತುಂಬಿಕೊಂಡ ಪಾಯಸದ ಪಾತ್ರೆಗೆ ಹೇಗೆ ಆ ಸಿಹಿಯ ಅನುಭವದ ನಾಲಿಗೆ ಇಲ್ಲವೋ ಹಾಗೆ ಮೀನಾಕ್ಷಮ್ಮ ಮತ್ತು ಅವರ ಮಕ್ಕಳಿಗೆ ಮಾತ್ರ ಕಾಳಿಂಗರಾಯರಿಂದ ಅನ್ಯರಿಗೆ ದೊರಕುತ್ತಿದ್ದ ಸಹಾಯ, ಆಶ್ರಯದ ನೆರಳೂ ಸೋಂಕಲಿಲ್ಲ. ರಾಯರ ವೈಭವ, ಕೀರ್ತಿ, ಸಿರಿಯ ಸ್ಪರ್ಶವಾಗಲೇ ಇಲ್ಲ.

## ಗುಬ್ಬಿ ಕಂಪನಿಯತ್ತ ಕಾಳಿಂಗರಾಯರು

ಚಲನಚಿತ್ರ ಹಿನ್ನೆಲೆ ಗಾಯನದಲ್ಲಿ ದೊಡ್ಡ ಹೆಸರು ಮಾಡಿ ಮೋಡಿ ಮಾಡಿದ್ದ ಕಾಳಿಂಗರಾಯರು ಕೀರ್ತಿಯ ಶಿಖರದಲ್ಲೇ ಬೀಡು ಬಿಟ್ಟಿದ್ದರು. ಪ್ರತಿಷ್ಠೆ, ಗೌರವ, ಕಲಾಭಿಜ್ಞತೆ, ಅವರನ್ನು ಎಡೆಬಿಡದೆ ಹಿಂಬಾಲಿಸಿದ್ದವು. 1955 ರಲ್ಲಿ ನಾಟಕರತ್ನ ಗುಬ್ಬಿ ವೀರಣ್ಣನವರು

ಭಗವಂತನ ಹತ್ತು ಅವತಾರಗಳ ವಸ್ತುವಿನ ಹತ್ತು ಕಿರುನಾಟಕಗಳ ಮಧುರ ಸಂಕಲನದ ಒಂದು ಮಹಾನಾಟಕ 'ದಶಾವತಾರ'ವನ್ನು ರಂಗಕ್ಕೆ ತಂದರು. ಅದಕ್ಕೆ ಸಂಗೀತ ನಿರ್ದೇಶನ ಮಾಡಲು ವೀರಣ್ಣನವರು ಕಾಳಿಂಗರಾವ್ ಅವರನ್ನು ಪ್ರಾರ್ಥಿಸಿಕೊಂಡಿದ್ದರು. ಕಾಳಿಂಗರಾಯರು ಗುಬ್ಬಿ ಕಂಪನಿಯಲ್ಲಿ ಸುಮಾರು ಐದಾರು ವರುಷ ಅವರ ಕಂಪನಿಯ ಸಂಗೀತ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ದಿನ ಬೆಳಗಾಗುವುದರಲ್ಲಿ 'ದಶಾವತಾರ'ದ ಎಲ್ಲ ಹಾಡುಗಳು ಮನೆ ಮಾತಾದವು. ನಾರದ ಹಾಡುವ 'ಮನವೆಂಬ ಸರಸಿಯಲಿ ಆಡು ಬಾ ಹಂಸ' ಎಂಬ ಹಾಡು ಪ್ರಸಿದ್ಧವಾಯಿತು. ಕಯಾದು ಹಾಡುವ 'ತಾಯಿ ಕರುಳಿನ ಕರೆಯ ಕೇಳಿ ಕಾವುದೆನ್ನಯ ಕಂದನಾ, ಬೇಯುತಿದೆ ಸಂದೇಹದುರಿ ಕಡೆ ಹಾಯಿಸ್ಯೆ ಕರುಣಾಘನಾ' ಎಂಬ ಗೀತೆಗಳು ಹಾಗೂ ಅಷ್ಟಪದಿಗಳು ಜನರ ನಾಲಿಗೆ ತುದಿಯಲ್ಲಿ ನಲಿದಾಡಿ ಅಮರವಾದವು. ನಾರದನ ಪಾತ್ರಕ್ಕೆ ದಕ್ಷಿಣಾದಿ ಶಾಸ್ತ್ರೀಯ ಶೈಲಿಯ ಸಂಯೋಜನೆಯನ್ನು, ಮಿಕ್ಕ ಹಾಡುಗಳಿಗೆ ಉತ್ತರಾದಿ ಶಾಸ್ತ್ರೀಯ ಸಂಗೀತವನ್ನೂ ಸಂಯೋಜಿಸಿದ ಕಾಳಿಂಗರಾಯರು ಗುಬ್ಬಿ ವೀರಣ್ಣನವರ ಮನವನ್ನು ಸುಲಭವಾಗಿಯೇ ಗೆದ್ದರು. ಗುಬ್ಬಿ ವೀರಣ್ಣ ಸುಂದರಮ್ಮನವರ ಮಕ್ಕಳಾದ ಸ್ವರ್ಣಮ್ಮ, ಮಾಲತಮ್ಮ ಬಗೆ ಬಗೆಯ ಪಾತ್ರದಲ್ಲಿ, ದಶಾವತಾರದಲ್ಲಿ ರಾಯರ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿ ಭಾವ ತುಂಬಿ ಅಭಿನಯಿಸಿದರು. ಕಾಳಿಂಗರಾಯರು 'ಲವಕುಶ' ಎನ್ನುವ ನಾಟಕಕ್ಕೂ ಸಂಗೀತ ನೀಡಿ ರಂಗ ಸಂಗೀತ ಸಂಯೋಜನೆಯಲ್ಲೂ ತಾವು ಮೇಲೆಂಬುದನ್ನು ಸಾಬೀತು ಮಾಡಿದರು. ಸೀತೆ ಹಾಡುವ 'ಜಗದಾನಂದದ ಜೋಜೋ ಲಾಲಿ ಜೋ' ಎಂಬ ಲಾಲಿ ಹಾಡು ಕಾಳಿಂಗರಾಯರ ಅದ್ಭುತ ಸಂಯೋಜನೆಗೆ ಸಾಕ್ಷಿಯಾಯಿತು. 'ಜೋಜೋ ಲಾಲಿ ಜೋ' ಎನ್ನುವಲ್ಲಿ ಜೋಗುಳದ ಇಂಪಿನೊಂದಿಗೆ ತೊಟ್ಟಿಲ ಜೀರುದನಿ, ಜೀಕಿ ಜೀಕಿ ಜೀಯುವಂತೆ ಸ್ವರ ಸಂಯೋಜನೆ ಕಿವಿಗೆ ಕೇಳಿದಾಗಷ್ಟೇ ವೇದ್ಯವಾಗುವಂತಹುದು. ಅದುವರೆವಿಗೂ ಕಂಪನಿಯ ನಾಟಕಗಳಿಗೆ ಶಾಸ್ತ್ರೀಯ ಕೃತಿಯನ್ನು ಅನುಕರಣೆ ಮಾಡಿ, ಅದೇ ಧಾಟಿಗೆ ಸಂದರ್ಭೋಚಿತವಾದ ಸಾಹಿತ್ಯ ಜೋಡಿಸುತ್ತಿದ್ದರು. ಆದರೆ ಕಾಳಿಂಗರಾಯರು ಆ ಸಂಪ್ರದಾಯವನ್ನು

ಮುರಿದು ವಿನೂತನ ಶೈಲಿಯಿಂದ ಹೊಚ್ಚ ಹೊಸದಾದ ರಾಗಗಳನ್ನು ಸಂಯೋಜಿಸಿದರು. ಬೃಹದ್ನಾಟಕವಾದ ದಶಾವತಾರದಲ್ಲಿ ನೂರ ಒಂದು ಮಂದಿ ಕಲಾವಿದರು ಅಭಿನಯಿಸುತ್ತಿದ್ದರು. ರಂಗಸಜ್ಜಿಕೆಯನ್ನು ಸಿದ್ಧಪಡಿಸುವವರೇ 75 ಜನರಿರುತ್ತಿದ್ದರು. ಪಾತ್ರವನ್ನು ಮಾಡುತ್ತಿದ್ದವರಲ್ಲಿ ಮಹಿಳೆಯರೇ 38 ಮಂದಿ ಇದ್ದರು. 1955 ಜೂನ್ 15ರಂದು ಬೆಂಗಳೂರಿನ ಟೌನ್‌ಹಾಲಿನಲ್ಲಿ ಮೈಸೂರ ಅರಸರಾದ ಜಯಚಾಮರಾಜೇಂದ್ರರ ಸಮ್ಮುಖದಲ್ಲಿ ಮೊಟ್ಟಮೊದಲು ಪ್ರದರ್ಶಿತವಾಯಿತು. ಕಾಳಿಂಗರಾಯರ ಸಂಗೀತದ ಮೋಡಿಯಿಂದ, ವೀರಣ್ಣನವರ ಸಾಹಸದಿಂದ ಸುಮಾರು 128 ಪ್ರದರ್ಶನಗಳಾಗಿ ಜಯಭೇರಿ ಹೊಡೆಯಿತು. ಈ ಮಧ್ಯೆ 'ಅಬ್ಬಾ ಆ ಹುಡುಗಿ' (1959) ಎನ್ನುವ ಚಿತ್ರಕ್ಕೆ ರಾಯರು ಸಂಗೀತ ನೀಡಿ ಸುದ್ದಿ ಮಾಡಿದರು. 1960ರಲ್ಲಿ ರಾಯರು ಗುಬ್ಬಿ ಕಂಪನಿಯಲ್ಲಿ ಸೇರಿದ ನಂತರದಲ್ಲಿ ಮೀನಾಕ್ಷಿಗೆ ನಾಲ್ಕನೆಯ ಮಗ ಸಂತೋಷ್ ಹುಟ್ಟಿದ. ಮೀನಾಕ್ಷಿಗೆ ಜೀವನದಲ್ಲಿ ಸಂತೋಷ ಬಿಸಿಲ್ಗುದುರೆಯಾದರೂ, ಮಕ್ಕಳಿಗಾಗಿ ಆಶಾಜೀವಿಯಾಗಿ ಬದುಕಿದಳು. ಮಕ್ಕಳ ಹೆಸರಿನಲ್ಲಿ ಪ್ರೇಮ, ವಸಂತ ಕಾಲದ ಸಂಭ್ರಮ, ಶರತ್‌ಕಾಲದ ವೈಭವ, ಸಂತೋಷ ಎಲ್ಲವೂ ಯತೇಚ್ಛವಾಗಿ ದೊರೆಯಿತು. ಬಡತನ ಮಾತ್ರ ಕುಚೇಲನನ್ನೂ ಮೀರಿಸಿತು. ದೂರದ ಬೆಂಗಳೂರಿನಲ್ಲಿ ರಾಯರು ವೈಭವದಿಂದ ಮೋಜು ಮಾಡುತ್ತಾ ಜೀವನದ ಮಧುಪಾತ್ರೆಯನ್ನೀಂಟುತ್ತಿದ್ದರೆ, ಬಾರಕೂರಿನಲ್ಲಿ ಮೀನಾಕ್ಷಿ ಬೆವರಿನಲ್ಲಿ ಮಿಂದು, ಉಪವಾಸದಲ್ಲಿ ನೊಂದು, ವಿರಹದುರಿಯಲ್ಲಿ ಬೇಯುತ್ತಾ ಇದ್ದಳು. ಅತ್ತ ರಾಯರು ಯೌವನವನ್ನು ನಿರ್ಭಿಡೆಯಿಂದ ಅಳೆದು ಅಳೆದು ಸುರಿದು ಪೋಲು ಮಾಡುತ್ತಿದ್ದರೆ, ಇತ್ತ ಮೀನಾಕ್ಷಿ ತನ್ನ ಮಾನವನ್ನು ಕಾಪಾಡಿಕೊಳ್ಳುವ ಭೀತಿಯಿಂದ ತನ್ನ ಮನೆಯಲ್ಲಿ ಏಕಾಂಗಿಯಾಗಿ ಮಲಗದೆ, ತಾನು ಕೆಲಸ ಮಾಡುತ್ತಿದ್ದ ಭಟ್ಟರ ಹೆಂಗಸರೊಡನೆ ಅಡಗಿಕೊಂಡು ಮಲಗುತ್ತಿದ್ದಳು. ಅವಳು ಜತನದಿಂದ ಕಾಪಾಡಿಕೊಂಡು ಬಂದ ಪಾತಿವ್ರತ್ಯವೇ ಅವಳಿಗೆ ರಕ್ಷೆಯಾಯಿತು. ಮೀನಾಕ್ಷಿ ತನ್ನ ಮಕ್ಕಳಿಗೆ ತಂದೆಯೂ ತಾನೇ ಆಗಿ ಶಾಲೆಗೆ ಸೇರಿಸಿದಳು. ಬಾರಕೂರಿನಲ್ಲಿ ಅಕ್ಕಪಕ್ಕದವರಿಗೆಲ್ಲಾ ಅತ್ಯಂತ

ಪ್ರಿಯಳಾದ ಹೆಣ್ಣಾಗಿ ಮೀನಮ್ಮ ಎಂಬ ಗೌರವ ನಾಮಕ್ಕೆ ಪಾತ್ರಳಾದಳು. ಹೀಗೆ ಮೀನಾಕ್ಷಿಯ ಬಾಳಿನ ಸಂಪುಟದಲ್ಲಿ ನಲವತ್ತೆರಡು ಸಂವತ್ಸರಗಳು ಕಳೆದುಹೋದವು.

## ಕತ್ತಲಲ್ಲಿ ಮುತ್ತಾಗಿ ಬಂದವಳು

ಮೀನಾಕ್ಷಿಗೆ ಹಗಲೆಲ್ಲಾ ವಿಪರೀತ ಕೆಲಸವಿದ್ದು ಆಯಾಸವಾಗುತ್ತಿತ್ತು. ಹಗಲು ದೀರ್ಘವಾದರೂ, ಹೊಟ್ಟೆಪಾಡಿಗಾಗಿ ದುಡಿಯಲೇಬೇಕಾಗಿತ್ತು. ಸಂಜೆಗೆ ಕತ್ತಲಾದೊಡನೆ ಮಿಣುಕುವ ಸೀಮೆಎಣ್ಣೆ ದೀಪ ಎಂಟುಗಂಟೆಗೆ ನಂದಿ ಹೋಗಿ ರಾತ್ರಿ ಬೇಗ ಮುಗಿದುಹೋಗುತ್ತಿತ್ತು. ಮಕ್ಕಳಿಗೆ ಗಂಜಿಯೂಟ ಕೊಟ್ಟು ಮಲಗುತ್ತಿದ್ದ ಮೀನಾಕ್ಷಿಯ ಅಕ್ಕಪಕ್ಕದಲ್ಲಿ ಪುಟ್ಟಮಕ್ಕಳು ಸಂತೋಷ ಮತ್ತು ಶರತ್ ಅಮ್ಮನ ತೋಳನ್ನು ತಬ್ಬಿ ಮಲಗುತ್ತಿದ್ದರು. ಇಬ್ಬರಿಗೂ ಅಮ್ಮನ ತೋಳಿನಲ್ಲೇ ಮಲಗುವ ಆಸೆ. ಆರುವರ್ಷದ ಪುಟ್ಟ ಸಂತೋಷ್‌ಗೂ ಅಮ್ಮನೇ ಬೇಕು. ಹತ್ತು ವರ್ಷದವನಾದ ಶರತ್ಕುಮಾರನಿಗೂ ತಾಯಿಯೇ ಕಥೆ ಹೇಳಿ ಮಲಗಿಸಬೇಕು. ಇಪ್ಪತ್ತೆರಡು ವರ್ಷದವಳಾದ ಹಿರಿಯ ಮಗಳು ಪ್ರೇಮ ತಮ್ಮಂದಿರನ್ನು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು. ವಸಂತ್ ಅಕ್ಕನೊಟ್ಟಿಗೆ ಮಲಗಿಕೊಳ್ಳುತ್ತಿದ್ದ. ಮೀನಾಕ್ಷಿಗೆ ಹಗಲಿನಲ್ಲಿ ಕೆಲಸ ಮಾಡಿ ದಣಿವಾಗುತ್ತಿದ್ದರಿಂದ ರಾತ್ರಿ ನಿದ್ದೆ ಬೇಗನೆ ಬಂದು ಆಲಂಗಿಸುತ್ತಿತ್ತು. ಪ್ರಾಪಂಚಿಕ ಬಯಕೆಗಳಾಗಲಿ, ಪತಿಯ ವಿರಹವಾಗಲಿ, ಯಾವುದೂ ಉತ್ಕಟವಾಗದೆ ಇಳಿಮುಖವಾಗಿತ್ತು. ಒಂದು ದಿನ ಹೀಗೆ ಮಕ್ಕಳೊಂದಿಗೆ ರಾತ್ರಿ ಮಲಗಿರುವಾಗ ಪತಿ ಕಾಳಿಂಗರಾಯರು ಬಂದು ಬಾಗಿಲು ತಟ್ಟಿದರು. ಕತ್ತಲಿನಲ್ಲಿ ಎದ್ದು ದೀಪ ಹಚ್ಚಿ ಬಾಗಿಲು ತೆರೆದ ಮೀನಾಕ್ಷಿಯ ಕಣ್ಣಿಗೆ ಕಂಡಿದ್ದು ಮಧ್ಯಮ ವಯಸ್ಸಿನ ಹೆಂಗಸೊಬ್ಬಳೊಂದಿಗೆ ನಿಂತ ಪತಿ ಕಾಳಿಂಗರಾಯರು. ಎಂದೂ ಎದುರು ಪ್ರಶ್ನೆಗಳನ್ನು ಕೇಳದ ಆಕೆ ಎಂದಿನಂತೆ ಪತಿಯನ್ನು ಸ್ವಾಗತಿಸಿದರು. ರಾತ್ರಿ ಗಂಟೆ ಹತ್ತಾಗಿತ್ತು. ಬಂದವರಿಗೆ ಮಲಗಲು ಅಣಿ ಮಾಡಿಕೊಟ್ಟರು. ಒಂದು ವಾರದವರೆವಿಗೆ ಕಾಳಿಂಗರಾಯರು ಆ ಹೆಂಗಸೊಂದಿಗೆ ಮನೆಯಲ್ಲೇ ಉಳಿದರು. ಆ ಅವಧಿಯಲ್ಲಿ ಅತಿಥಿಯಾಗಿ ಬಂದ ಆ ಹೆಂಗಸು ಪ್ರಸಿದ್ಧ

ನಟಶ್ರೇಷ್ಠರಾದ ಗುಬ್ಬಿ ವೀರಣ್ಣನವರ ಮಗಳೆಂದೂ, ಹೆಸರು ಸ್ವರ್ಣಮ್ಮನೆಂದೂ, ಮೀನಾಕ್ಷಿಗೆ ತಿಳಿಯಿತು. ಆಕೆ ಮನೆಯವರೊಂದಿಗೆ ಆತ್ಮೀಯವಾಗಿ ಬೆರೆತಳು. ಮೀನಾಕ್ಷಿಯನ್ನು ಮತ್ತು ಮಕ್ಕಳನ್ನು ಪ್ರೀತಿಯಿಂದ ತನ್ನವರೆಂದು ತಕ್ಕೈಸಿಕೊಂಡಳು. ಅಲ್ಲಿಗೆ ಬರುವ ಮುನ್ನವೇ ರಾಯರಿಂದ ಮನೆಯ ಮಕ್ಕಳ ಬಗೆಗೆ ವಿವರಗಳನ್ನು ತಿಳಿದುಕೊಂಡ ಆಕೆ, ಮಕ್ಕಳಿಗೆ ಅವರ ಅಳತೆಗೆ ಸರಿ ಹೊಂದುವಂತಹ ಹೊಸ ಬಟ್ಟೆಗಳನ್ನು ಖರೀದಿಸಿ ತಂದಿದ್ದರು. ಮೀನಾಕ್ಷಿಗೂ ಹೊಸ ಸೀರೆ ರವಿಕೆ ತಂದಿದ್ದರು. ಮೀನಾಕ್ಷಿ ಮತ್ತು ಮಕ್ಕಳಿಗೆ ಒಮ್ಮೆಲೆ ವಸಂತ ಕಾಲದ ಸಂಭ್ರಮ ಎದುರಾಯಿತು. ಸ್ವರ್ಣಮ್ಮ ತಮ್ಮ ಪ್ರೀತಿಯ ಮಾತಿನಿಂದ, ಹೃದಯವಂತಿಕೆಯಿಂದ ಮನೆಯವರನ್ನು ಗೆದ್ದುಕೊಂಡರು. ತಾವು ಮರಳಿ ಹೊರಟಾಗ ಮೀನಾಕ್ಷಿಯೊಂದಿಗೆ ತಾವು ರಾಯರಿಗೆ ಸೋತಿರುವುದಾಗಿಯೂ, ಅವರನ್ನು ಪ್ರೀತಿಸುತ್ತಿರುವುದಾಗಿಯೂ ತಿಳಿಸಿದರು. ತಾವು ರಾಯರೊಂದಿಗೆ ಬಾಳ್ವೆ ಮಾಡುವುದು ಮೀನಾಕ್ಷಿಗೆ ಒಪ್ಪಿಗೆಯೇ ಎಂದು ಕೇಳಿದರು. ನಿಷ್ಕಳಂಕಳಾದ ಮೀನಾಕ್ಷಿ ಮನಸ್ಸಿನ ನೋವನ್ನು ನುಂಗಿಕೊಂಡೇ ನಗೆಮುಖದಿಂದ ದಾರಿ ಬಿಟ್ಟುಕೊಟ್ಟಳು. ಮಕ್ಕಳಿಗೆ ಮಾತ್ರ ಅನ್ಯಾಯವಾಗಬಾರದೆಂದು ಬೇಡಿಕೊಂಡಳು. ಸ್ವರ್ಣಮ್ಮ ಮೀನಾಕ್ಷಿಯ ಮುಗ್ಧಮನಸ್ಸಿಗೆ ಕರಗಿಹೋದರು. 'ಮೀನಾಕ್ಷಮ್ಮನವರೇ, ನನಗೂ ಮಕ್ಕಳಿಲ್ಲ. ಇಂದಿನಿಂದ ನಿಮ್ಮ ಮಕ್ಕಳೇ ನನ್ನ ಮಕ್ಕಳು' ಅಂದರು. ಮೂರನೆಯವನಾದ ಶರತ್‌ಕುಮಾರನನ್ನು ನನಗೆ ಕೊಡಿ, ನಾನೇ ಸಾಕುತ್ತೇನೆ ಎದರು. ಶರತ್ ಆಗಿನ್ನೂ 6ನೇ ತರಗತಿಯಲ್ಲಿ ಓದುತ್ತಿದ್ದ. ನೋಡುವುದಕ್ಕೆ ಕಾಳಿಂಗರಾಯರ ತರಹವೇ ಕಾಣುತ್ತಿದ್ದ. ಅವನು S.S.L.C. ಮುಗಿಸಲಿ ಆ ನಂತರ ಕಳಿಸುತ್ತೇನೆ ಎಂದು ಮೀನಾಕ್ಷಿ ಸ್ವರ್ಣಮ್ಮನಿಗೆ ಮಾತು ಕೊಟ್ಟರು. ಅಂದಿನಿಂದ ರಾಯರ ಮಕ್ಕಳು ಸ್ವರ್ಣಮ್ಮನನ್ನು ದೊಡ್ಡಮ್ಮ ಎಂದು ಕರೆಯಲು ಪ್ರಾರಂಭಿಸಿದರು. ಮೀನಾಕ್ಷಿಗೆ ಸ್ವರ್ಣಮ್ಮ, ಸ್ವರ್ಣಕ್ಕಾ ಆದಳು. ರಾತ್ರಿ ಕತ್ತಲಲ್ಲಿ ಬಂದ ಸ್ವರ್ಣಮ್ಮ ರಾಯರ ಸಂಸಾರಕ್ಕೆ ಅಚಲ ಆಶಾಕಿರಣವಾದಳು. ಬದುಕಿನ ಕತ್ತಲಲ್ಲಿಯೂ ಮುತ್ತಾಗಿ ಹೊಳೆದು ದಾರಿ ತೋರಿದಳು.

## ಕಲಾಕುಂಜದ ಕಾವಲಿನಲ್ಲಿ

ಸ್ವರ್ಣಮ್ಮ ಕಾಳಿಂಗರಾಯರ ಬದುಕಿಗೆ ಪ್ರವೇಶಮಾಡಿದ ನಂತರದಲ್ಲಿ ಅವರ ಬಿಡಾರ ಗಾಂಧಿನಗರದಲ್ಲಿದ್ದ ಸ್ವರ್ಣಮ್ಮನವರ ಮನೆ 'ಕಲಾಕುಂಜ'ದಲ್ಲೇ ಬೀಡುಬಿಟ್ಟಿತು. ತಮ್ಮನ್ನು ಒಲಿದ ಸ್ವರ್ಣಮ್ಮನೊಂದಿಗೆ ಕಾಳಿಂಗರಾಯರು ಬದುಕು ನಡೆಸಲು ಪ್ರಾರಂಭಿಸಿದರು.

ಸ್ವರ್ಣಮ್ಮ 7 ವರ್ಷದವಳಾಗಿದ್ದಾಗಲಿಂದ ವೃತ್ತಿ ನಾಟಕ ಕಂಪನಿಯಲ್ಲಿ ಬಾಲನಟಿಯಾಗಿ ಅಭಿನಯಿಸಿ ಪ್ರಸಿದ್ಧರಾಗಿದ್ದರು. 'ಸರ್ವದಮನ, ಭೋಜ, ವಸಂತ, ಪ್ರಹ್ಲಾದ, ಶ್ರೀಕೃಷ್ಣ, ಧ್ರುವ, ಲೋಹಿತಾಶ್ವ, ಪ್ರಭಾಮಣಿ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದರು. ದೊಡ್ಡವರಾದ ಮೇಲೂ ಉತ್ತರೆ, ರಾಧಾ, ಅಕ್ಕಮಹಾದೇವಿ, ದೇವಾಂಗನೆ, ತಾರಾಮಂಜರಿ, ಮಂದಾರವಲ್ಲಿ, ಸೀತೆ, ಪಾತ್ರದಲ್ಲಿ ನಾಟಕ ಕಂಪನಿಯಲ್ಲಿ ಪ್ರಸಿದ್ಧರಾಗಿದ್ದರೂ, ಮುಂದೆ ಗೆಜ್ಜೆಪೂಜೆ, ದೇವರ ಮಕ್ಕಳು, ಶರಪಂಜರ, ಸಾಕ್ಷಾತ್ಕಾರ, ಸುಭದ್ರಾ, ಕಲ್ಯಾಣ ಉಪಾಸನೆ ಮುಂತಾದ ಚಲನಚ್ಚಿತ್ರದಲ್ಲಿ ಅಭಿನಯಿಸಿ ತಮ್ಮ ಅಮೋಘ ಅಭಿನಯದಿಂದ ಮನಸೆಳೆದರು.

ಸುಶ್ರಾವ್ಯವಾಗಿ ಹಾಡುತ್ತಿದ್ದ ಸ್ವರ್ಣಮ್ಮನವರ ಬಗೆಗೆ ರಾಯರಿಗೆ ವಿಶೇಷವಾದ ಆಕರ್ಷಣೆ ಇತ್ತು. ಆಕೆಯಿಂದ ಜೀವನದಲ್ಲಿ ಕಲಿಯಬೇಕಾದದ್ದು ಬಹಳ ಇದೆ ಎಂದು ರಾಯರಿಗೆ ಅನ್ನಿಸಿತ್ತು. ಮೊಟ್ಟಮೊದಲನೆಯದಾಗಿ ಅವರು ಮರೆತ ಸಂಸಾರದ ಹೊಣೆಯನ್ನು ಸ್ವರ್ಣಮ್ಮನವರೇ ಪುನಃ ಪುನಃ ನೆನಪಿಸಿ, ಅವರನ್ನು ಎಚ್ಚರಿಸುತ್ತಿದ್ದರು. ಸಂಸಾರ ಮತ್ತು ಮಕ್ಕಳ ಬಗೆಗೆ ರಾಯರಿಗೆ ಒಲವು ಮೂಡಿಸುವಲ್ಲಿ ಸ್ವರ್ಣಮ್ಮ ಸಫಲರಾದರು. ಗುಂಡು ಗೋವಿಯಾಗಿಯಾಗಿದ್ದ ರಾಯರಿಗೆ ಕುಟುಂಬದ ಅರ್ಥ ನಿಧಾನವಾಗಿ ಆಗತೊಡಗಿತು. ಸ್ವರ್ಣಮ್ಮ ರಾಯರಿಗೆ ಬುದ್ಧಿ ಹೇಳಿ ಬಾರಕೂರಿಗೆ ಆಗಾಗ್ಗೆ ಕಳಿಸಿ ಹಣ ಕೊಡುತ್ತಿದ್ದರು. ರಾಯರು ಹೊರಬೇಕಾದ ಹೊಣೆಗಾರಿಕೆಯನ್ನು ಅವರಿಗೆ ಅನವರತ ಮನವರಿಕೆ ಮಾಡಿಕೊಡುತ್ತಿದ್ದರು. ಮಧುಪಾನ-ಧೂಮಪಾನ ವ್ಯಸನಿಯಾಗಿದ್ದ ರಾಯರನ್ನು ಸ್ವರ್ಣಮ್ಮ

ನಿಯಂತ್ರಿಸಿ, ಶಿಸ್ತಿನಿಂದ ಅವರನ್ನು ನೋಡಿಕೊಂಡರು. ರಾಯರನ್ನು ಕಣ್ಣಿನಂತೆ ಎಚ್ಚರಿಕೆಯಲ್ಲಿಟ್ಟು ಕಾಪಾಡಿದರು. ಕಾವಲಾಗಿ ನಿಂತು ಮುನ್ನಡೆಸಿದರು.

## ನಾಲಿಗೆಯಲ್ಲಿ ನರ್ತಿಸಿದ ಹುರುಳಿಗೊಜ್ಜು

ಕಾಳಿಂಗರಾಯರು ತಮ್ಮ ಹೆಂಡತಿ ಮೀನಾಕ್ಷಿ ಮತ್ತು ಮಕ್ಕಳೊಡನೆ ಇರಲು ಬಿಡುವಿದ್ದಾಗಲೆಲ್ಲಾ ಬಾರಕೂರಿಗೆ ಹೋಗಿ ಬರುತ್ತಿದ್ದರು. ಸ್ವರ್ಣಮ್ಮನವರ ಒಡನಾಟದ ಅನಂತರ, ಅವರಿಗೆ ಅತ್ಯಂತ ಪ್ರಿಯವಾದ ಹುರುಳಿಯ ಗೊಜ್ಜನ್ನು ಹೆಂಡತಿಯ ಕೈಯಿಂದ ತಿಂದು ಬಾಯಿ ಚಪ್ಪರಿಸುತ್ತಿದ್ದರು. ಹೆಂಡತಿ, ಸಂಸಾರ, ಮಕ್ಕಳೊಂದಿಗೆ ಇರುವ ಬಂಧನ ರಾಯರ ಹೃದಯಕ್ಕೆ ತಟ್ಟಲು ಪ್ರಾರಂಭಿಸಿದ್ದು ಆಗಲೇ ಮನೆದೇವರು 'ಬ್ರಹ್ಮಲಿಂಗ'ನ ಭಕ್ತರಾದ ರಾಯರು ಊರಿಗೋದೊಡನೆಯೇ ಹೋಗಿ ದರ್ಶನ ಮಾಡಿಕೊಂಡು ಬರುತ್ತಿದ್ದರು. ಒಮ್ಮೆ ಬೆಂಗಳೂರಿನಲ್ಲಿದ್ದಾಗ ಹುರುಳಿ ಗೊಜ್ಜನ್ನು ತಿನ್ನುವ ಬಯಕೆಯಾಗಿ ತಮ್ಮ ಜೊತೆಯಿದ್ದ ಹಿರಿಯ ಮಗ ವಸಂತನಿಗೆ ಮಾಡಲು ಹೇಳಿದರು. ವಸಂತ ತಾಯಿ ಮಾಡುವ ಕ್ರಮದಲ್ಲೇ ಮಾಡಿದನಾದರೂ, ರಾಯರಿಗೆ ರುಚಿಸಲಿಲ್ಲ. ಮೀನಾಕ್ಷಿಯ ಹಾಗೆ ಮಾಡಲು ಯಾರಿಗೂ ಆಗುವುದಿಲ್ಲ ಎಂದರು. ಮರುದಿನವೆ, ಊರಿಗೆ ಹೋಗಿ ಹೆಂಡತಿಯ ಕೈಯಲ್ಲಿ ಹುರುಳಿ ಗೊಜ್ಜು ಮಾಡಿಸಿ ತಿಂದು ಬೆಂಗಳೂರಿಗೆ ಬಂದರು.

## ಬೆದರಿಸಿದ ಬ್ರಹ್ಮಲಿಂಗ

ಕಾಳಿಂಗರಾಯರ ಆರಾಧ್ಯದೈವ, 'ಬ್ರಹ್ಮಲಿಂಗ' ಮತ್ತು 'ಬೆಟ್ಟದ ಚಾಮುಂಡಿ' ಪ್ರತಿದಿನ ಎದ್ದೊಡನೆಯೇ ಅವರು ನೆನೆಯುತ್ತಿದ್ದುದು ಈ ಎರಡು ದೇವ, ದೇವತೆಗಳನ್ನೇ ಒಂದು ರಾತ್ರಿ ಮಂಚದ ಮೇಲೆ ಮಲಗಿದ್ದವರಿಗೆ ಇದ್ದಕ್ಕಿದ್ದಂತೆ ಎಚ್ಚರವಾಯಿತು. ಕಣ್ಣು ಬಿಟ್ಟು ನೋಡಿದಾಗ ಅವರು ಮಂಚದ ಕೆಳಗೆ ಮಲಗಿದ್ದರು. ಇದೇನಿದು ಮಂಚದ ಮೇಲಿನಿಂದ ಕೆಳಗೆ ಹೇಗೆ ಬಂದೆ? ಎಂದು ಆಶ್ಚರ್ಯವಾಯಿತು. ಮತ್ತೆ ಎದ್ದು ಬಂದು ಮಂಚದಲ್ಲಿ ಮೊದಲಿನ

ಹಾಗೆಯೇ ಮಲಗಿದರು. ಸ್ವಲ್ಪ ಹೊತ್ತಿನ ನಂತರ ನಿದ್ದೆ ಬಂದಂತಾಗಿ ಎಚ್ಚರವಾಯಿತು. ಪುನಃ ಅವರು ಮಂಚದ ಕೆಳಗೇ ಮಲಗಿದ್ದರು. ಹೀಗೆ ಮೂರು-ನಾಲ್ಕು ಬಾರಿ ಆಯಿತು. ನಾಲ್ಕನೆ ಬಾರಿ ಪುನಃ ಛಲ ಬಿಡದ ತ್ರಿವಿಕ್ರಮನಂತೆ ರಾಯರು ಮಂಚದಲ್ಲೇ ಮಲಗಿದರು. ಮಲಗಿದ ಹಾಗೆ ಕನಸೊಂದನ್ನು ಕಂಡರು. ಬಿಳಿಯ ಗಡ್ಡವಿರುವ ಹಣ್ಣು ಹಣ್ಣು ಮುದುಕನೊಬ್ಬ ಬಂದು ಅಬ್ಬರಿಸಿದ, 'ಕಾಳಿಂಗ ಏನೋ? ನನ್ನನ್ನೇ ಮರೆಯುವಷ್ಟು ದೊಡ್ಡವನಾದೆಯೋ? ನಿನಗೆ ಎಷ್ಟೋ ಪೊಗರು?' ತಕ್ಷಣ ಎದ್ದ, ರಾಯರು ಹೊರಟಿದ್ದು 'ಬ್ರಹ್ಮಲಿಂಗ'ನ ದರುಶನಕ್ಕೆ, ಬಾರಕೂರಿಗೆ ಬಂದು 'ಬ್ರಹ್ಮಲಿಂಗದೇವರ' ದರುಶನ ಪಡೆದ ಮೇಲೆ ಮನಸ್ಸಿನ ತಳಮಳ ನಿಂತು ನೆಮ್ಮದಿ ದೊರೆತಿತು. ಬರುವ ಮುನ್ನ ಹೆಂಡತಿಗೆ ಹೇಳಿದರು. ಮೀನಾಕ್ಷಿ ಪ್ರತಿ ಸೋಮವಾರ ಬ್ರಹ್ಮಲಿಂಗನಿಗೆ ಕಾಯಿ ಒಡೆಸುವುದನ್ನು ಮಾತ್ರ ಮರೆಯಬೇಡ.

## ಕನ್ಯಾದಾನ ಮಾಡಿಸಿದ ಸ್ವರ್ಣಮ್ಮ

ರಾಯರನ್ನು ಪ್ರೀತಿಸಿ ಅವರ ಒಡನಾಟ ಬಯಸಿದ್ದ ಸ್ವರ್ಣಮ್ಮ ಅನ್ವರ್ಥನಾಮರಾಗಿ ಒದಗಿ ಬಂದದ್ದು ರಾಯರ ಕುಟುಂಬಕ್ಕೆ. ಕಡುಕಷ್ಟದ ದಿನಗಳನ್ನು ಕಳೆಯುತ್ತಿದ್ದ ಮೀನಾಕ್ಷಿಯನ್ನು ಸ್ವರ್ಣಮ್ಮ ಅಕ್ಕನಾಗಿ ಪ್ರೀತಿಸಿದರು. ಆಕೆಯ ಮಕ್ಕಳನ್ನು ತಾನು ಹೆತ್ತ ಮಕ್ಕಳೇನೋ ಎನ್ನುವಷ್ಟು ಸಹಜವಾಗಿ ತೆಕ್ಕೆಗೆ, ಮಡಿಲಿಗೆ ಹಾಕಿಕೊಂಡರು. ಮಕ್ಕಳ ಪಾಲಿಗೆ ಮರೀಚಿಕೆಯಾಗಿದ್ದ, ಅಗತ್ಯ ವಸ್ತು ವಗೈರೆಗಳಿಂದ ಹಿಡಿದು ತಿಂಡಿ, ತಿನಿಸಿನವರೆವಿಗೆ ಆಕೆ ನಿಗಾವಹಿಸಿ ಅಗತ್ಯಗಳನ್ನು ಪೂರೈಸಿದಳು. ವಯಸ್ಸಿಗೆ ಬೆಳೆದು ನಿಂತ ಇಪ್ಪತ್ಮೂರು ವರುಷದ ಮಗಳು ಪ್ರೇಮಾಳಿಗೆ ತಾನೇ ನಿಂತು ಮದುವೆ ಮಾಡಿದರು. ಆಕೆ ಮದುವೆ ಸಮಯದಲ್ಲಿ ತೆಗೆದುಕೊಟ್ಟ ಸೀರೆ, ಒಡವೆ, ಚಿನ್ನದ ಬೆಂಡೋಲೆ ಅವರು ತೋರಿದ ಪ್ರೀತಿಗೆ ಸಾಕ್ಷಿಯಾಯಿತು. 1996ನೇ ಇಸವಿ ಜೂನ್, ಹತ್ತನೇ ತಾರೀಕು 'ರಾಧಾಕೃಷ್ಣ ಶ್ಯಾನುಭಾಗ್' ಎನ್ನುವ ಕಾಸರುಗೋಡಿನ ವರನಿಗೆ ರಾಯರ ಮಗಳು ಪ್ರೇಮಾಳನ್ನು ಕೊಟ್ಟು ವಿವಾಹವಾಯಿತು.

ಸ್ವರ್ಣಮ್ಮನ ಶಿಸ್ತಿನ ಸಿಪಾಯಿಯಂತೆ ರಾಯರು ತಮ್ಮ ಕರ್ತವ್ಯಗಳನ್ನು ಒಂದೊಂದನ್ನಾಗಿ ನಿಭಾಯಿಸಿದರು.

## ರಾಯರ ಕಲಾ ಜೀವನ

ಸಂಸಾರದ ಬಂಧನಗಳಲ್ಲಿ ಆಗಾಗ್ಗೆ ಸಿಲುಕಿದವರಂತೆ ಕಾಣುತ್ತಿದ್ದ ಕಾಳಿಂಗರಾಯರು ನಿಜವಾಗಿ ಸಿಲುಕಿದ್ದು ಸಂಗೀತದ ಕಲಾ ಬಂಧನಕಷ್ಟೇ, 'ಸ್ತ್ರೀ ಸೌಂದರ್ಯ ಶರೀರದಲ್ಲಿಲ್ಲ, ಶಾರೀರದಲ್ಲಿದೆ' ಎನ್ನುತ್ತಿದ್ದ ರಾಯರು ಕಲೆಗೆ ಮಾತ್ರ ಬಾಗುತ್ತಿದ್ದರು. ಯಾವುದೇ ಆಕರ್ಷಣೆ ಅವರಿಗಾಯಿತೆಂದರೆ ಅಲ್ಲಿ ಕಲೆಯ ರುಚಿ ಇದ್ದರೆ ಮಾತ್ರ. ಅವರನ್ನು ಸಂಗೀತ ಸರಸ್ವತಿ ವರಿಸಿದ್ದ ಮಟ್ಟದಲ್ಲಿ ಬೇರಾರೂ ವರಿಸಿರಲಿಲ್ಲ. ಅವರಲ್ಲಿದ್ದ ಕಲಾಭಿಜ್ಞತೆ ಯಾವಾಗಲೂ ಹೊಚ್ಚ ಹೊಸದಾಗಿರುತ್ತಿತ್ತು. ಅವರು ವರಿಸಿದ್ದ ಗಾನರಾಣಿಗೆ ಯಾವಾಗಲೂ ಯೌವನವೇ. ಮುಪ್ಪೆಂಬ ಮಾತೇ ಇಲ್ಲ. ಆಕೆ ಚಿರಯೌವ್ವನೆಯಾಗಿದ್ದಳು. ರಾಯರು ರಾಗ ಸಂಯೋಜನೆಯಲ್ಲಿ ಹೊಸತನವನ್ನು ಹುಡುಕುತ್ತಲೇ ಇದ್ದರು.

## ಪ್ರಯೋಗಶೀಲ ರಾಯರು

ಜಾನಪದ ಗೀತೆಗಳನ್ನು ವೇದಿಕೆಯ ಮೇಲೆ ರಾಯರು ಹಾಡುವ ಸಂಪ್ರದಾಯವನ್ನು ಮೊದಲಿಗೆ ತಂದಂತೆ, ಹಿಂದೂಸ್ತಾನಿ ಮತ್ತು ಕರ್ನಾಟಕ ರಾಗಗಳ ಸಂಮಿಶ್ರಣವನ್ನೂ ಮಾಡಿ ತೋರಿಸಿದರು. ನಾಟಕ ಕಂಪನಿಯಲ್ಲಿ ಅವರು ಸಂಗೀತ ಸಂಯೋಜಕರಾಗಿದ್ದಾಗಲೇ ಪಕ್ಕವಾದ್ಯದವರನ್ನು ಕಲಾಪ್ರಯೋಗಗಳಲ್ಲಿ ಸಿಲುಕಿಸುತ್ತಿದ್ದರು. 'ದಶಾವತಾರ' ನಾಟಕದಲ್ಲಿ ಒಂದು ಹಾಡನ್ನು 9 ಮಾತ್ರೆಯ ತಾಳದಲ್ಲಿ ವಿಶಿಷ್ಟವಾಗಿ ಸಂಯೋಜಿಸಿದ್ದರು. 'ಮಹಾಶಿಲ್ಪಿ' ಎನ್ನುವ ಚಲನ ಚಿತ್ರಕ್ಕೆ 1966ರಲ್ಲಿ ಸಂಗೀತ ನಿರ್ದೇಶಕರಾದಾಗ 12 ಮಾತ್ರೆಯ ಹೊಸದಾದ ತಾಳ ಪ್ರಯೋಗವನ್ನು ಮಾಡಿದರು. 'ಬಾಹುಬಲಿಯೆ ಬಾಹುಬಲಿಯೆ ಗೊಮ್ಮಟೇಶ ಗೊಮ್ಮಟೇಶ' ಹಾಡು ರಾಯರ ಪ್ರಯೋಗಶೀಲತೆಯೊಂದಿಗೆ ಅತ್ಯಂತ ಜನಪ್ರಿಯತೆಯನ್ನೂ ಪಡೆಯಿತು. ಆದರೂ ರಾಯರು ನಿರೀಕ್ಷಿಸಿದ ಮಟ್ಟದಲ್ಲಿ ಅವರ ಪ್ರಯೋಗಶೀಲತೆಗೆ ಪುರಸ್ಕಾರ ದೊರೆಯಲಿಲ್ಲ. ಯಾಂತ್ರಿಕವಾಗಿ ಚಿತ್ರ ನಿರ್ದೇಶನ ತಾಳಕ್ಕೆ ತಕ್ಕಂತೆ ರಾಗ ಸಂಯೋಜನೆ ಮಾಡುವ ಕೆಲಸ

ರಾಯರಿಗೆ ಬೇಸರವಾಯಿತು. ಎಂದಿಗೂ ಹೊಸದಾದ, ಹೊಸ ಚೇತನ್ಯನೀಡುವ ಸಾಹಿತ್ಯ ಪ್ರಕಾರಗಳ ಶೋಧನೆ, ಸಾಧನೆಯತ್ತ ಅವರ ಮನಸ್ಸು ತುಡಿಯತೊಡಗಿತು.

## ರಾಜ್ಯ ಪ್ರಶಸ್ತಿಯ ಕೊರಳ ಮಾಲೆ

ಜಾನಪದ ನೃತ್ಯ ಗೀತೆಗಳು, ಭಕ್ತಿಗೀತೆಗಳು, ಭಾವಗೀತೆಗಳು, ದಾಸರ ಪದಗಳು, ಇವುಗಳಲ್ಲಿ ಹೊಸ ಜಾಡನ್ನು ಅರಸಿಕೊಂಡು ಹೊರಟ ರಾಯರು ಅತಿ ಶೀಘ್ರದಲ್ಲೇ ಅದರಲ್ಲಿ ಉನ್ನತ ಶ್ರೇಣಿಯ ಜನಪ್ರಿಯತೆಯನ್ನೂ, ಯಶಸ್ಸನ್ನೂ ಗಳಿಸಿದರು. ಜಾನಪದ ಸಾಹಿತ್ಯದ ಆಳ ಅಗಲಗಳನ್ನು ಓದಲು ಹೊರಟಾಗ ಆ ಗೀತೆಗಳ ಸರಳ ಸುಭಗತೆ, ಹಗುರ ನಡೆಗಳು ಅವರ ಮನಸ್ಸನ್ನು ಅಲ್ಲಾಡಿಸಿಬಿಟ್ಟವು. ಉತ್ತರಾದಿ ದಕ್ಷಿಣಾದಿ, ಪಾಶ್ಚಾತ್ಯ, ಹೀಗೆ ರಾಯರು ಕಲಿತ ಸಂಗೀತ ಪದ್ಧತಿಗಳೆಲ್ಲಾ ಸುಂದರವಾದ ವಸ್ತ್ರಗಳಾಗಿ ಸತ್ವಯುತವಾದ, ಚಿಂತನಶೀಲವಾದ ಕಾವ್ಯ ಕನ್ಯೆಯರ ಒಡಲನ್ನು ಅಲಂಕರಿಸಲು ಹಾತೊರೆದವು. ಭಿನ್ನ ಶೈಲಿಯ ಸಂಗೀತವು ಹೊರನೋಟಕ್ಕೆ ಭಿನ್ನವಾಗಿ ಕಂಡರೂ ರಚನೆ, ನಡೆ, ಲಯ-ಲಾಸ್ಯಗಳಲ್ಲಿ ಮೂಲಭೂತವಾಗಿ ಒಂದೇ ಎಂಬುದು ಅವರಿಗೆ ವೇದ್ಯವಾಯಿತು. ಎಲ್ಲ ದೇಶಗಳ, ಎಲ್ಲಾ ಕಾಲಗಳ, ಶಾಸ್ತ್ರೀಯ ಸಂಗೀತಕ್ಕೆ ಜಾನಪದ ಸಂಗೀತವೇ ತಾಯಿಬೇರು, ಆಧಾರವಾದದ್ದು, ಸ್ಫೂರ್ತಿಯಾದದ್ದು ಎಂಬುದು ಕಾಳಿಂಗರಾಯರಿಗೆ ನಿರಂತರ ಅನ್ವೇಷಣೆಯ ಅನಂತರ ವೇದ್ಯವಾಯಿತು. 1956ರಲ್ಲಿ ವಿವಿಧ ರಾಜ್ಯದಲ್ಲಿ ಹಂಚಿಹೋಗಿದ್ದ ಕನ್ನಡದ ಪ್ರದೇಶಗಳನ್ನು ಒಂದುಗೂಡಿಸಬೇಕೆಂದು ನಡೆಸಿದ ಕನ್ನಡ ಏಕೀಕರಣ ಚಳುವಳಿಯಲ್ಲಿ ಪಾಲ್ಗೊಂಡ ರಾಯರು ಘೋಷಣೆ ಕೂಗದೆ, ಭಾಷಣ ಮಾಡದೆ, ಕೇವಲ ತಮ್ಮ ಮೋಹಕ ಗಾಯನದಿಂದ ಚಳುವಳಿಗಾರರಿಗೆ ಸ್ಫೂರ್ತಿ ನೀಡಿದ್ದರು. ಹುಯಿಲಗೊಳ ನಾರಾಯಣರಾಯರು ಬರೆದ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಹಾಡು ಕನ್ನಡನಾಡಿನ ಮೂಲೆ ಮೂಲೆಗಳಲ್ಲಿ ಪ್ರತಿಧ್ವನಿತವಾಗಿತ್ತು. ರಾಯರು ಮೈಸೂರು ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ ಸಮ್ಮುಖದಲ್ಲಿ ಕರ್ನಾಟಕ ಏಕೀಕರಣ ಸಮಾರಂಭದಲ್ಲಿ ಈ ಹಾಡನ್ನು

ಹಾಡಿದ್ದರು. ಆಗ ರಾಷ್ಟ್ರಾಧ್ಯಕ್ಷರಾಗಿದ್ದ ಶ್ರೀ ರಾಜೇಂದ್ರಪ್ರಸಾದ್ ಅತಿಥಿಗಳಾಗಿ ಬಂದಿದ್ದರು. ಕಾಳಿಂಗರಾಯರ ಗಾಯನಕ್ಕೆ ಮೆಚ್ಚಿ ಅವರು ಬಹುಮಾನವಾಗಿ ಸಾವಿರ ರೂಪಾಯಿ ಇಟ್ಟು ಪರ್ಸೊಂದನ್ನು ಕೊಟ್ಟರು. ರಾಜ್ಯಪ್ರಶಸ್ತಿಯ ಗೌರವವೂ ಅವರಿಗೆ ಸಂದಿತು. ರಾಯರಿಗೆ ಇದರಿಂದ ಉತ್ಸಾಹ ಅಧಿಕವಾಗಿ ಸೃಜನಾತ್ಮಕವಾದ ಗೀತೆಗಳ ಸಂಯೋಜನೆಯತ್ತ ದಾಪುಗಾಲಿಟ್ಟು ನಡೆದರು. ಹೊಸ ಹೊಸ ವಾದ್ಯಗಳನ್ನು ಹಾಡಿನ ಭಾವಕ್ಕೆ ಅನುಗುಣವಾಗಿ ಬಳಸಿದರು. ಹೀಗೆ ಪಾಶ್ಚಾತ್ಯ ವಾದ್ಯಗಳನ್ನು ಬಳಸಿದ ಹಿರಿಮೆ ಕಾಳಿಂಗರಿಗೆ ಸಂದಿತು.

ಕ್ಲಾರಿಯೋನೆಟ್, ಮ್ಯಾಂಡೋಲಿನ್, ಹವಾಯಿ ಗಿಟಾರ್, ಗಿಟಾರ್ ಮುಂತಾದ ವಾದ್ಯಗಳ ಒಳ ಮಿಡಿತಗಳನ್ನು ಅಧ್ಯಯನಿಸಿ ಅವುಗಳನ್ನು ಖಚಿತವಾಗಿ ಉಪಯೋಗಿಸಿಕೊಂಡರು.

ಕಾಳಿಂಗರಾಯರ ಹಾಡುಗಳಿಗೆ ಶ್ರೋತೃಗಳು ತೋರಿಸಿದ ಉತ್ತಮ ಪ್ರತಿಕ್ರಿಯೆಯಿಂದ ಪುನಃ ಪುನಃ ಚೈತನ್ಯ ಸೃಷ್ಟಿ ಮಾಡಲು ಪ್ರೇರಕವಾಗಿತ್ತು. ಆಗಿನ ದಿನಗಳಲ್ಲಿ ಆಕಾಶವಾಣಿಯಾಗಲಿ, ಯಾವುದೇ ಸಮಾರಂಭದಲ್ಲಾಗಲಿ 'ಉದಯವಾಗಲಿ ಚೆಲುವ ಕನ್ನಡನಾಡಿನ' ಧ್ವನಿಮುದ್ರಿಕೆಯನ್ನು ಪ್ರಪ್ರಥಮವಾಗಿ ಹಾಡುತ್ತಿದ್ದವು. ನಾಡಪ್ರೇಮವನ್ನು ವ್ಯಕ್ತಪಡಿಸುವ ಅಪ್ರತಿಮವಾದ ಸಾಹಿತ್ಯದೊಂದಿಗೆ, ರಾಯರ ಸ್ವರ ಸಂಯೋಜನೆ, ಮತ್ತು ಮಧುರಗಾಯನ, ಮೂರೂ ಮೇಳೈಸಿ ಒಂದು ವಿಶಿಷ್ಟವಾದ ಪಾಕವಾಗಿತ್ತು. ಯಾವುದೇ ಬೆಳಗಿನ ಕಾರ್ಯಕ್ರಮಗಳು ಪ್ರಾರಂಭವಾಗುತ್ತಿದ್ದುದು ಕಾಳಿಂಗರಾಯರ ಸಿರಿಕಂಠದ 'ಉದಯವಾಗಲಿ' ಹಾಡಿನಿಂದಲೇ. ಶ್ರುತಿ ಲಯ ಶುದ್ಧತೆಯಿಂದ ಕೂಡಿದ್ದ ಅವರ ಗಾಯನಕ್ಕೆ ಸತ್ವಯುತವಾದ ಸಾಹಿತ್ಯವೂ ಕೂಡಿ ಜನಪ್ರಿಯವಾಗಿತ್ತು.

ಕಾಳಿಂಗರಾಯರು ಪ್ರಯೋಗಶೀಲರಾಗಿ, ನೂರಾರು ಹಾಡುಗಳಿಗೆ ಜೀವಕೊಟ್ಟರು. 'ಬಾರಯ್ಯ ಬೆಳದಿಂಗಳೇ', 'ಸುವ್ವೀ ಸುವ್ವಮ್ಮ ಲಾಲಿ', 'ತೂಗಿರೋ ಚಿನ್ನವ', 'ಮೂಡಲ್ ಕುಣಿಗಲ್ ಕೆರೆ', 'ದಂಡೆ ತಾರೋ ದಂಡೆ ಸ್ವಾಮಿ', 'ಘಲ್ಲು ಘಲ್ಲೆನುತಾ', 'ಬೆಟ್ಟ ಬಿಟ್ ಇಳಿಯುತ್ತಾ ಬಂದಾಳೆ ಚಾಮುಂಡಿ' 'ಅತ್ತಿಯ ಮರವ ಕಿತ್ತು ನೆಡುವ

ರುಂಟೆ' 'ಅಮ್ಮ ಕ್‌ರ್ಘುಮ್ಮಕ್ಕದಿಂದ ಬಂದಳೆ ರತುನ' (ಇವೆಲ್ಲ ಹೆಚ್.ಎಂ.ವಿ. ಧ್ವನಿಮುದ್ರಣ ಸಂಸ್ಥೆಯಿಂದ ಮುದ್ರಿತವಾಗಿವೆ), 'ಅದು ಬೆಟ್ಟ ಇದು ಬೆಟ್ಟವೋ ನಂಜುಂಡ', 'ಯಾಕಳುವೆ ಎಲೆ ರಂಗ', ದ. ರಾ. ಬೇಂದ್ರೆಯವರ 'ಇಳಿದು ಬಾ ತಾಯಿ', 'ಮೂಡಲ ಮನೆಯ' ಜಿ.ಪಿ. ರಾಜರತ್ನಂ ಅವರ 'ಬ್ರಹ್ಮ ನಿಂಗೆ ಜೋಡಿಸ್ತೀನಿ', 'ನೀನಲ್ಲಿ ಬೆಳಕಂಗಿದ್ದೆ', 'ಎಂಡ ಎಂಡ್ತಿ ಕನ್ನಡ ಪದಗೋಳ್', 'ಏಳ್‌ಕೊಳ್ಳೋಕ್ ಒಂದೂರು', ಬಿ.ಎಂ.ಶ್ರೀ ಅವರ 'ಏರಿಸಿ ಹಾರಿಸಿ ಕನ್ನಡದ ಬಾವುಟ', ಕುವೆಂಪು ಅವರ 'ಎಲ್ಲಾದರು ಇರು', 'ಕನ್ನಡಕೆ ಹೋರಾಡು ಕನ್ನಡ ಕಂದ', 'ಕೋಗಿಲೆಯ ಕಂಠಕ್ಕೆ ಸ್ವರ್ಣ ಪದಕವ ತೊಡಿಸಿ', 'ನಡೆ ಮುಂದೆ', ಡಿ.ವಿ.ಜಿಯವರ, 'ಉಮರನ ಒಸಗೆ', 'ಮಂಕುತಿಮ್ಮನ ಕಗ್ಗ' ಹೀಗೆ ಹೇಳುತ್ತಾ ಹೋದರೆ ನೂರಾರು. ನೂರಾರು ಸೇರಿ ಸೇರಿ ಸಾವಿರ ಸಾವಿರ ಗೀತೆಗಳು ರಾಯರ ಕಂಠಶ್ರೀಯಲ್ಲಿ ಉಲಿದು ಬಂದು ಸಾರ್ಥಕತೆ ಪಡೆದವು. ನಾಡಿನಾದ್ಯಂತ ತನ್ನ ಪ್ರಮುಖ ಶಿಷ್ಯೆಯರಾದ ಸೋಹನ್‌ಕುಮಾರಿ ಮತ್ತು ಮೋಹನ್‌ಕುಮಾರಿಯರೊಡನೆ ಸಂಚಾರಮಾಡಿ ಸುಗಮಸಂಗೀತ ಹಾದಿಯನ್ನು ಸುಗಮವಾಗಿ ಮಾಡಿಕೊಟ್ಟರು. ಕವಿತೆಗಳನ್ನು ಹೇಗೆ ಹಾಡಿದರೆ ಹೃದಯಭಾವ, ಕವನದ ಆಂತರ್ಯ, ರಾಗರಸ ಮಾಧುರ್ಯ ಮೇಳೈಸುತ್ತದೆಯೋ ಅದನ್ನು ಆತ್ಮವಿಮರ್ಶೆ ಮಾಡಿಕೊಂಡು, ಅದರಲ್ಲಿಯೇ ತನ್ನನ್ನು ತೊಡಗಿಸಿಕೊಂಡು ಆ ಕವಿತೆಗೆ ರಾಗದ ಹೊದಿಕೆಯನ್ನು ಹೊದೆಸುತ್ತಿದ್ದರು. ರಾಯರು ರಾಗಸಂಯೋಜನೆ ಮಾಡಿದ್ದ 'ಬಾಗಿಲೊಳು ಕೈಮುಗಿದು', 'ನಗೆಯು ಬರುತಿದೆ', 'ಅಳುವ ಕಡಲೊಳು', 'ಇಂದು ಮನುಜ ಜನ್ಮದಲ್ಲಿ', 'ಓ ನನ್ನ ನೀಲಿ ಸೀರೆಯ ಕನ್ಯೆ', 'ಅನಂತದಿಂ ದಿಗಂತದಿಂ', 'ಅಂದು ನೀ ನುಡಿದ ಪಿಸುಮಾತು', 'ಓಲೇಲಿ ಲೇಸಾ' 'ಘೋರಾಂಧಕಾರ', 'ಮುಕ್ಕಣ್ಣನೆಲ್ಲಾರು ಕೊಂಡಾಡಿರೋ', 'ಎನ್ನರನ್ನೆ ಚೆನ್ನೆ', 'ಹೋಳಿಯ ಹುಣ್ಣಿಮೆ', 'ಬೆಳದಿಂಗಳ ರಾತ್ರೀಲಿ ನೆನ್ಪಾಯ್ತದೆ', 'ಹೋದ ವರ್ಷ ಬಂದ ಹಬ್ಬ', 'ಸಿಂಹನೊಡನಾಡುತ್ತ', 'ಮುಗಿಲ ಮಾರಿಗೆ' ಹೀಗೆ ಹಾಡುಗಳ ಸಾಲುಸಾಲೇ ಕಣ್ಣಮುಂದೆ ನಿಂತು ನಾಟ್ಯವಾಡಿ ಗಂಧರ್ವ ಲೋಕವನ್ನು ತೆರೆದವು.

## ರಾಯರೊಂದಿಗೆ ಮೀನಾಕ್ಷಿಗೂ ಸನ್ಮಾನ

1959ರಲ್ಲಿ ರಾಯರು ನಾಡಿನಾದ್ಯಂತ ನಲವತ್ತು ಕೇಂದ್ರಗಳಲ್ಲಿಸುಗಮ ಸಂಗೀತದ ಕಂಪನ್ನು ಜಿಲ್ಲೆ ಜಿಲ್ಲೆಯಲ್ಲಿ, ಊರು ಊರುಗಳಲ್ಲಿ ಹಂಚಲು ಹೊರಟರು. ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಸ್ಥಳಗಳಲ್ಲಿ ಆಯಾ ಊರಿನ ಪ್ರಮುಖರು ರಾಯರನ್ನು ಕರೆದು ಸನ್ಮಾನಿಸಿದರು. ರಾಯರು ಪತ್ನಿ ಮೀನಾಕ್ಷಿಯೊಂದಿಗೆ ಉತ್ಸವಮೂರ್ತಿಯಾಗಿ ಎಲ್ಲಾ ಊರುಗಳನ್ನು ಸುತ್ತಿ ತಮ್ಮ ಗಾನದಿಂಪನ್ನು ಸಿಂಪಡಿಸಿ, ಸನ್ಮಾನ ಸ್ವೀಕರಿಸಿ ಬಂದರು. ಉಡುಪಿಯ ವಾದಿರಾಜ ಮಂಟಪದಲ್ಲಿ ಕಾಳಿಂಗರಾಯರ ಜೊತೆ ಮೀನಾಕ್ಷಮ್ಮನವರನ್ನು ಸನ್ಮಾನಿಸಿ ಶ್ರೀಕೃಷ್ಣಮಠದ ಸ್ವಾಮಿಗಳು 'ಶ್ರೀಕೃಷ್ಣ ವಿಗ್ರಹ'ವನ್ನು ದಯಪಾಲಿಸಿದರು. ಮೀನಾಕ್ಷಮ್ಮನಿಗೆ ತನ್ನ ಬದುಕು ಅಂದಿಗೆ ಸಾರ್ಥಕವೆನಿಸಿತು.

'ಓ ನನ್ನ ನೀಲಿ ಸೀರೆಯ ಕನ್ಯೆ' ಎಂಬ ಹಾಡು ರಾಯರಿಗೆ ಪ್ರಿಯವಾಗಿತ್ತು. ಹೃದಯದಲ್ಲಿ ಬಚ್ಚಿಟ್ಟುಕೊಂಡ ಭಾವವು ಆಗಾಗಎಚ್ಚರವಾಗುತ್ತಿತ್ತು. ಕಾಳಿಂಗರಾಯರು ಹಲವಾರು ಪ್ರಕಾರಗಳಲ್ಲಿ ಅನುಭವ ಪಡೆದರೂ ಮೆಚ್ಚಿದ್ದು ಭಾವಗೀತೆಗಳ ಗಾಯನವನ್ನು ಮಾತ್ರ. ಯಾರು ಹಾಡಿದರೂ ಕೇಳುಗನಿಗೆ ಅದು ತನ್ನದೇ ಹಾಡು ಎನಿಸುವ ಬಗೆ ಅವರನ್ನು ಗಾಢವಾಗಿ ಸೆಳೆಯಿತು. ತಮ್ಮ ಪತ್ನಿಯನ್ನು ಕಾಣಲು ಊರಿಗೆ ಹೋಗುವಾಗಲೆಲ್ಲಾ ನೀಲಿ ಬಣ್ಣದ ಸೀರೆಯನ್ನೇ ಆರಿಸಿ ಖರೀದಿಸಿ ತೆಗೆದುಕೊಂಡು ಹೋಗುತ್ತಿದ್ದರು. ಮಕ್ಕಳು ವಸಂತ್, ಶರತ್ ಅವರು 'ಏನಪ್ಪಯ್ಯ ಯಾವಾಗಲೂ ಒಂದೇ ಬಣ್ಣದ ಸೀರೆ ತರುವಿರಲ್ಲಾ?' ಎಂದು ಕೇಳಿದಾಗ ನಕ್ಕು ಸುಮ್ಮನಾಗುತ್ತಿದ್ದರು. ರಾಯರಿಗೆ ಪ್ರಿಯವಾದ ಬಣ್ಣ ನೀಲಿ ಬಣ್ಣವಾಗಿತ್ತು.

## ಸುಗಮ ಸಂಗೀತದ ಸುಗ್ಗಿ

ಸುಗಮ ಸಂಗೀತದ ಪಯಣದಲ್ಲಿ ರಾಯರು ಮಹಾರಾಜನಂತೆ ರಾಜ್ಯಭಾರ ಮಾಡಿದರು. ಶಾಸ್ತ್ರೀಯ ಸಂಗೀತ ಪ್ರಬಲವಾಗಿದ್ದ

ದಿನಗಳಲ್ಲಿ ಕಾಳಿಂಗರಾಯರು ಸುಗಮ ಸಂಗೀತದ ಕಹಳೆಯನ್ನೂದಿ ಒಂದು ಪ್ರಚಂಡ ಕ್ರಾಂತಿಯನ್ನೇ ಎಬ್ಬಿಸಿದರು. ಕಿಕ್ಕಿರಿದು ಸೇರುತ್ತಿದ್ದ ಜನಸಾಗರಕ್ಕೆ ಕಾಳಿಂಗ ರಾಯರ ಸುಗಮ ಸಂಗೀತ ಕಾರ್ಯಕ್ರಮವನ್ನು ಕೇಳುವುದೇ ಒಂದು ಹಬ್ಬವಾಗಿತ್ತು. ಕಾಲೇಜಿನ ವಿದ್ಯಾರ್ಥಿಗಳಿಗೆ ರಾಯರ ಸಂಗೀತವೆಂದರೆ ಸುಗ್ಗಿ ಬಂದಂತೆ, ರಾಯರ ದನಿ ಕಿವಿಗೆ ಇಂಪಾದಂತೆ, ಅವರು ಹಾಡುತ್ತಾ, ವೇದಿಕೆಯಲ್ಲಿ ಹರಿದಾಡುವಾಗ ಕಣ್ಣಿಗೂ ಹಬ್ಬ. ವಾದ್ಯಗಳನ್ನು ವಿನೂತನವಾಗಿ, ವಿಶಿಷ್ಟವಾಗಿ ಬಳಸುವಲ್ಲಿ ಅವರು ತೋರಿಸುತ್ತಿದ್ದ ಕಲಾಭಿಜ್ಞತೆ ಅವಿಸ್ಮರಣೀಯವಾಗಿತ್ತು. ಇಂಪಾದ ಶಾರೀರ, ಸ್ಫುಟವಾದ ಸಾಹಿತ್ಯೋಚ್ಚಾರ, ಭಾವಾರ್ಥಗಳಿಗೆ ತಕ್ಕಂತೆ ಸಾಹಿತ್ಯ, ಸಂಗೀತ ಸಂಯೋಜನೆ, ಪದಗಳನ್ನು ಉಚ್ಚರಿಸುವಲ್ಲಿ ಲಾಲಿತ್ಯ ಇವು ಕೇಳುಗರ ಹೃದಯದಲ್ಲಿ ರಾಯರನ್ನು ಅಮರವಾಗಿಸಿದವು. ಟಾಕುಟೀಕಾಗಿ ಕೋಟು ಸೂಟು, ಟೈ ಕಟ್ಟಿ ರಾಯರು ಒಂದು ಕೈಲಿ ಮೈಕ್ ಹಿಡಿದು, ಮತ್ತೊಂದು ಕೈಯನ್ನು ಮೇಲೆತ್ತಿ ತೋರಿಸಿ ಹಾಡುತ್ತಿದ್ದರೆ, ಮಾಂತ್ರಿಕ ರಾಯರ ಸ್ಪರ್ಶದಿಂದ ಗೀತೆಗಳು ಜೀವ ತುಂಬಿ ಅಭಿನಯಿಸುತ್ತಿದ್ದವು.

'ನನ್ನ ಸಂಗೀತ ಗಗನ ಕುಸುಮವಾದರೆ ಏನು ಪ್ರಯೋಜನ? ನೆಲದ ಮಟ್ಟಾ ಮುಟ್ಟಿ ಮಣ್ಣಿನ ಮಗ ಕುಣಿವಂತಾಗಬೇಕು' ಎನ್ನುತ್ತಿದ್ದ ರಾಯರು ಸಂಗೀತ ಶಿಖರದ ತುತ್ತ ತುದಿಯಲ್ಲಿ ಕುಳಿತು, ಹಸಿರು ನೆಲದ ಬಗೆಗೆ ಪ್ರೀತಿಯಿಂದ ನೋಡಿದ್ದರು. ರಾಯರ ಪ್ರತಿಭೆಯ ವ್ಯಾಪ್ತಿ, ಎತ್ತರ, ಬಿತ್ತರಗಳು ವಿಶಾಲವಾದವು. ಧ್ವನಿಮುದ್ರಿಕೆಗಳು; ಕರ್ನಾಟಕದ ಬಾನುಲಿ ಕೇಂದ್ರಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಹೀಗೆ ಹತ್ತಾರು, ನೂರಾರು, ಸಾವಿರಾರು ಮುಖಗಳಲ್ಲಿ ಕಾಳಿಂಗರಾಯರು ತಮ್ಮ ಗಾನಗಂಗೆಯನ್ನು ದುಮ್ಮಿಕ್ಕಿ ಹರಿಸಿದರು. ಹರಿಸಿ ಉಕ್ಕಿಸಿದರು. ಉಕ್ಕಿಸಿ ಕೇಳುಗರಲ್ಲಿ ಸುಗಮ ಸಂಗೀತದ ಹುಚ್ಚು ಹಿಡಿಸಿದರು.

1959ರಿಂದ 1972ರವರೆವಿಗೆ ಸುಗಮ ಸಂಗೀತದ ಉತ್ಸವ ಮೂರ್ತಿಯಾಗಿ, ಯುವರಾಜರಾಗಿ ಕಾಳಿಂಗರಾಯರು ಮೆರೆದರು.

## ಅಭಿಮಾನಿಗಳು ಕೋಟು ಮಫ್ಲರ್ ಕೊಟ್ಟಾಗ

1973 ಅಕ್ಟೋಬರ್ 31ರಂದು ಸಂಜೆ ಬೆಂಗಳೂರಿನ

ಬಸವನಗುಡಿಯಲ್ಲಿ ರಾಯರ ವೈಯುಕ್ತಿಕ ಕಾರ್ಯಕ್ರಮವಿತ್ತು. ಮಾರನೇ ದಿನ ನವೆಂಬರ್ 1ರಂದು ಕಂಠೀರವ ಸ್ಟುಡಿಯೋನಲ್ಲಿ ರಾಯರು ವೃಂದದವರೊಂದಿಗೆ ಹಾಡುವ ಕಾರ್ಯಕ್ರಮವಿತ್ತು. ಕಾರ್ಯಕ್ರಮ ಮುಗಿಸಿ ರಾಯರು ತಾವು ಇಳಿದುಕೊಂಡಿದ್ದ ಮಧುನಿವಾಸ್ ಹೋಟೆಲಿನಲ್ಲಿ ಮೆಟ್ಟಿಲು ಹತ್ತುತ್ತಿದ್ದಾಗ ಬಾಳೆಹಣ್ಣಿ ಸಿಪ್ಪೆಯ ಮೇಲೆ ಕಾಣದೆ ಕಾಲಿಟ್ಟು ಜಾರಿ ಮೇಲಿನಿಂದ ಕೆಳಗಿನ ತನಕ ಉರುಳಿ ಬಿದ್ದರು. ಕಾಲು ಮುಖ ಎಲ್ಲಾ ಬಾತುಕೊಂಡು ಮೈ ಹಣ್ಣಾಗಿದ್ದರೂ, ಮರುದಿನದ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾದರು. ತೆರೆದ ಬಯಲಿನಲ್ಲಿ ಹಾಡಲು ಪ್ರಾರಂಭಿಸುವಷ್ಟರಲ್ಲಿ ನವೆಂಬರ್ ತಿಂಗಳ ಚಳಿ ಆವರಿಸಿ ಗಡಗಡ ನಡುಗಲು ಪ್ರಾರಂಭವಾಯಿತು. ಕೂಡಲೆ ಇವರ ಅಭಿಮಾನಿಗಳೊಬ್ಬರು ತಮ್ಮ ಕೋಟನ್ನು ಇವರಿಗೆ ತೊಡಿಸಿದರು. ಮತ್ತೊಬ್ಬರು ತಮ್ಮ ಮಫ್ಲರ್ ತಂದು ಇವರ ಕೊರಳಿಗೆ ಸುತ್ತಿದರು. ರಾಯರು ನಿರಾತಂಕವಾಗಿ ಮೂರು ಗಂಟೆಗಳ ಕಾಲ ತಮ್ಮ ಗಾನ ಗಂಗೆಯಲ್ಲಿ ಅಭಿಮಾನಿಗಳನ್ನು ತೋಯಿಸಿದರು.

## ನೋವಿನ ಸಾಲು ತೆರೆದಾಗ

ರಾಯರ ದೊಡ್ಡಮಗ ವಸಂತ ಗ್ರಾಮೀಣ ಬ್ಯಾಂಕ್‌ನಲ್ಲಿ ಉದ್ಯೋಗಕ್ಕೆ ಸೇರಿದ. ಮತ್ತೊಬ್ಬ ಶರತ್ ಎನ್.ಜಿ.ಎಫ್‌ನಲ್ಲಿ ಉದ್ಯೋಗ ಹಿಡಿದ. ಚಿಕ್ಕವನಾದ ಸಂತೋಷ್ ಬಾರಕೂರಿನಲ್ಲೇ ಅಮ್ಮನೊಂದಿಗೆ ಉಳಿದ. ಎಲ್ಲವೂ ಸರಿಯಾಯ್ತಪ್ಪ ಎನ್ನುವಷ್ಟರಲ್ಲಿ ರಾಯರ ಮುದ್ದಿನ ಮಗಳು ಪ್ರೇಮಾಳ ಗಂಡ ಯಾವುದೋ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡ. ಮಗಳು ವಿಧವೆಯಾದಳು. ರಾಯರು ತಮ್ಮ ಮಗಳ ಬಾಳನ್ನು ನೋಡಿ ದಿಕ್ಕೆಟ್ಟರು. ಆಗೊಮ್ಮೆ ಈಗೊಮ್ಮೆ ಮಧುಪಾನಮಾಡಿ ಸುಖಿಸುತ್ತಿದ್ದವರು ಮಧುಪಾನ ವ್ಯಸನಿಯಾದರು. ಅಳಿಯನ ಸಾವು ಆಘಾತವನ್ನೇ ತಂದಿತು. ಸಾಲದ್ದಕ್ಕೆ ಸ್ವರ್ಣಮ್ಮನೊಡನೆ ಸಣ್ಣ ವಿಚಾರಕ್ಕಾಗಿ ಮನಸ್ತಾಪ ಮಾಡಿಕೊಂಡು ಆಕೆಯನ್ನು ಅಗಲಿ ತಮ್ಮ ಶಿಷ್ಯೆಯರಾದ ಮೋಹನ್‌ಕುಮಾರಿ ಮತ್ತು ಸೋಹನ್‌ಕುಮಾರಿಯವರಿದ್ದ ಸಂಪಂಗಿರಾಮ ನಗರದ ಮನೆಗೆ ಬಂದು ಸೇರಿಕೊಂಡರು. ಅಲ್ಲಿ

ಇಕ್ಕಟ್ಟಾದ ಮೆಟ್ಟಿಲನ್ನೇರುವಾಗ ಮತ್ತೊಮ್ಮೆ ಜಾರಿ ಬಿದ್ದರು. ಬಿದ್ದ ರಭಸಕ್ಕೆ ಕೈ ಮೂಳೆ ಮುರಿದಿತ್ತು. ಕೈಗೆ ಪ್ಲಾಸ್ಟರ್ ಹಾಕಿಸಿಕೊಂಡು ಮನೆಗೆ ಬಂದು ಕುಳಿತರು. ನೋವನ್ನು ಮರೆಯಲು ಮೂರು ತಿಂಗಳೇ ಅವರಿಗೆ ಬೇಕಾದವು. ಮತ್ತೆ ಎಂದಿನಂತೆ ಹಾಡಲು ಪ್ರಾರಂಭಿಸಿದರು. ಆದರೆ ವಿಧಿ ರಾಯರ ಬೆನ್ನು ಬಿಡದೆ ಹಿಂಬಾಲಿಸಲು ಪ್ರಾರಂಭಿಸಿತ್ತು. 1978ರ ಫೆಬ್ರುವರಿ ತಿಂಗಳ ಮೊದಲಿನ ವಾರದಲ್ಲಿ ರಾಯರು ನೃಪತುಂಗ ರಸ್ತೆಯಲ್ಲಿ ರಿಕ್ಷಾವನ್ನೇರಿ ಮನೆಯ ಕಡೆ ಹೊರಟಿರುವಾಗ, ಇನ್ನೊಂದು ರಿಕ್ಷಾ ಬಡಿದು ಕೆಳಗುರುಳಿಸಿ ಹೋಯಿತು. ರಾಯರ ಗುದ ಭಾಗದ ಮೂಳೆ ಜಜ್ಜಿಹೋಗಿತ್ತು. ಬೌರಿಂಗ್ ಆಸ್ಪತ್ರೆಯಲ್ಲಿ ಎಂಟು ತಿಂಗಳ ಕಾಲ ಮಲಗಿದ್ದಲ್ಲಿಯೇ ಶುಶ್ರೂಷೆ ಮಾಡಿಸಿಕೊಳ್ಳಬೇಕಾಯಿತು. ಸೋಹನ್ ಮತ್ತು ಮೋಹನ್‌ಕುಮಾರಿಯರು ತಮ್ಮ ಶಕ್ತಿ ಮೀರಿ ಸೇವೆ ಮಾಡಿ ಗುರುವಿನ ಋಣವನ್ನು ತೀರಿಸಿದರು. 1978 ಸೆಪ್ಟೆಂಬರ್ ತಿಂಗಳ ಕೊನೆಯ ಹೊತ್ತಿಗೆ ರಾಯರು ಕೋಲೂರಿ ನಡೆಯುವಂತಾದರು. ಕಾರ್ಯಕ್ರಮವಿಲ್ಲದೆ ವರಮಾನ ನಿಂತೇ ಹೋಗಿ ಅವರ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು. ಕೈಯಲ್ಲಿ ಇದ್ದಾಗ ಎಲ್ಲವನ್ನೂ, ವಾಚು, ಉಂಗುರ, ಕಡೆಗೆ ಮೈಮೇಲೆ ತೊಟ್ಟಿದ್ದ ಷರಟನ್ನು ದಾನಮಾಡಿ ಕೈ ಬರಿದು ಮಾಡಿಕೊಂಡು ಕುಳಿತಿದ್ದ ರಾಯರಿಗೆ ಕಷ್ಟದ ದಿನಗಳು ಎದುರಾದುವು. ದಿಕ್ಕು ತಪ್ಪಿದ ಅವರ ವೈವಾಹಿಕ ಬದುಕನ್ನು ದಾರಿಗೆ ತಂದ ಹೃದಯವಂತೆ ಸ್ವರ್ಣಮ್ಮ 1979ನೇ ಇಸವಿ ಡಿಸೆಂಬರ್ 24ರಂದು ಇಹಲೋಕವನ್ನು ಬಿಟ್ಟು ಪರಲೋಕಕ್ಕೆ ನಡೆದರು. ಅವರ ಸಾಕುಮಗ ಶರತ್ ದೊಡ್ಡಮ್ಮನನ್ನು ಕಳೆದುಕೊಂಡು ದುಃಖಿತನಾದ. ಮೀನಾಕ್ಷಮ್ಮನ ಬೆನ್ನಿಗೆ ಆಧಾರವಾಗಿ ನಿಂತಿದ್ದ ಸ್ವರ್ಣಮ್ಮ ಆಕೆಯನ್ನು ಏಕಾಂಗಿಯನ್ನಾಗಿ ಮಾಡಿಹೋದಳು.

1981ರ ಮೇ ತಿಂಗಳವರೆವಿಗೆ ರಾಯರು ಮತ್ತೆ ಹಾಡುತ್ತಾ ಹಾಡುತ್ತಾ ಕಾಲ ಕಳೆದರು. ಎರಡು ತಿಂಗಳ ನಂತರದಲ್ಲಿ ಪುನಃ ನಿಶ್ಯಕ್ತರಾದರು. ಆತ್ಮೀಯ ಸ್ನೇಹಿತರಾಗಿದ್ದ, ಬಿ.ಎಸ್. ವಿಶ್ವನಾಥ್, ವಾಟಾಳ್ ನಾಗರಾಜ್ ಮತ್ತು ಬೀಚಿ, ಇವರು ಬಲವಂತದಿಂದ ರಾಯರನ್ನು ಕಾಳಪ್ಪ ನರ್ಸಿಂಗ್ ಹೋಂಗೆ ಸೇರಿಸಿ ಚಿಕಿತ್ಸೆ

ಕೊಡಿಸಿದರು. ರಾಯರು ಒಂದು ತಿಂಗಳು ಅಲ್ಲಿಯೇ ಇದ್ದು ಚೇತರಿಸಿಕೊಂಡರು. ಮೀನಾಕ್ಷಮ್ಮ ಆ ಒಂದು ತಿಂಗಳು ರಾಯರ ಜೊತೆಯಲ್ಲಿಯೇ ಆಸ್ಪತ್ರೆಯಲ್ಲಿಯೇ ಉಳಿದು ಗಂಡನನ್ನು ಪ್ರೀತಿಯಿಂದ ನೋಡಿಕೊಂಡರು. ಪತ್ನಿಯು ಮಾಡಿದ ನಿಸ್ವಾರ್ಥ ಸೇವೆಗೆ ರಾಯರ ಕಣ್ಣು ಸಂಪೂರ್ಣವಾಗಿ ತೆರೆಯಿತು. ರಾಯರು, ''ಮೀನಾಕ್ಷಿ ನಾನು ನಿನ್ನನ್ನು ಇದುವರೆವಿಗೆ ಚೆನ್ನಾಗಿ ನೋಡಿಕೊಳ್ಳಲಿಲ್ಲ. ವಿಷವರ್ತುಲದಲ್ಲಿ ಸಿಲುಕಿ ನಿನ್ನನ್ನು ಮರೆತು ತಪ್ಪು ಮಾಡಿದೆ'' ಎಂದು ಹೇಳಿ ದುಃಖಿಸಿದರು. ಹೆಂಡತಿಯ ಶ್ರೀಮಂತ ಹೃದಯದ ಪರಿಚಯ ಕಟ್ಟಕಡೆಯ ವೇಳೆಗೆ ಅವರಿಗೆ ಆಗಿತ್ತು.

## ತರಂಗಕ್ಕೆ ಕೊಟ್ಟ ಸಂಗೀತ ನಿರ್ದೇಶನ

20-8-81ರಂದು ರಾಯರು 'ತರಂಗ' ಚಿತ್ರದ ಸಂಗೀತ ನಿರ್ದೇಶನಕ್ಕಾಗಿ ಮದ್ರಾಸಿಗೆ ತೆರಳಿದರು. 'ಅಜಂತಾ' ಹೋಟೆಲಿನ ಮೂರನೇ ಅಂತಸ್ತಿನಲ್ಲಿ ಅವರಿಗೆ ರೂಮನ್ನು ಗೊತ್ತು ಮಾಡಲಾಗಿತ್ತು. ಆದರೆ ಕೋಲೂರಿಕೊಂಡು ಹೊರಟಿದ್ದ ರಾಯರ ಉತ್ಸಾಹ ಕೊಂಚವೂ ತಗ್ಗಿರಲಿಲ್ಲ. ಜಿ.ಕೆ. ವೆಂಕಟೇಶ್ ಅವರ ಸಹಕಾರದೊಂದಿಗೆ 5 ಹಾಡುಗಳನ್ನು ಧ್ವನಿಮುದ್ರಣ ಮಾಡಿ ಬೆಂಗಳೂರಿಗೆ ವಾಪಸ್ಸು ಬಂದರು. 'ತರಂಗ' ಚಿತ್ರ ಕಾರಣಾಂತರಗಳಿಂದ ಬಿಡುಗಡೆಯಾಗಲಿಲ್ಲ. ಆದರೆ 21-9-81ರ ಬೆಳಿಗ್ಗೆ ತಮ್ಮ ಪ್ರಾತಃವಿಧಿಗಳನ್ನು ಮುಗಿಸಿ ಹರ್ಷಚಿತ್ತರಾಗಿ ದೇವಿಸ್ತುತಿ ಮಾಡಿದ ರಾಯರು ಬೆಳಿಗ್ಗೆ 10-10 ನಿಮಿಷಕ್ಕೆ ತಾಯಿ ಚಾಮುಂಡಿಯ ಪಾದ ಸೇರಿದರು. ಕೂಡಲೆ ಆಕಾಶವಾಣಿಯಲ್ಲಿ ಅವರ ನಿಧನದ ವಾರ್ತೆಯನ್ನು ಮೂರು ಬಾರಿ ಬಿತ್ತರಿಸಲಾಯ್ತು. ಸಾವಿರ ಸಾವಿರ ಸಂಖ್ಯೆಯಲ್ಲಿ ನೆರೆದ ಜನಸ್ತೋಮ ಕಾಳಿಂಗರಾಯರ ಕಡೆಯ ದರ್ಶನ ಮಾಡಿತು. 21ರಂದು ನಿಧನರಾದ ರಾಯರ ದೇಹ ಒಮ್ಮೆ ಸ್ಮಶಾನವನ್ನು ಪ್ರವೇಶಮಾಡಿ ಪುನಃ ಅವರು ನೂರಾರು ಕಾರ್ಯಕ್ರಮ ನೀಡಿದ್ದ ಸಂಪಂಗಿರಾಮನಗರದ ಸಾಂಸ್ಕೃತಿಕ ವೇದಿಕೆಯ ಮೇಲೆ ಮರಳಿ ಬಂದು ಮಲಗಿತು. ಅಭಿಮಾನಿಗಳ ಅಶ್ರುಧಾರೆಗಳಿಂದ ಬೀಳ್ಕೊಟ್ಟ ರಾಯರ ದೇಹ 22-9-1981 ರವರೆವಿಗೆ ಸರ್ಕಾರದ ಸಕಲ ಮರ್ಯಾದೆಗಾಗಿ ಕಾಯ್ದು, ನಂತರ ಕಡೆಯ ಯಾತ್ರೆಗೆ

ಹೊರಟಿತು. ಬಾರಕೂರಿನಲ್ಲಿದ್ದ ಮೀನಾಕ್ಷಮ್ಮನವರಿಗೆ ಪೋಸ್ಟ್ ಆಫೀಸ್‌ನಲ್ಲಿ ವಿಷಯ ತಿಳಿಸಲಾಯಿತು. ಆಕೆಯ ಬರುವಿಗಾಗಿ ಒಂದು ದಿವಸ ರಾಯರ ಕಡೆಯ ಯಾತ್ರೆ ಮುಂದುವರಿಯಿತು. ಬೆಂಗಳೂರಿಗೆ ಬರಲು ಬೆಂಡೋಲೆಯನ್ನು ಅಡವಿಟ್ಟು ಬಂದ ಮೀನಾಕ್ಷಮ್ಮ ಕಡೆಯ ಬಾರಿಗೆ ಪತಿಗೆ ವಿದಾಯ ಹೇಳಿದರು. ಧರ್ಮಸ್ಥಳದ ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆಯವರು ಬಂದು ಹೂಗುಚ್ಛವನ್ನು ಅರ್ಪಿಸಿದ ನಂತರ ರಾಯರ ಶರೀರ ಚಿತಾಗಾರದಲ್ಲಿ ಬೆಂದು ಬೂದಿಯಾಯಿತು. ಯಾವ ಸಿರಿಕಂಠ ಆರು ದಶಕಗಳ ಕಾಲ ತನ್ನ ಮೋಡಿಯನ್ನು ಬೀರಿತ್ತೋ, ಯಾವ ಮೃದು ಹೃದಯ ದೀನ ದಲಿತರಿಗಾಗಿ, ಅಸಹಾಯಕರಿಗಾಗಿ, ಗೆಳೆಯರಿಗಾಗಿ ಪರಿತಪಿಸಿ, ಸರ್ವಸ್ವವನ್ನೂ ತ್ಯಾಗಮಾಡಿತ್ತೋ, ಆ ಹೃದಯ ತನ್ನ ಇಹಲೋಕದ ಯಾತ್ರೆಯನ್ನು ಮುಗಿಸಿತು.

# ರಾಯರಿಗೆ ಸಂದ ಬಿರುದು ಬಾವಲಿಗಳ ಮಾಲೆ

1. 'ಜಾನಪದ ಸಂಗೀತರತ್ನ 20-11-1980 ನಾಟಕ ಅಕಾಡೆಮಿಯ ರಿಜಿಸ್ಟ್ರಾರ್ ಆದ L.S. ಸುಧೀಂದ್ರ ಅಧ್ಯಕ್ಷತೆಯಲ್ಲಿ ಅಲಸೂರು ದಂಡು ಪ್ರದೇಶ ಕನ್ನಡ ಚಿತ್ರ ಅಭಿಮಾನಿಗಳ ಸಂಘ (ರಿ).
2. ಬರೋಡಾ ಮಹಾರಾಜರಿಂದ ''ಬಾಲ ಗಂಧರ್ವ''
3. ಕರ್ನಾಟಕ ಕಲಾಸಂಘ (ರಿ) ವಿಮಾನ ಇಂಜೀನ್ ಕಾರ್ಖಾನೆ. ಬೆಂ-12, 1977 ರಲ್ಲಿ ಸನ್ಮಾನ ಪತ್ರ
4. ರಾಜ್ಯ ಸರ್ಕಾರಿ ನೌಕರ ಸಂಘ, ಕೊಳ್ಳೆಗಾಲ ತಾಲ್ಲೂಕು, 1973 'ಜಾನಪದಕಲಾಚಕ್ರವರ್ತಿ'.
5. ಅಜ್ಜಂಪುರ ಕರ್ಣಾಟಕ ಸಂಘ, ಬ್ರಹ್ಮಾವರ-17-11-1969
6. ಕನ್ನಡ ಕಲಾ ಸಂಘ-ದೂರವಾಣಿ ಕೇಂದ್ರ-ಮಲ್ಲೇಶ್ವರ -7-6-1980, ಬಾಲಗಂಧರ್ವ-ಗಾಯನ ಚಕ್ರವರ್ತಿ, ಗಾಯನ ಕಂಠೀರವ
7. ಕರ್ನಾಟಕ ರಾಜ್ಯೋತ್ಸವ ಸಮಿತಿ, ಕನ್ನಡ ಸಂಘ ಸಂಸ್ಥೆಗಳ ಒಕ್ಕೂಟ, ಮೈಸೂರು. 27-6-1969, ಗಾನಸಾರ್ವಭೌಮ, ಡಾ|| ಸಿಂಧುವಳ್ಳಿ ನೇತೃತ್ವದಲ್ಲಿ.
8. ಸಂಪಂಗಿರಾಮನಗರ ಪ್ರಜಾ ಸಮಿತಿ, 2-11-1980
   ಕರ್ನಾಟಕ ರಾಜ್ಯ ರಜತೋತ್ಸವ ಸಂವತ್ಸರ-
   (ಇಬ್ರಾಹಿಂ, ಕೈಗಾರಿಕಾ ಮಂತ್ರಿ ಸಮ್ಮುಖದಲ್ಲಿ)
   ''ಕನ್ನಡ ಉದಯಗಾನ ಕೋಗಿಲೆ''
9. ಕನ್ನಡ ಕ್ರಾಂತಿ ದಳ 18-11-79
   ಕುವೆಂಪು ಅವರ ನಿವಾಸದಲ್ಲಿ ಸನ್ಮಾನಿಸಿದಾಗ- 'ಗಾಯನ ಕಂಠೀರವ'
10. K.L.E-ಎಸ್. ನಿಜಲಿಂಗಪ್ಪ ಮಹಾವಿದ್ಯಾಲಯ ರಾಜಾಜಿನಗರ, ಬೆಂಗಳೂರು, 27-11-1780, 'ಸಂಗೀತ ರಸ ವಿಹಾರಿ'
11. ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಕ್ರಿಯಾ ಸಮಿತಿ, ಬೆಂಗಳೂರು 25-11-1979 ಗಾನ ಚಕ್ರವರ್ತಿ
12. ಶ್ರೀ ಸರಸ್ವತಿ ಸೇವಾ ಮಂಡಲಿ (ರಿ) ಸಂಪಂಗಿರಾಮನಗರ, ಬೆಂಗಳೂರು, 14-9-1980.

ಸುಗಮ ಸಂಗೀತದ ಪಯಣದಲ್ಲಿ

ರಾಯರು ಮಹಾರಾಜನಂತೆ ರಾಜ್ಯಭಾರ ಮಾಡಿದರು.

ಶಾಸ್ತ್ರೀಯ ಸಂಗೀತ ಪ್ರಬಲವಾಗಿದ್ದ ದಿನಗಳಲ್ಲಿ ಕಾಳಿಂಗರಾಯರು

ಸುಗಮ ಸಂಗೀತದ ಕಹಳೆಯನ್ನೂದಿ ಒಂದು ಪ್ರಚಂಡ

ಕ್ರಾಂತಿಯನ್ನೇ ಎಬ್ಬಿಸಿದರು. ಕಿಕ್ಕಿರಿದು ಸೇರುತ್ತಿದ್ದ ಜನಸಾಗರಕ್ಕೆ

ಕಾಳಿಂಗ ರಾಯರ ಸುಗಮ ಸಂಗೀತ ಕಾರ್ಯಕ್ರಮವನ್ನು

ಕೇಳುವುದೇ ಒಂದು ಹಬ್ಬವಾಗಿತ್ತು.

